
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

15 ಜೂನ್ 2016 ಪುಟ 20 ರೂ. 15/-



ಅದಮ್ಯ ಚೇತನದ ದೇಜಗೌ



ಮಿನಿಸ್ಟರ್ ಚಾರ್ವಾಕ


ನರೇಶ್ ಶೆಣೈ ಪಾಕ್‌ಗೆ ಪರಾರಿ?





ದಾವಣಗೆರೆ

ಬಿಜೆಪಿಗಳ ಡಿಶುಂ ಡಿಶುಂ ಹಿಂದೆ ಯಡ್ಡಿ ದುಶ್ಮನಿ





ಮಂಡ್ಯ


ಮುರಿದುಬಿತ್ತು ಕುಮ್ಮಿ-ಚೆಲ್ವಿ ಲವ್ವಿಡವ್ವಿ





ಕಾರವಾರ

ಡಿಸಿ ಉಜ್ವಲ್ ದಾದಾಗಿರಿ




ಕೊಡಗು

ನಾಚಪ್ಪನ ಐಲುಪೈಲಾಟಗಳು

ಶಾಸಕ ಗೋಪಾಲ್ ಪೂಜಾರಿಯ ಬಾರೀ ಗೋಲ್‌ಮಾಲ್!



ಮೋದಿ ಕಾಲದ ಮಾಧ್ಯಮಗಳಲ್ಲಿ ಜೆಎನ್‌ಯು ನಂತರದ ಬದಲಾವಣೆ ಏನ



ಮಾಧ್ಯಮಗಳನ್ನು ಸೂಕ್ಷ್ಮವಾಗಿ ಗಮನಿಸುವ ಎಲ್ಲರಿಗೂ ಕಳೆದ 3 ವರ್ಷಗಳಲ್ಲಿ ಒಂದು ವಿಷಯ ಸ್ಪಷ್ಟವಾಗುತ್ತಾ ಬಂದಿತ್ತು, ಬಹುತೇಕ ಮಾಧ್ಯಮಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಟೊಂಕಕಟ್ಟಿ ನಿಂತಿವೆ ಮತ್ತು ಮೋದಿಯ ಪರವಾಗಿ ಬ್ಯಾಟಿಂಗ್ ಮಾಡುತ್ತಿವೆ ಎಂಬ ನಿಲುವಿಗೆ ಬರಲು, ಹೆಚ್ಚೇನೂ ಶ್ರಮದ ಅಗತ್ಯವಿರಲಿಲ್ಲ. ಅಷ್ಟು ಸ್ಪಷ್ಟವಾಗಿ ಅವು ತಮ್ಮ ನಿಲುವುಗಳನ್ನು ಮುಂದಿಟ್ಟಿದ್ದವು. ಕೆಲವು ಯಾರ ಪರವಾಗಿಯೂ ಇಲ್ಲ ಎಂಬಂತೆ ತೋರಿಸಿಕೊಂಡ ವಾದರೂ, ಅವೂ ಕಾಂಗ್ರೆಸ್ ಪಕ್ಷದ ಪರ ಮಾತ್ರ ಮಾತನಾಡು ತ್ತಿರಲಿಲ್ಲ. ಆ ರೀತಿ ಕಾಂಗ್ರೆಸ್ ಪಕ್ಷದ ಪರವಾಗಿ ಇರಬೇಕಾದ ಅಗತ್ಯವೂ ಇರಲಿಲ್ಲ. ದೇಶದ ಇವತ್ತಿನ ಸ್ಥಿತಿಗೆ ಅತೀಹೆಚ್ಚು ಕಾರಣಕರ್ತ ಪಕ್ಷ ಎಂದು ಯಾವುದನ್ನಾದರೂ ಬೆರಳು ಮಾಡಿ ತೋರಿಸಬೇಕಿದ್ದರೆ, ಅದು ಕಾಂಗ್ರೆಸ್ಸೇ ಆಗಿದೆ. ಆದರೆ, ಬಿಜೆಪಿ ಮತ್ತು ಮೋದಿಗೆ ಪ್ರಿಯವಲ್ಲದ ಪ್ರಶ್ನೆಗಳನ್ನು ಕೇಳಬಾರದು ಎಂದು ಮಾಧ್ಯಮಗಳು ನಿರ್ಧರಿಸಿದ್ದದ್ದು ಮಾತ್ರ ಎದ್ದು ಕಾಣುತ್ತಿತ್ತು.

ಹೀಗಿರುವಾಗ, 'ಜೆಎನ್‌ಯು' ಸಂಭವಿಸಿತು. ಕನ್ಹಯ್ಯ ಕುಮಾರನೆಂಬ ವಿದ್ಯಾರ್ಥಿ ನಾಯಕನನ್ನು ಮೋದಿ ಸರ್ಕಾರವು ಬಂಧಿಸಿದ ರೀತಿ ಹಲವರಲ್ಲಿ ಆಕ್ರೋಶ ಹುಟ್ಟಿಸಿತು. ಆ ಸಂದರ್ಭದಲ್ಲೂ ಕೆಲವು ಮಾಧ್ಯಮಗಳು ಸರ್ಕಾರದ ಜೊತೆಗೆ ನಿರ್ಲಜ್ಜವಾಗಿ ಕೈಜೋಡಿಸಿ, ನಕಲಿ ವಿಡಿಯೋದ ಮೂಲಕ ಹುನ್ನಾರದ ಸಹಭಾಗಿಗಳಾಗಿದ್ದುದು, ಮಾಧ್ಯಮಗಳ ಮೇಲೆಯೇ ಅಪನಂಬಿಕೆ ಬರುವಂತೆ ಆಯಿತು. ಈ ಹಿಂದಿನಂತಲ್ಲದೇ, ಕೆಲವು ಹಿರಿಯ ಪತ್ರಕರ್ತರು ಮತ್ತು ಮಾಧ್ಯಮಗಳು ಬಹಿರಂಗವಾಗಿ ಮೋದಿ ಸರ್ಕಾರದ ವಿರುದ್ಧ ಸಂಘಪರಿವಾರದ ವಿರುದ್ಧ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡರು. ರಾಜ್‌ದೀಪ್ ಸರ್ದೇಸಾಯಿ, ಬರ್ಕಾದತ್ ಮತ್ತು ರವೀಶ್ ಕುಮಾರ್‌ರಂತಹವರು ತಮ್ಮ ಟಿವಿ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲದೇ, ಬಹಿರಂಗವೇದಿಕೆಗಳಲ್ಲೂ ಈ ನಿಲುವನ್ನು ಹೊರಹಾಕಿದರು. ಹುನ್ನಾರದ ಭಾಗವಾಗಿದ್ದ ಜೀ ಟೀವಿಯಿಂದ ಒಬ್ಬ ಪತ್ರಕರ್ತರು ಹೊರಬಂದರು. ಸರ್ಕಾರವೊಂದು ಫ್ಯಾಸಿಸಂನತ್ತ ದೃಢ ಹೆಜ್ಜೆ ಹಾಕುತ್ತಿದೆ ಎಂದಾಗ, ಮಾಧ್ಯಮದ ಒಂದು ವಿಭಾಗ ರಿಸ್ಕ್ ತೆಗೆದುಕೊಂಡು ಸತ್ಯದ ಪರವಾಗಿ ಮಾತಾಡದೇ ಇರದು ಎಂಬ ಭಾವನೆ ಬಂದಿತು.

ಕೇವಲ ಸರ್ಕಾರದ ವಿರುದ್ಧ ಮಾತ್ರವಲ್ಲದೇ, ತಮ್ಮದೇ ಸಹೋದ್ಯೋಗಿಗಳ ವಿರುದ್ಧ ಹೆಸರೆತ್ತಿ ಕಾರ್ಯಕ್ರಮ ಪ್ರಸಾರ ಮಾಡಿದ್ದಂತೂ ಈಚಿನ ದಿನಗಳಲ್ಲಿ ಎಂದೂ ಕಂಡಿರಲಿಲ್ಲ. ಅರ್ನಬ್ ಗೋಸ್ವಾಮಿಯೆಂಬ ಬಾಯಿಬಡುಕನನ್ನು ಕೆಲಕಾಲ ವಿಲನ್ ಮಾಡುವುದರಲ್ಲಿ ಈ ಪತ್ರಕರ್ತರು ಯಶಸ್ವಿಯಾಗಿದ್ದರು. ಆ ನಂತರ ಕನ್ಹಯ್ಯಕುಮಾರ್ ಮತ್ತು ಆತನ ಸಂಗಾತಿಗಳು ಜಾಮೀನು ಪಡೆದುಕೊಂಡು ಜೈಲಿನಿಂದ ಹೊರಬಂದರು. ಹೊರಗೆ ಬಂದು ಅವರು ಮಾಡಿದ ಭಾಷಣವೂ 'ವೈರಲ್' ಆಯಿತು. ಕನಿಷ್ಠ 5 'ರಾಷ್ಟ್ರೀಯ' ಚಾನೆಲ್‌ಗಳು ಆ ಭಾಷಣದ ನೇರ ಪ್ರಸಾರ ಮಾಡಿದವು. ಕನ್ಹಯ್ಯನ ಆಜಾದಿ ಭಾಷಣವನ್ನು ಈ ಮಾಧ್ಯಮಗಳೂ ಸಂಭ್ರಮಿಸಿದವು. 'ಪೂಂಜಿವಾದ್‌ಸೇ ಆಜಾದಿ' (ಬಂಡವಾಳವಾದದಿಂದ ಸ್ವಾತಂತ್ರ್ಯ) ಎಂಬ ಘೋಷಣೆ ಹಾಕಿದ್ದರಲ್ಲಿ ತಪ್ಪೇನಿದೆ ಎಂದು ಬಂಡವಾಳಿಗರ ಹಣದಿಂದಲೇ ನಡೆಯುತ್ತಿದ್ದ ಚಾನೆಲ್‌ಗಳೂ ಕೇಳಿದವು. ಇದು ಗಮನಿಸಬೇಕಾದ ವಿಶಿಷ್ಟ ಬೆಳವಣಿಗೆಯಾಗಿತ್ತು.

ಏಕೆಂದರೆ, ಮೋದಿ ಸರ್ಕಾರದ ಫ್ಯಾಸಿಸ್ಟ್ ನಡವಳಿಕೆಯ ವಿರುದ್ಧ ಮಾತನಾಡಿದ ಬಹುತೇಕ ಪತ್ರಕರ್ತರು, ನಿಜಕ್ಕೂ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಇರುವವರಲ್ಲ. ಈ ಎಲ್ಲಾ ವಿದ್ಯಮಾನ ನಡೆಯುತ್ತಿರುವಾಗಲೇ, ಕೊಲ್ಕೊತ್ತಾದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಇದೇ ಬರ್ಕಾದತ್ 'ತಾನು ಮುಕ್ತ ಮಾರುಕಟ್ಟೆಯ ಪರ' ಎಂದು ಘೋಷಿಸಿದರು. ಕನ್ಹಯ್ಯನನ್ನು ಸಂದರ್ಶಿಸಿದ ರಾಜ್‌ದೀಪ್ ಸರ್ದೇಸಾಯಿ ಕೇಳಿದ ಪ್ರಶ್ನೆಗಳಲ್ಲಿ ಎಡಪಂಥೀಯ ಸಿದ್ಧಾಂತದ ಅಪ್ರಸ್ತುತತೆಯನ್ನು ಒತ್ತಿ ಹೇಳುವ ಪ್ರಶ್ನೆಗಳೂ ಇದ್ದವು. ಅವು ಕೇವಲ ಸಾಂದರ್ಭಿಕ ಪ್ರಶ್ನೆಗಳು ಮಾತ್ರವಾಗಿರದೇ, ಸ್ವತಃ ರಾಜ್‌ದೀಪ್ ಪ್ರಶ್ನೆಗಳೂ ಆಗಿರಬಹುದು. ಇವೆಲ್ಲಾ ಏನೇ ಇರಲಿ, ಒಂದು ಬಿಕ್ಕಟ್ಟಿನ ಸಂದರ್ಭದಲ್ಲಿ ಈ ಮಾಧ್ಯಮಗಳು ಅಷ್ಟರ ಮಟ್ಟಿಗೆ 'ಉದಾರವಾದಿ' ನಿಲುವನ್ನು ಗಟ್ಟಿಯಾಗಿ ಹೇಳಿದ್ದು, ಒಂದು ಸಕಾರಾತ್ಮಕ ಸಂಗತಿಯೇ ಆಗಿತ್ತು.

ಆದರೆ, ಇದೆಲ್ಲವೂ ನಮ್ಮನ್ನು ನಿರಾಳವಾಗಿಸಲು ಸಾಧ್ಯವೇ? ಖಂಡಿತಾ ಇಲ್ಲ. ಸಾಮಾಜಿಕ ಮಾಧ್ಯಮಗಳೆಂದು ಕರೆಯಲ್ಪಡುವ ಹೊಸ ಮಾಧ್ಯಮದ ಮೇಲೂ ಈಗಾಗಲೇ ಬಲಪಂಥೀಯರು ಅಧಿಪತ್ಯ ಸಾಧಿಸಿದ್ದಾರೆ. ಹೀಗಿರುವಾಗ ಸ್ಥಾಪಿತ ಹಿತಾಸಕ್ತಿಗಳನ್ನು ವಿರೋಧಿಸುವ ಸಂಗತಿಗಳನ್ನು ದೇಶದ ಬಹುಸಂಖ್ಯಾತ ಜನರಿಗೆ ತಲುಪಿಸುವ ಸಾಧನ ಮತ್ತು ಮಾಧ್ಯಮದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಹಾಗಾಗಿ, 'ಮುಖ್ಯವಾಹಿನಿ' ಮಾಧ್ಯಮಗಳಲ್ಲಿ ಕೆಲವು ಒಂದು ಸಂದರ್ಭದಲ್ಲಿ ತೋರಿದ 'ಸತ್ಯಸಂಧತೆ'ಯನ್ನು ನೆಚ್ಚಿಕೊಂಡು ನೆಮ್ಮದಿಯಾಗಿರಲು ಸಾಧ್ಯವಿಲ್ಲ.

ಇದನ್ನು ಮತ್ತೂ ದೃಢವಾಗಿ ಹೇಳಲು ಹಾಗೂ ಈ ಸಂದರ್ಭದಲ್ಲಿ ಎಲ್ಲರ ಗಮನಕ್ಕೆ ತರಬೇಕೆಂದುಕೊಳ್ಳಲು ಇನ್ನೂ ಒಂದು ಕಾರಣವಿದೆ. ಈಚೆಗೆ 5 ರಾಜ್ಯಗಳಲ್ಲಿ ನಡೆದ ಚುನಾವಣಾ ಫಲಿತಾಂಶವನ್ನು ಮಾಧ್ಯಮಗಳು ಬಿಂಬಿಸಿದ ರೀತಿ ಮತ್ತು ಮೋದಿ ಸರ್ಕಾರವು ಎರಡು ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಈ ಮುಖ್ಯವಾಹಿನಿ ಮಾಧ್ಯಮಗಳು ಅದಕ್ಕೆ ಪ್ರತಿಕ್ರಿಯಿಸಿದ ರೀತಿ ನಿಜಕ್ಕೂ ಆಶ್ಚರ್ಯಕರವಾಗಿತ್ತು. ಅಧಿಕಾರಸ್ಥರಿಗೆ ಬೇಸರ ತರುವ ಪ್ರಶ್ನೆಗಳನ್ನು ಕೇಳಲೇಬಾರದೆಂದು ಅವು ನಿರ್ಧರಿಸಿದಂತಿತ್ತು. ಈ ಐದು ರಾಜ್ಯಗಳ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ಅಸ್ಸಾಂನಲ್ಲಿ ಮಾತ್ರ. ಅಸ್ಸಾಂನಲ್ಲೂ ಬಿಜೆಪಿಯ ನೇತೃತ್ವದ ಮೈತ್ರಿಕೂಟ ಅಧಿಕಾರಕ್ಕೆ ಬಂದಿತು ಮತ್ತು ಬಿಜೆಪಿ ಪಡೆದುಕೊಂಡಷ್ಟೇ ಸೀಟುಗಳನ್ನು ಅದರ ಮಿತ್ರ ಪಕ್ಷಗಳೂ ಪಡೆದುಕೊಂಡಿದ್ದವು. ಆದರೆ, ಈಶಾನ್ಯ ರಾಜ್ಯಗಳಲ್ಲಿ ಇದುವರೆಗೆ ಅದು ಎಲ್ಲೂ ಅಧಿಕಾರಕ್ಕೆ ಬಂದಿರಲಿಲ್ಲ ಮತ್ತು ಇನ್ನು ಉಳಿದ ನಾಲ್ಕರ ಪೈಕಿ ಎರಡು ರಾಜ್ಯಗಳಲ್ಲಿ (ಪ.ಬಂಗಾಳ ಮತ್ತು ಕೇರಳ) ಅದರ ಸಾಧನೆ ಹಿಂದಿಗಿಂತ ಚೆನ್ನಾಗಿತ್ತು. ಆದರೆ, ಇದು ಭಾರೀ ದೊಡ್ಡ ಸಾಧನೆ ಏನಾಗಿರಲಿಲ್ಲ. ಅಸ್ಸಾಂನಲ್ಲಿ 15 ವರ್ಷಗಳ ಸತತವಾಗಿ ಅಧಿಕಾರ ನಡೆಸಿದ್ದ ಕಾಂಗ್ರೆಸ್ ಈ ಸಾರಿ ಸೋಲುವುದು ಖಚಿತವಾಗಿತ್ತು. ಅಲ್ಲಿ ಮತ್ತು ಕೇರಳದಲ್ಲಿ ಬಿಜೆಪಿಯ 'ಸಾಧನೆ'ಯ ಹಿಂದೆ ಕೋಮು ಧ್ರುವೀಕರಣದ ಅಂಶ ಸಾಕಷ್ಟು ಕೆಲಸ ಮಾಡಿತ್ತು. ಆದರೂ, ಮೂಲ ಸಂಘಪರಿವಾರದವರಲ್ಲದ ಸ್ಥಳೀಯ ಸಿಎಂ ಅಭ್ಯರ್ಥಿಯ ಗೆಲುವು ಎಂದು ಮಾಧ್ಯಮಗಳು ಬಿಂಬಿಸಲು ಯತ್ನಿಸಿದವು.



ಅಸ್ಸಾಂನಲ್ಲಿ ಕೆಲವೇ ಸಮಯದ ಹಿಂದೆ (ಕಳೆದ ಲೋಕಸಭಾ ಚುನಾವಣೆಯ ಹಿಂದುಮುಂದಿನಲ್ಲಿ) ನೂರಾರು ಹತ್ಯೆಗಳಿಗೆ ಕಾರಣವಾದ ಕೋಮುಗಲಭೆ ಆಗಿತ್ತೆಂಬುದನ್ನು ಎಲ್ಲರೂ ಮರೆತರು. ಬಾಂಗ್ಲಾ ವಲಸಿಗರ ವಿಚಾರ ಮುಂದಿಟ್ಟುಕೊಂಡು ದೇಶಾದ್ಯಂತ ಬಿಜೆಪಿ ಮುಸ್ಲಿಮರನ್ನು ಗುರಿ ಮಾಡಲು ಯತ್ನಿಸುತ್ತಾ ಇದೆ ಎಂಬುದನ್ನು ಮರೆತರು. ಇದು ಮೋದಿ-ಅಮಿತ್ ಷಾ ಜೋಡಿಯು ಸ್ಥಳೀಯ ನಾಯಕನನ್ನು ಮತ್ತು ಅಭಿವೃದ್ಧಿ ಅಜೆಂಡಾವನ್ನು ಮುಂದಿಟ್ಟುದುದರಿಂದ ಸಾಧಿಸಿದ ಗೆಲುವು ಎಂಬಂತೆ ಬಿಂಬಿಸಲಾಯಿತು. ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ಉತ್ತರ ಪ್ರದೇಶದ ಮುಜಫರ್‌ನಗರದಲ್ಲಿ ಸಂಘಪರಿವಾರವು ಅಮಿತ್ ಷಾ ನೇತೃತ್ವದಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಸಿದ ಗಲಭೆಯು ಹೆಚ್ಚುಕಡಿಮೆ ಗುಜರಾತ್‌ನ ನರಮೇಧದಷ್ಟೇ ಅಪಾಯಕಾರಿ ಕೃತ್ಯವಾಗಿತ್ತು. ಆ ನಂತರದ ಚುನಾವಣೆಯಲ್ಲಿ ಉ.ಪ್ರ.ದಲ್ಲಿ ಬಿಜೆಪಿಯದ್ದು ಶೇ.90ರಷ್ಟು ಗೆಲುವಾಗಿತ್ತು. ಆ ಕೋಮುದ್ವೇಷ ಆರುತ್ತಿದ್ದಂತೆ, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಎರಡನೆಯ ಸ್ಥಾನಕ್ಕೆ ಬರಲೂ ಬಿಜೆಪಿ ತಿಣುಕುವ ಸನ್ನಿವೇಶ ಇಂದಿಗೂ ಮುಂದುವರೆದಿದೆ. (ಇನ್ನೊಂದು ಕೋಮುಗಲಭೆ ಇದನ್ನು ಬದಲಿಸುವ ಸಾಧ್ಯತೆ ಇದ್ದೇ ಇದೆ).


ಕೇರಳದಲ್ಲಿ ಸಿಪಿಎಂ ಪಕ್ಷವೂ ಹಿಂಸಾತ್ಮಕವಾದ ಗಲಭೆ ಮತ್ತು ಹತ್ಯೆಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿರುವುದು ಸುಳ್ಳಲ್ಲ. ಬಿಜೆಪಿಯೂ ಅದನ್ನೇ ಅಲ್ಲಿ ಮಾಡುತ್ತಿದೆ ಮತ್ತು ಕೋಮುದ್ವೇಷ ಹಾಗೂ ಧ್ರುವೀಕರಣದ ಮೂಲಕ ಒಂದಾದರೂ ಗೆಲುವು ಸಾಧಿಸಬೇಕೆಂದು ಪ್ರಯತ್ನ ಪಡುತ್ತಿದೆ. ಒಟ್ಟು ಸನ್ನಿವೇಶದ ಈ ಪ್ರಮುಖ ಸಂಗತಿಯನ್ನು ಮರೆತುಬಿಟ್ಟಂತೆ ಮಾಧ್ಯಮಗಳು ಆಡಿದ್ದು ಹೇಗೆ ಮತ್ತು ಯಾಕೆ?


ಅದೇರೀತಿ ಮೋದಿ ಸರ್ಕಾರದ ಎರಡು ವರ್ಷದ ಸಂದರ್ಭದಲ್ಲಿ ಮಾಧ್ಯಮಗಳ ನಡವಳಿಕೆಯನ್ನೂ ಗಮನಿಸಿ. ಈ ಸರ್ಕಾರವು 'ಅಭಿವೃದ್ಧಿಯ ಅಜೆಂಡಾ'ದ ಮೇಲೆ ನಡೆಯುತ್ತಿರುವ ಸರ್ಕಾರ ಎಂದು, ಅದ ಊದಿದ ತುತ್ತೂರಿಯನ್ನು ಪ್ರತಿಧ್ವನಿಸುವ ಬಹುಪಾಲು ಮಾಧ್ಯಮಗಳು ಮಾಡಿದವು ಕಳಿಸಿಕೊಟ್ಟ ವಕ್ತಾರರು (ಅರುಣ್ ಸಂದರ್ಶನವನ್ನು 3 ಪ್ರಮುಖ ಚಾ ಬಿತ್ತರಿಸಿದವು) ಹೇಳಿದ್ದನ್ನೇ ಪುನರುಚ್ಚರಿಸಿದವು ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಈ ಇದ್ದುದರಲ್ಲಿ ಉತ್ತಮ ಸಾಧನೆಯನ್ನೇ ಎಂಬುದು ಅವರ ಅಂಬೋಣವಾಗಿತ್ತು. ಆ ಸಂಗತಿಯೆಂದರೆ, ಅಂಬಾನಿ ಒಡೆತನದ ಸಿ ಚಾನೆಲ್, ಸರ್ಕಾರದ ವಿರುದ್ಧ ಕಾರ್ಯಕ್ರಮ ಬಹುಶಃ ಮೋದಿ ತನಗಿಂತಲೂ ಅದಾನಿಗೆ ಆಪ್ತರು ಎಂಬ ಸಿಟ್ಟೂ ಇರಬಹುದೇನೋ

ದೇಶದ ಜನತೆಯ ವಿರುದ್ಧ ಸರ್ಕಾರದ ಬ ನೀತಿಗಳಿರುವುದು ಮತ್ತು ಅವರ ಬದುಕಿನ ಅಡಿಪಾಯಕ್ಕೇ ಮೋದಿ ಸರ್ಕಾರ ಕೈ ಹಾಕುತ್ತಿ ಬಗ್ಗೆ ಮಾಧ್ಯಮಗಳಿಗೆ ಗೊತ್ತಾಗುತ್ತಿಲ್ಲವೇ? ತಮ್ಮ ಸ್ವಾತಂತ್ರ್ಯಕ್ಕೆ ಕೈ ಹಾಕಬಹುದು ಅಥವಾ ಮಧ್ಯ ಮೇಲೆ ದಾಳಿ ನಡೆಯಬಹುದು ಎಂದಾಗ ಕಾರ್ಪೊರೇಟ್ ಪತ್ರಕರ್ತರೂ ಸಹ ಪ್ರಜಾಪ್ರ ಗಳಾಗಿ ಬಿಡುತ್ತಾರೆ. ದೇಶದ ಸಾರ್ವಭೌಮತೆಯ ಮಾತನಾಡುವ ಇದೇ ಸರ್ಕಾರವು ರಕ್ಷಣಾ ವಲ ವಿದೇಶೀ ನೇರ ಹೂಡಿಕೆಗೆ ಅವಕಾಶ ಮಾಡಿಕೊ ದೆಸೆಯಿಂದ, ಇಂದು ಶಸ್ತ್ರಾಸ್ತ್ರ ತಯಾರಿಕೆಗೆ ಖಾಸಗಿ ಇಳಿದಿದ್ದಾರೆ ಎಂಬುದು ಕನಿಷ್ಠ ರಾಷ್ಟ್ರೀಯ ಅಂಶವಾಗಿಯೂ ಕಾಣುವುದಿಲ್ಲ. ಭೂಸ್ವಾಧೀನ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ ತಿದ್ದುಪಡಿ ಹೊರಟಿದ್ದು, ಪ್ರಜಾತಂತ್ರದ ಮೇಲೆ ಮಾಡಿದ ಆಕ್ರಮ ಕಾಣಲಿಲ್ಲ. ತನ್ನದೇ ಭರವಸೆಗಳಿಂದ ಮೋದಿ ಸ ನೂರಾರು ಯೂ-ಟರ್ನ್ ಹೊಡೆದದ್ದು ವಿಶ್ವಾಸದ್ರೋ ಕಾಣುವುದಿಲ್ಲ. ನೀವು ದೇಶದ ಅಭಿವೃದ್ಧಿಯ ಮಾತನಾಡುತ್ತಾ, ಕಾರ್ಪೊರೇಟ್ ಕಂಪೆನಿಗಳ ಪರ ನೀ ತರುತ್ತಾ ಹೋದಂತೆಲ್ಲಾ ಪತ್ರಕರ್ತರಿಗೆ ಯಾವ ಸಮ ಕಾಣುವುದಿಲ್ಲ.

ಬಹುಶಃ ಕಾಂಗ್ರೆಸ್ ತನ್ನ ನೆಲೆ ಕಳೆದುಕೊ ಹೋದಂತೆ ಮತ್ತು ಪ್ರಾದೇಶಿಕ ಪಕ್ಷಗಳು ಸಾಧಿಸುತ್ತಿದ್ದಂತೆ ಮಾಧ್ಯಮಗಳಿಗೆ ಸುರಕ್ಷಿತ ನೆಲೆ ಬಂಡವಾಳಿಗ ಕಂಪೆನಿಗಳು ನಿರಾಳವಾಗಿ ಹೊಡೆಯುತ್ತಾ ಇದ್ದರೆ ದೇಶ ಸುಭದ್ರವಾಗಿದ್ದಂತೆ ಜೊತೆಗೆ ಮಧ್ಯಮ ವರ್ಗವನ್ನು ಸ್ವಲ್ಪ ಸ್ವಲ್ಪ ಪೋ ಹೋಗಬೇಕು ಅಷ್ಟೇ. ಹಾಗಿದ್ದರೆ, ಈ ಫ್ಯಾಸಿಸಂ ಅ ಅಪಾಯಕಾರಿಯಲ್ಲ. ಪರವಾಗಿಲ್ಲ, ಪರವಾಗಿಲ್ಲ. ಪತ್ರಿಕಾ ಮಾಧ್ಯಮ ಇರುವವರೆಗೆ ಏನೂ ಸಮ ಈ ದೇಶದ ಬಹುತ್ವ, ಪ್ರಜಾಪ್ರಭುತ್ವವನ್ನು ಯಾರು ಮಾಡಲು ಸಾಧ್ಯವಿಲ್ಲ ಎಂದು ನಂಬಿಸಲು ಪ್ರಯತ್ನ ಇರುತ್ತಾರೆ.

ಜೆಎನ್‌ಯು ನಂತರ ನಮ್ಮ ಮಾಧ್ಯಮಗ ಬದಲಾಗಲಿಲ್ಲ. ಜನಪರವಾದ ಮಾಧ್ಯಮವನ್ನು ಸಾಮಾನ್ಯ ಜನರ ಹಿತಾಸಕ್ತಿಗೆ ಸಂಬಂಧಿಸಿದ ಸಂಗ ಅವರಿಗೆ ನೇರವಾಗಿ ತಲುಪಿಸಲು ಬೇಕಾದ ವ್ಯವ ಮಾಡಿಕೊಳ್ಳಬೇಕಿದೆ. ದೇಶದ ಬಹುಸಂಖ್ಯಾತರಿಗೆ ತಲುಪುವ ಮಾಧ್ಯಮವನ್ನು ನಾವು ಕಂಡುಕೊ ಸಾಧ್ಯವಾದರೆ ಮಾತ್ರ ಅದು ಪರಿಣಾಮಕಾರಿ ಪರ್ಯಾ ಮಾಧ್ಯಮವೆನಿಸಿಕೊಳ್ಳುತ್ತದೆ. ಜೆಎನ್‌ಯು ಸಂದ ಮಾಧ್ಯಮಗಳ ಒಂದು ವಿಭಾಗದಲ್ಲಿ ಕಂಡ ಬದಲಾವಣೆಯಷ್ಟರಿಂದ ನಾವು ಮೈಮರೆಯುವ





ಶಾ ಬಾನೊಗೆ ಸಿಗದ ನ್ಯಾಯ ಶಯರಾ ಬಾನೊಗೆ ಸಿಗಲಿ


ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಶಯರಾ ಬಾನೊ ಎಂಬ ಮಹಿಳೆಯು ಒಮ್ಮೆಗೆ ಮೂರು ಬಾರಿ ತಲಾಖ್ ಹೇಳಿ ಮುಸ್ಲಿಂ ಗಂಡನೊಬ್ಬ ತನ್ನ ಹೆಂಡತಿಗೆ ಅನ್ಯಾಯ ಮಾಡುವ ಕ್ರಮವನ್ನು ಪ್ರಶ್ನಿಸಿ ಸುಪ್ರೀಂಕೋರ್ಟಿನ ಮೆಟ್ಟಿಲೇರುವ ಮೂಲಕ ದೇಶಾದ್ಯಂತ ಸುದ್ದಿ ಆಗಿದ್ದಾಳೆ. ಅಷ್ಟೇ ಅಲ್ಲ ಮುಸಲ್ಮಾನರಲ್ಲಿ ಹೆಂಡತಿಯೊಬ್ಬಳು ತನ್ನ ಮಾಜಿ ಗಂಡನಿಗೆ ಹಿಂದಿರುಗ ಬಯಸಿದರೆ ಆಕೆ ಮತ್ತೊಬ್ಬನನ್ನು ವಿವಾಹವಾಗಿ ಆತನಿಂದ ವಿಚ್ಛೇದನ ಪಡೆಯಬೇಕು ಎಂಬ ಕ್ರಮವನ್ನೂ ರದ್ದು ಮಾಡಬೇಕೆಂದು ಕೋರಿದ್ದಾಳೆ. ಇನ್ನು ಮುಸ್ಲಿಂ ಸಮುದಾಯದಲ್ಲಿ ಬಹುಪತ್ನಿತ್ವವನ್ನು ತಡೆಯಬೇಕೆಂದೂ ಆಕೆ ಮನವಿ ಮಾಡಿಕೊಂಡಿದ್ದಾಳೆ. ಇದೆಲ್ಲದರಿಂದಾಗಿ ಸಂಪ್ರದಾಯಸ್ಥ ಮುಸಲ್ಮಾನ್ ಪುರುಷರು ಶಯರಾ ಬಾನೊ ವಿರುದ್ಧ ನಖಶಿಖಾಂತ ಉರಿಯುತ್ತಿದ್ದಾರೆ. ಯಾವುದೇ ಕಾರಣಕ್ಕೂ ಶಯರಾ ಬಾನೊ ಕೇಳಿರುವ ಸುಧಾರಣೆಗಳನ್ನು ಜಾರಿಗೆ ತರಲು ಬಿಡುವುದಿಲ್ಲ ಎಂದು ಕೆಂಡಕಾರುತ್ತಿದ್ದಾರೆ.

ಮೂವತ್ತು ವರ್ಷಗಳ ಹಿಂದೆ ಶಾ ಬಾನೊ ಎಂಬ ಮತ್ತೋರ್ವ ಮಹಿಳೆ ಈಗಿನ ಶಯರಾ ಬಾನೊಳಂತೆ ಸುಪ್ರೀಂಕೋರ್ಟ್ ಮೊರೆ ಹೋಗಿದ್ದಳು. ಐವರು ಮಕ್ಕಳ ತಾಯಿಯಾಗಿದ್ದ ಶಾ ಬಾನೊಳನ್ನು ಆಕೆಯ ಗಂಡ ತೊರೆದಿದ್ದನಲ್ಲದೆ ಆಕೆಗೆ ಜೀವನಾಂಶ ಕೊಡಲು ನಿರಾಕರಿಸಿದ್ದ. ಆಗ ಸುಪ್ರೀಂಕೋರ್ಟ್ ಶಾ ಬಾನೊಳ ಪರ ತೀರ್ಪು ನೀಡಿತ್ತು. ಆದರೆ ಕಟ್ಟರ್ ಮುಸಲ್ಮಾನರು ಶಾ ಬಾನೊ ತರಹದ ಅಸಹಾಯಕ ಮಹಿಳೆಯರ ಪರ ನಿಲ್ಲುವ ಬದಲು "ನಮ್ಮ ಕುರ್‌ಆನ್‌ನಲ್ಲಿ ಮಾಜಿ



ಹೆಂಡತಿಗೆ ಜೀವನಾಂಶ ಕೊಡಬೇಕೆಂದು ಹೇಳಿಲ್ಲ. ಆದ್ದರಿಂದ ನಿಮ್ಮ ಕೋರ್ಟು ಹೀಗೆಲ್ಲ ನಮಗೆ ಆದೇಶಿಸಲು ಬರುವುದಿಲ್ಲ" ಎಂದು ವಾದಿಸಿದ್ದರು.

ಆಗತಾನೇ ಬಾಬ್ರಿ ಮಸೀದಿಯ ಬಾಗಿಲುಗಳನ್ನು ತೆರೆದು ಅಲ್ಲಿ ಅಕ್ರಮವಾಗಿ ಇಟ್ಟಿದ್ದ ರಾಮನ ಪ್ರತಿಮೆಗೆ ಪೂಜೆ ಮಾಡಲು ಕೋಮುವಾದಿ ಹಿಂದೂ ಸಂಘಟನೆಗಳಿಗೆ ಅನುವು ಮಾಡಿಕೊಟ್ಟಿದ್ದ ಆಗಿನ ಪ್ರಧಾನಿ ರಾಜೀವ್ ಗಾಂಧಿ ಮುಸಲ್ಮಾನ ಸಮುದಾಯದ ಆಕ್ರೋಶಕ್ಕೆ ಗುರಿಯಾಗಿದ್ದರು. ಆದ್ದರಿಂದ ಆ ಸಮುದಾಯದ ಕಟ್ಟರ್‌ವಾದಿ ಪುರುಷರನ್ನು ಓಲೈಸಿಕೊಳ್ಳಲು ರಾಜೀವ್ ಗಾಂಧಿ ಸುಪ್ರೀಂಕೋರ್ಟ್‌ನ ತೀರ್ಪನ್ನೇ ರದ್ದುಗೊಳಿಸಿ ಮುಸ್ಲಿಂ ಮಹಿಳೆಯರಿಗೆ ಅನ್ಯಾಯವೆಸಗಿದ್ದರು. ಈಗ ಹೇಳಿಕೇಳಿ ಮುಸಲ್ಮಾನರನ್ನು ಅಪಾರವಾಗಿ ದ್ವೇಷಿಸುವ ನರೇಂದ್ರ ಮೋದಿ ಪ್ರಧಾನಿ ಆಗಿದ್ದಾನೆ. ಹೀಗಿರುವಾಗ ಶಯರಾ ಬಾನೊಗೆ ನ್ಯಾಯ ಎಂಬುದು ಮರೀಚಿಕೆ ಆಗಲಿದೆ ಎಂದು ಈಗಲೇ ಭವಿಷ್ಯ ನುಡಿಯಬಹುದು.

ಇತರೆ ಸ್ಥಾಪಿತ ಧರ್ಮಗಳಿಗೆ ಹೋಲಿಸಿದರೆ ಇಸ್ಲಾಂ ಕೊಂಚಮಟ್ಟಿಗೆ ಮಹಿಳೆಯರ ಪರ ನಿಲುವನ್ನು ಹೊಂದಿರುವ ಧರ್ಮ. ಆ ಧರ್ಮದಲ್ಲಿ ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯ ಮೇಲೆ - ಅದು ಗಂಡುಮಕ್ಕಳಿಗಿಂತ ಕಡಿಮೆ ಪ್ರಮಾಣದ್ದಾಗಿದ್ದರೂ - ಹಕ್ಕು ಇದೆ. ಹಾಗೆಯೇ ಅದರಲ್ಲಿ ಬಹುಪತ್ನಿತ್ವ ಇರುವುದು ಪುರುಷ ಪೈಗಂಬರರು ತಮ್ಮ ಲೈಂಗಿಕಲಾಲಸೆಯನ್ನು ತೀರಿಸಿಕೊಳ್ಳುವುದಕ್ಕಲ್ಲ, ಬದಲಾಗಿ ನಿರಾಶ್ರಿತ ಮತ್ತು ಅಸಹಾಯಕ ಮಹಿಳೆಯರಿಗೆ ನೆರವು ನೀಡಲು ಎಂಬ ಉದ್ದೇಶದಿಂದ. ಸ್ವತಃ ಪೈಗಂಬರರು ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡಿದರೆ ಅದು ತಮ್ಮ ಮಗಳಿಗೆ ಅನ್ಯಾಯ ಮಾಡಿದಂತೆ ಎಂದು ತಮ್ಮ ಅನುಯಾಯಿಗಳನ್ನು ಎಚ್ಚರಿಸಿದ್ದರು. ಆದರೇನಂತೆ,



ಇವತ್ತು ಹಲವು ಮುಸಲ್ಮಾನ ಪುರುಷರು ಕುರ್‌ಆನ್‌ನಲ್ಲಿರುವ ಆಶೆಗಳನ್ನು ತೊರೆದು ಅದರಲ್ಲಿನ ಪದಗಳಿಗೆ ಒತ್ತುಕೊಟ್ಟು ಮಹಿಳೆಯರನ್ನು ಶೋಷಿಸುತ್ತಿದ್ದಾರೆ, ತಮಗೆ ಬೇಕಾದಂತೆ ಅದರಲ್ಲಿರುವ ಅಂಶಗಳನ್ನು ತಿರುಚಿ ತಮ್ಮ ಹೆಂಡತಿಯರಿಗೆ ಅನ್ಯಾಯವೆಸಗುತ್ತಿದ್ದಾರೆ. ಅಂತಹವುಗಳಲ್ಲಿ ಈ 'ಟ್ರಿಪಲ್ ತಲಾಖ್' ಎಂಬುದು ಪ್ರಮುಖವಾದದ್ದು.

ವಾಸ್ತವವಾಗಿ ಪುರುಷನು ಹೆಂಡತಿಯಿಂದ ವಿಚ್ಛೇದನ ಬಯಸಿದರೆ ಅದಕ್ಕೆ ಕುರ್‌ಆನ್‌ನಲ್ಲಿ ಉಲ್ಲೇಖಿಸಿರುವ ಹಲವು ನಿಯಮಗಳನ್ನು ಪಾಲಿಸಬೇಕು. ಅವುಗಳು ಏನೆಂದರೆ ಮೊದಲ ಬಾರಿ ತಲಾಖ್ ಎಂದ ಮೇಲೆಯೂ ಒಂದು ತಿಂಗಳ ಕಾಲ ಗಂಡ ಮತ್ತು ಹೆಂಡತಿ ಜೊತೆಯಾಗಿಯೇ ಜೀವಿಸಬೇಕು. ಈ ನಿಯಮ ಯಾಕೆಂದರೆ, ಅಕಸ್ಮಾತ್ ಗಂಡ ಕೋಪದ ಆವೇಶದಲ್ಲಿ ತಲಾಖ್ ಎಂದಿದ್ದರೆ ಕೋಪ ಆರಿದನಂತರ ಗಂಡಹೆಂಡತಿ ಒಂದಾಗುವ ಸಾಧ್ಯತೆ ಹೆಚ್ಚಾಗಿಯೇ ಇರುವುದರಿಂದ. ಹಾಗೆ ಜೊತೆಯಾಗಿಯೇ ಇದ್ದ ಒಂದು ತಿಂಗಳ ನಂತರವೂ ವಿಚ್ಛೇದನ ಬಯಸಿದರೆ ಆತ ಎರಡನೆ ಬಾರಿಗೆ ತಲಾಖ್ ಹೇಳಬಹುದು. ಹಾಗೆ ಹೇಳಿದನಂತರವೂ ಗಂಡಹೆಂಡತಿ ಒಂದೇ ಕೊಠಡಿಯಲ್ಲಲ್ಲದಿದ್ದರೂ ಒಂದೇ ಸೂರಿನಡಿ ಬದುಕಬೇಕು. ಹೀಗೆ ಒಂದೇ ಮನೆಯಲ್ಲಿ ಬದುಕಿದ್ದರೂ ಅವರ ನಡುವಿನ ಬಿರುಕು ಮಾಯವಾಗದಿದ್ದರೆ ಆತ ಮೂರನೆ ಬಾರಿಗೆ ತಲಾಖ್ ಎನ್ನಬಹುದು. ಅಂದಹಾಗೆ, ಹೀಗೆ ಮೂರು ಬಾರಿ ತಲಾಖ್ ಹೇಳುವ ಸಂದರ್ಭದಲ್ಲಿ ಸಾಕ್ಷಿಗಳು ಇರಬೇಕು, ಇಲ್ಲವೆಂದರೆ ಕುರ್‌ಆನ್‌ನಲ್ಲಿ ನೀಡಿರುವ ನಿಯಮಗಳ ಉಲ್ಲಂಘನೆ ಆಗುತ್ತದೆ.

ಆದರೆ ಈಗ ವಿಚ್ಛೇದನ ಬಯಸುವ ಬಹುತೇಕ ಮುಸಲ್ಮಾನ ಪುರುಷರು ಒಮ್ಮೆಗೆ ಮೂರು ಬಾರಿ ತಲಾಖ್ ಎಂದು ಹೇಳಿ 'ಹಚ್ಚಾ' ಎಂದು ತಮ್ಮ ಮಡದಿಯರನ್ನು ಓಡಿಸುತ್ತಿದ್ದಾರೆ. ಅಷ್ಟೇ ಅಲ್ಲ ಹಲವೊಮ್ಮೆ ಮೊಬೈಲ್‌ನಲ್ಲಿ ಎಸ್‌ಎಂಎಸ್ ಕಳುಹಿಸುವ ಮೂಲಕವೂ ಕುರ್‌ಆನ್‌ನಲ್ಲಿ ವಿಧಿಸಿರುವ ನಿಯಮಗಳನ್ನು ಉಲ್ಲಂಘಿಸಿ ಮಹಿಳೆಯರನ್ನು ವಂಚಿಸುತ್ತಿದ್ದಾರೆ. ದುರಂತ ಯಾವುದೆಂದರೆ ಹೀಗೆ ಅನ್ಯಾಯಕ್ಕೆ ಗುರಿಯಾದ ಮಹಿಳೆಯರ ಪರ ನಿಲ್ಲುವ ಬದಲು ಮುಸಲ್ಮಾನರ ಧಾರ್ಮಿಕ ಗುರುಗಳೂ ಇಂತಹ ಮೋಸವನ್ನು ಬೆಂಬಲಿಸುತ್ತಿರುವುದು. ಉದಾಹರಣೆಗೆ ಆಲ್ ಇಂಡಿಯಾ ಮುಸ್ಲಿಮ್ ಪರ್ಸನಲ್ ಲಾ ಬೋರ್ಡ್ ಕೂಡ ಶಯರಾ ಬಾನೊ ಅವರ ಮನವಿಯನ್ನು ವಿರೋಧಿಸಿದೆ. "ಕೇಂದ್ರ ಸರ್ಕಾರವಾಗಲಿ ಅಥವಾ ಇನ್ಯಾವುದೋ ಅಧಿಕಾರಸ್ಥ ವಲಯವಾಗಲಿ ಮುಸಲ್ಮಾನರ ಪರ್ಸನಲ್ ಲಾನಲ್ಲಿ ತಲೆ ತೂರಿಸುವಂತಿಲ್ಲ" ಎಂದು ಬೋರ್ಡ್ ಬೆದರಿಸಿದೆ.

ಯಾರು ಈ ಶಯರಾ ಬಾನೊ? ಅವಳ ಅಳಲೇನು?

ಶಯರಾ ಉತ್ತರಾಖಂಡ್ ರಾಜ್ಯದ ಕಾಶಿಪುರ್ ಎಂಬ ಊರಿನವಳು. ಸಮಾಜಶಾಸ್ತ್ರದಲ್ಲಿ ಎಂಎ ಓದಿರುವ ಆಕೆಯನ್ನು 2002ರಲ್ಲಿ ಹೈಸ್ಕೂಲ್ ಮಾತ್ರ ಪಾಸ್ ಮಾಡಿದ್ದ ರಿಜ್ವಾನ್ ಅಹಮದ್ ಎಂಬಾತನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಉತ್ತರ ಪ್ರದೇಶದ ಅಲಹಾಬಾದಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ರಿಜ್ವಾನ್ ಆರಂಭದಿಂದಲೇ ಪತ್ನಿಪೀಡಕನಾಗಿದ್ದ. "ನಿನ್ನ ಅಪ್ಪನಿಂದ ಕಾರ್ ಕೊಡಿಸು, ನಾಲ್ಕೈದು ಲಕ್ಷ ರೂಪಾಯಿ ತರಿಸು" ಎಂದೆಲ್ಲ ರಿಜ್ವಾನ್ ಮತ್ತು ಆತನ ಅಪ್ಪ ಅಮ್ಮ ಒತ್ತಡ ಹೇರುತ್ತಿದ್ದರು. "ನನ್ನ ಅಪ್ಪ ಆಸ್ತಿವಂತರಲ್ಲ ಅಷ್ಟೆಲ್ಲ ಕೊಡಲು. ಮೇಲಾಗಿ ನನಗೆ ಇನ್ನೂ ಇಬ್ಬರು ತಂಗಿಯರಿದ್ದಾರೆ. ಅವರಿಗೂ ಮದುವೆ ಮಾಡಿಸುವ ಜವಾಬ್ದಾರಿ ನನ್ನ ಅಪ್ಪನ ಮೇಲಿತ್ತು" ಎಂದು ಶಯರಾ ತನ್ನ ಬಿಕ್ಕಟ್ಟನ್ನು ತೋಡಿಕೊಳ್ಳುತ್ತಾರೆ.

ಕೋಪಿಷ್ಠನಾದ ರಿಜ್ವಾನ್ ತನ್ನ ಹೆಂಡತಿಯನ್ನು ಮನಸೋಇಚ್ಛೆ ಬಡಿಯುತ್ತಿದ್ದ. ಹದಿನಾಲ್ಕು ವರ್ಷಗಳ ಕಾಲ ಆತನ ಕಿರುಕುಳವನ್ನು ತಡೆದುಕೊಂಡಿದ್ದ ಶಯರಾ ಗಂಡನ ಬಲವಂತಕ್ಕೆ ಆರು ಬಾರಿ ಗರ್ಭಪಾತ ಮಾಡಿಸಿಕೊಂಡಿದ್ದಳು. ಅದೆಲ್ಲದರ ನಡುವೆಯೂ ಆಕೆ ಇಬ್ಬರು ಮಕ್ಕಳ ತಾಯಿ ಆದಳು. ಹೋದವರ್ಷ ಏಪ್ರಿಲ್ ತಿಂಗಳಲ್ಲಿ ಶಯರಾ ತನ್ನ ತವರುಮನೆಗೆ ಹೋಗಿದ್ದಳು. ಆಗ ರಿಜ್ವಾನ್ ಅವಳಿಗೆ ಒಂದು ಟೆಲಿಗ್ರಾಮ್ ಕಳುಹಿಸಿ ತಾನು ಆಕೆಗೆ ತಲಾಖ್ ನೀಡಿರುವುದಾಗಿ ಹೇಳಿದ. ಇದು ಕುರ್‌ಆನ್‌ನಲ್ಲಿನ ನಿಯಮಗಳ ಉಲ್ಲಂಘನೆಯಲ್ಲವೆ ಎಂದು ಶಯರಾ ಹತ್ತಿರದ ಮೌಲ್ವಿಯನ್ನು ಕೇಳಿದರೆ ಆತ "ಈ ತಲಾಖ್ ಸಕ್ರಮವಾಗಿದೆ" ಎಂದೇ ಉತ್ತರಿಸಿದ.

ಅದು ಶಯರಾಳಿಗೆ ಸರಿ ಕಾಣಿಸಲಿಲ್ಲ. "ಇವತ್ತು ಸೌದಿ ಅರೇಬಿಯ, ಪಾಕಿಸ್ತಾನ ಮತ್ತು ಇರಾನ್ ದೇಶಗಳಲ್ಲೂ ಒಮ್ಮೆಗೆ ಮೂರು ಬಾರಿ ತಲಾಖ್ ಹೇಳುವುದನ್ನು ನಿಷೇಧಿಸಲಾಗಿದೆ. ಹಾಗಿರುವಾಗ ಭಾರತದಲ್ಲಿ ಅದನ್ನು ಹೇಗೆ ಮತ್ತು ಯಾಕೆ ಪಾಲಿಸಲಾಗುತ್ತಿದೆ? ನಮ್ಮ ಧಾರ್ಮಿಕ ಮುಖಂಡರು ಮತ್ತು ಮೌಲ್ವಿಗಳು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಜನರನ್ನು ಅಂಧಕಾರದಲ್ಲಿ ಇಟ್ಟು ಇಂತಹ ತಪ್ಪುಗಳಿಗೆ ಪ್ರಚೋದನೆ ನೀಡುತ್ತಿದ್ದಾರೆ. ಇದರಿಂದ ಮಹಿಳೆಯರಿಗೆ ಅನ್ಯಾಯವಾಗುತ್ತಿದೆ" ಎನ್ನುತ್ತಾರೆ 35 ವರ್ಷ ಪ್ರಾಯದ ಶಯರಾ.


ಹೋದವರ್ಷದಿಂದ ಶಯರಾ ತನ್ನ ಪ್ರೀತಿಯ ಮಕ್ಕಳ ಮುಖವನ್ನು ನೋಡುವುದಿರಲಿ, ಅವರೊಂದಿಗೆ ಫೋನ್ ಮೂಲಕ ಮಾತನಾಡಿಸಲೂ ಅವಳ ಕಟುಕ ಗಂಡ ಬಿಟ್ಟಿಲ್ಲ. ಆಕೆಗೆ ನಯಾಪೈಸೆಯ ನೆರವನ್ನು ನೀಡಿಲ್ಲ. ಯಾವ ತಪ್ಪೂ ಮಾಡದ ಶಯರಾಳಿಗೆ ನ್ಯಾಯ ಸಿಗುವುದು ಸರಿಯಲ್ಲವೇ? ಇಸ್ಲಾಮ್ ಧರ್ಮ ಮಹಿಳೆಯರಿಗೆ ಅನ್ಯಾಯ ಮಾಡಬಾರದು ಎಂದು ಪ್ರತಿಪಾದಿಸಿದ್ದರೂ ಶಯರಾಳಿಗೆ ಅನ್ಯಾಯ ಮಾಡುವುದು ಧರ್ಮವಿರೋಧಿ ಕೆಲಸವಲ್ಲವೆ?


ಶಯರಾಳ ಪರವಾಗಿ ಪ್ರಗತಿಪರ ಮುಸಲ್ಮಾನರು ಮತ್ತು ಅಸಂಖ್ಯಾತ ಮುಸ್ಲಿಂ ಮಹಿಳೆಯರು ನಿಂತಿದ್ದಾರೆ. ಅವರಲ್ಲಿ ಕೆಲವರು ಈಗಾಗಲೇ 'ಟ್ರಿಪಲ್ ತಲಾಖ್' ವಿರುದ್ಧ ಸಾವಿರಾರು ಮುಸಲ್ಮಾನ್ ಮಹಿಳೆಯರ ಸಹಿಗಳನ್ನು ಸಂಗ್ರಹಿಸಿದ್ದಾರೆ. "ನನ್ನ ಅರ್ಜಿಯಿಂದಾಗಿ ಮುಂದಾದರೂ ಮುಸ್ಲಿಂ ಮಹಿಳೆಯರಿಗೆ ಅನ್ಯಾಯ ಆಗುವುದು ನಿಂತರೆ ಅಷ್ಟೇ ನನಗೆ ಸಾಕು" ಎನ್ನುತ್ತಾರೆ ಶಯರಾ.

ಮೂರು ದಶಕಗಳ ಹಿಂದೆ ಶಾ ಬಾನೊಗೆ ಸಿಗದಿದ್ದ ನ್ಯಾಯ ಈಗ ಶಯರಾ ಬಾನೊಗಾದರೂ ಸಿಗಲಿ ಎಂಬ ಆಶಯ ಎಲ್ಲಾ ಮಹಿಳಾಪರ ಮತ್ತು ಪ್ರಗತಿಪರವಾದ ಜನರದ್ದಾಗಿದೆ.

ಕಾರವಾರ

ರಸ್ತೆ ಅಗಲೀಕರಣ ಅವಾಂತರವೂ ಡಿಸಿ ಉಜ್ವಲ್ ದಾದಾಗಿರಿಯೂ!


ಡಿಸಿ ಉಜ್ವಲ್‌ಕುಮಾರ್ ಘೋಷ್


ಆರ್.ವಿ. ದೇಶಪಾಂಡೆ

ಸಮುದ್ರನಗರಿ ಕಾರವಾರ ಕಂಗಾಲಾಗಿದೆ! ಈಗ ಕಾರವಾರದಾದ್ಯಂತ ಹಸಿಹಸೀ ಹುಂಬ ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್‌ರ ಹುಚ್ಚಾಟದ್ದೇ ಸುದ್ದಿ-ಚರ್ಚೆ. ಪ್ರಚಾರದ ತೆವಲಿನ ಅಡ್ಡ ಉಮೇದಿಯೋ ಅಥವಾ ಅಧಿಕಾರ ದರ್ಪದ ಪ್ರದರ್ಶನದ ಪರಾಕ್ರಮವೋ, ಒಟ್ಟಿನಲ್ಲಿ ಈ ಡಿಸಿ ಸಾಹೇಬ ಕಾಲಿಟ್ಟಲ್ಲಿ, ಕೈ ಹಾಕಿದ್ದಲ್ಲೆಲ್ಲ ಅವಾಂತರ-ಜನಸಾಮಾನ್ಯರ ಸಂಕಟ ಭುಗಿಲೇಳುತ್ತಿದೆ. ಧಡಪ್ ಶಾಹಿ ಧರತಿಯಲ್ಲಿ ಕಾರವಾರ-ಕೋಡಿಬಾಗ ರಸ್ತೆ ಅಗಲೀಕರಣ ಕಾಮಗಾರಿ ಶುರುವಿಟ್ಟುಕೊಂಡಿರುವ ಡಿಸಿ ಉಜ್ವಲ್ ವಂಧಿಮಾಗಧ ಪತ್ರಿಕೋದ್ಯಮಿ-ಪೊರಕೆ ಪ್ರವೀಣ ವಕೀಲನ ಟೋಳಿಯ ಉಘೇ, ಉಘೇಗೆ ದಾರಿ ತಪ್ಪಿಹೋಗಿದ್ದಾರೆ. ಈ ಹೊಗಳುಭಟ್ಟರ ಪಡೆಯ ಹಿಂದೊಂದು ಅನಾಹುತಕಾರಿ ಲ್ಯಾಂಡ್ ಮಾಫಿಯಾ ಇದೆಯೆಂಬ ಸತ್ಯ ಸಾಕ್ಷಾತ್ಕಾರ ಸದ್ರಿ ಅಪಕ್ವ ಐಎಎಸ್ ಪ್ರಭೃತಿಗಾಗಿಲ್ಲ, ಪಾಪ!

ದುರಂತ ನೋಡಿ, ರಾಜಧಾನಿ ಬೆಂಗಳೂರಿಂದ ಸರಿಸುಮಾರು 500 ಕಿ.ಮೀ. ದೂರದಲ್ಲಿರುವ ಕಾರವಾರದ ಅಳಲು ಆಳುವವರ ಕಿವಿಗೆ ತಲುಪುವುದೇ ಇಲ್ಲ, ಹೀಗಾಗಿ ಕಾರವಾರದಲ್ಲಿ ಅಧಿಕಾರಶಾಹಿಯದ್ದೇ ದರ್ಬಾರು. ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್ ಹೇಳಿದ್ದೇ ಕಾನೂನು; ಆಡಿದ್ದೇ ಆಟ. ನಗರಸಭೆಯ ಅಧಿಕಾರಿ ಗಣದ ಸುಲಿಗೆ-ಸತಾಯಿಸುವಿಕೆಯಂತೂ ಹೇಳತೀರದು. ಇದನ್ನು ತಡೆಯಬೇಕಿದ್ದ ಜಿಲ್ಲಾ ಮಂತ್ರಿ ದೇಶಪಾಂಡೆ ಅದ್ಯಾವುದೋ ಮುಲಾಜಿಗೆ ಒಳಪಟ್ಟಂತೆ ಗಡಿಬಿಡಿಯ ಡಿಸಿ ಬೆನ್ನು ತಟ್ಟುತ್ತಿದ್ದಾರೆ. ಎರಡ್ಮೂರು ಬಾರಿ ಜೈಲಿಗೆ ಹೋಗಿ ಬಂದಿರುವ ಅದಿರುಗಳ್ಳ ಶಾಸಕ ಸತೀಶ್ ಸೈಲ್‌ಗಂತೂ ಡೋಂಟ್ ಕೇರ್ ಡಿಸಿ ಎದುರು ನಿಂತು ಮಾತಾಡುವ ನೈತಿಕತೆಯೇ ಇಲ್ಲದಾಗಿದೆ. ಹೀಗಾಗಿ ಕಾರವಾರ ನಗರವೆಂಬುದು ಸಾಕ್ಷಾತ್ ನರಕದಂತಾಗಿದೆ.

ಕಾರ್ವಾರ್-ಕೋಡಿಬಾಗ್ ರಸ್ತೆ

ಪ್ರಕೃತಿ ಸೊಬಗಿನ ಕಾರವಾರ ಭೌಗೋಳಿಕವಾಗಿ ಪುಟ್ಟ ನಗರ. ಒಂದೆಡೆ ಅರಬ್ಬೀ ಸಮುದ್ರ; ಅದಕ್ಕೆ ಸಮಾನಾಂತರವಾಗಿ ಹಬ್ಬಿರುವ ಸಹ್ಯಾದ್ರಿ ತಪ್ಪಲು. ನಡುವೆ 2.5 ಕಿ.ಮೀಯಿಂದ 3 ಕಿ.ಮೀ ಪರಿಧಿಯ ನಗರ. ನಗರವನ್ನು ಸೀಳಿಕೊಂಡು ಹೋಗಿರುವುದೇ ಕಾರವಾರ-ಕೋಡಿಬಾಗ್ ರಸ್ತೆ. ದಕ್ಷಿಣದ ಕೋಣೆನಾಲಾ (ಇಡೀ ನಗರದ ತ್ಯಾಜ್ಯ-ಮಲಿನ ಹರಿವ ದೊಡ್ಡ ಗಟಾರ)ದಿಂದ ಉತ್ತರದ ಕಾಳಿ ನದಿ ತಟದ ಕೋಡಿಬಾಗದವರೆಗಿನ 3 ಕಿ.ಮೀ ಉದ್ದಕ್ಕೆ ಈ ರಸ್ತೆ ವ್ಯಾಪಿಸಿದೆ. ತಲತಲಾಂತರದಿಂದಲೂ ಕಾರವಾರ-ಕೋಡಿಬಾಗ್ ರಸ್ತೆಯ ಅಗಲ ಆರೂವರೆ ಮೀಟರ್; ಅಕ್ಕ-ಪಕ್ಕದ ಕಾಲುದಾರಿ ಸೇರಿಸಿದರೆ 12 ಮೀ ಅಗಲ.

ಮುಖ್ಯರಸ್ತೆ ಹಾಗು ಕಾಲುದಾರಿಗಳನ್ನು ಬಿಟ್ಟು ಇಕ್ಕೆಲದಲ್ಲಿ ನೂರಾರು ಕುಟುಂಬಗಳು ಮನೆ-ಅಂಗಡಿ ಮುಂಗಟ್ಟು ಕಟ್ಟಿಕೊಂಡು ಅನಾದಿಕಾಲದಿಂದ ಜೀವಿಸುತ್ತಿದ್ದಾರೆ. ಮನೆ-ಅಂಗಡಿ ಮಳಿಗೆಗೆ ಕಾಂಪೌಂಡ್ ಗೋಡೆ ಹಾಕಿಕೊಂಡಿದ್ದಾರೆ. ರಸ್ತೆಯುದ್ದಕ್ಕೂ ಕನಿಷ್ಠವೆಂದರೂ 14 ಮೀಟರ್ ಅಗಲದಲ್ಲಿ ಅತಿಕ್ರಮಣವಿಲ್ಲ. ಅರ್ಧ ಗುಂಟೆ, ಒಂದು ಗುಂಟೆ, ಅಬ್ಬಬ್ಬಾ ಎಂದರೆ 2 ಗುಂಟೆ ಜಾಗದ ಜನರಿವರು. ಈ ಜಾಗ ಬಿಟ್ಟರೆ ಜೀವನಾಧಾರಕ್ಕೆ ಕಾರವಾರದ ಜನರಿಗೆ ಮತ್ತೇನಿಲ್ಲ. ಇಂಥ ಅಸಹಾಯಕ-ಬಡವರನ್ನು ಏಕಾಏಕಿ ಒಕ್ಕಲೆಬ್ಬಿಸಿದರೆ ಅವರೆಲ್ಲಿಗೆ ಹೋದಾರು? ಮೊದಲೇ ಸರ್ಕಾರಿ ಯೋಜನೆಗಳಿಂದ ನಿರಾಶ್ರಿತರ ಡೇರೆಯಂತಾಗಿರುವ ಉತ್ತರ ಕನ್ನಡದಲ್ಲಿ ಬದುಕಲು ನೆಲವೇ ಸಿಗದಂತಹ ದುಸ್ಥಿತಿ!

ಉಜ್ವಲ ಕನಸಿನ ಪಥ

ಕಾಸ್ಮಾಪಾಲಿಟನ್ ನಗರವಾಗಿ ಬೆಳೆಯುತ್ತಿರುವ ಕಾರವಾರದ ಮುಖ್ಯ ರಸ್ತೆಗಳ ಅಗಲೀಕರಣ, ಅಭಿವೃದ್ಧಿ ಬಗ್ಗೆ ಕಾರವಾರದ ಅಭಿವೃದ್ಧಿ ಪ್ರಾಧಿಕಾರ ಪ್ರಸ್ತಾವನೆ ಇಟ್ಟಿತ್ತು, ಇದನ್ನು ನಗರಸಭೆ ಆಳುವ ಮಹಾಮಹಿಮರೂ ಒಪ್ಪಿ ಬರೋಬ್ಬರಿ 14 ಮೀಟರ್ ಅಗಲದ ರಸ್ತೆಗೆ ನಿರ್ಣಯ ಕೈಗೊಂಡಿದ್ದರು. ಇದರಲ್ಲಿ ಮೊದಲು ಕಾರವಾರ-ಕೋಡಿಬಾಗ್ ರಸ್ತೆ ಅಭಿವೃದ್ಧಿಗೆ ಸ್ಥಳೀಯಾಡಳಿತ ಮುಂದಾಯಿತು. ಕೆಯುಐಡಿಎಫ್‌ಸಿ ಯೋಜನೆ ಕಾರವಾರ ನಗರದ ರಸ್ತೆಗಳ ಅಭಿವೃದ್ಧಿಗೆಂದು ರಾಜ್ಯ ಸರ್ಕಾರ ಬರೋಬ್ಬರಿ 34 ಕೋಟಿ ಮಂಜೂರು ಮಾಡಿತು.


ಕಾರವಾರ-ಕೋಡಿಬಾಗ್ ರಸ್ತೆ ಅಭಿವೃದ್ಧಿಯ ನೀಲನಕ್ಷೆ ತಯಾರಿಸಿ ವರದಿ ಒಪ್ಪಿಸಲು ಸರ್ಕಾರ ಸ್ಥಳೀಯಾಡಳಿತ ಹಾಗು ಜಿಲ್ಲಾಡಳಿತಕ್ಕೆ ಆದೇಶ ಮಾಡಿತು. ಗಡಿಬಿಡಿಗೆ ಬಿದ್ದ ಆಡಳಿತಗಾರರು ಈಗಾಗಲೇ ಆರೂವರೆ ಮೀಟರ್ ಅಗಲವಿರುವ ರಸ್ತೆ 14 ಮೀಟರ್ ಮಾಡುವ ಪ್ಲಾನ್ ತಯಾರಿಸಿ ಸರ್ಕಾರಕ್ಕೆ ಕಳಿಸಿದರು, ಮಜಾ ಎಂದರೆ ಈ ಖಾಲಿ ಬುರುಡೆಯ ಪುರಪಿತೃಗಳು, ಅವರ ಸಲಹೆಗಾರರಾದ ಅಧಿಕಾರಿಗಳು ಮತ್ತು ಜಿಲ್ಲಾಡಳಿತದ ಪಂಡಿತೋತ್ತಮರು ನಗರಸಭೆ ಸ್ವಾಧೀನದಲ್ಲಿ 14 ಮೀಟರ್ ಜಾಗವಿದೆಯೋ? ಅಥವಾ ಖಾಸಗಿ ಜಮೀನು ವಶಪಡಿಸಿಕೊಳ್ಳಬೇಕೋ? ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಿಲ್ಲ!

ಈ ಗೊಂದಲದಲ್ಲಿ ಕಾರವಾರ-ಕೋಡಿಬಾಗ್ ರಸ್ತೆ ಅಗಲೀಕರಣಕ್ಕೆ ಮುಹೂರ್ತವೇ ಬರಲಿಲ್ಲ, ನಗರೋತ್ಥಾನ ಯೋಜನೆಯ ಅನುದಾನ ಲ್ಯಾಪ್ಸ್ ಆಗುವ ಪರಿಸ್ಥಿತಿ ಎದುರಾಯ್ತು, ಆಗ ಎಂಟ್ರಿಯಾಯ್ತು ಅತ್ಯುತ್ಸಾಹದ ಜಿಲ್ಲಾಧಿಕಾರಿ ಉಜ್ವಲ್‌ಕುಮಾರ್ ಘೋಷ್‌ರದು! ಕಾರವಾರಕ್ಕೊಂದು ನಾಲ್ಕು ಪಥದ, ಹೇಮಾ ಮಾಲಿನಿಯ ಕೆನ್ನೆಯಂತೆ ಥಳ-ಥಳ ಹೊಳೆವ ರಸ್ತೆ ನಿರ್ಮಿಸಿಕೊಟ್ಟು ಹೋದರೆ ತಾನು ಈ ನಗರದಲ್ಲಿ ಅಜರಾಮರ ಎಂಬ ಕೀರ್ತಿ ಶನಿ ಉಜ್ವಲ್ ಹೆಗಲಿಗೇರಿಸಿ ಕೊಂಡುಬಿಟ್ಟರು. ನೀಲನಕ್ಷೆಯಲ್ಲಿನ ಎಡವಟ್ಟು, ಯೋಜನೆ ಜಾರಿಯಾದರೆ ಅಸಹಾಯಕ-ಅಮಾಯಕ ಮಂದಿಗಾಗುವ ಹಿಂಸೆ-ತೊಂದರೆ, ಕಾನೂನಿನ ತೊಡಕುಗಳ ಬಗ್ಗೆ ಡಿಸಿ ಸಾಹೇಬ ತಲೆಕೆಡಿಸಿಕೊಳ್ಳಲೇ ಇಲ್ಲ, ಅವಸರದಲ್ಲಿ ತಮ್ಮನ್ನು ಬಲಿಪಡೆಯಬೇಡಿ ಎಂದು ಯೋಜನಾಬಾಧಿತ ಮಂದಿ ಅದೆಷ್ಟೇ ಪರಿಪರಿಯಾಗಿ ಹೇಳಿದರೂ ಡಿಸಿ ಪರಿವಾರ ಕೇಳುವ ವ್ಯವಧಾನ ತೋರಿಸಲಿಲ್ಲ.

ಅಧಿಕಾರಶಾಹಿ ಆರ್ಭಟ!

ಡಿಸಿ ಉಜ್ವಲ್‌ಗೆ ಅದೇನು ಹಠವೋ? ಕಾರವಾರ-ಕೋಡಿಬಾಗ್ ರಸ್ತೆ ಅಗಲೀಕರಣ ಮಾಡಿಯೇ ತೀರುವ ಜಿದ್ದಿಗೆ ಬಿದ್ದಂತೆ ಹಾರಾಡತೊಡಗಿದರು. ಈ ರಸ್ತೆಯಲ್ಲಿ 14 ಮೀಟರಲ್ಲ 18 ಮೀಟರ್‌ಗಿಂತ ಹೆಚ್ಚು ಜಾಗ ನಗರಸಭೆಗೆ ಸೇರಿದ್ದಾಗಿದೆ. ಅದು ಬ್ರಿಟಿಷರ ಕಾಲದಿಂದಲೂ ಇದೆಯೆಂಬ ಭಂಡ ವಾದ ಜಿಲ್ಲಾಡಳಿತ ಮಾಡತೊಡಗಿತು. ಸ್ವಾತಂತ್ರ್ಯಾನಂತರದ ಸಿಟಿ ಸರ್ವೆ ಮಾಡಿದ ಭಾರತ ಸರ್ಕಾರದ ನಡಾವಳಿಗಿಂತ ಬ್ರಿಟಿಷರ ಸರ್ವೆಯೇ ಶ್ರೇಷ್ಠವೆಂಬ ಮಳ್ಳು ಮಾತು ಡಿಸಿ ದರ್ಬಾರಿನಿಂದ ಮೊಳಗಹತ್ತಿತು.

ಸಾರ್ವಜನಿಕರಿಗೆ ಅಥವಾ ಜಮೀನು ಕಳೆದುಕೊಳ್ಳುವವರಿಗೆ ಕಾನೂನು ಬದ್ಧವಾದ ಯಾವ ತಿಳಿವಳಿಕೆಯಾಗಲಿ, ಮಾಹಿತಿಯಾಗಲಿ ನೀಡದೆ ಏಕಪಕ್ಷೀಯವಾಗಿ ಜಿಲ್ಲಾಡಳಿತ ಮುಗ್ಧ ಮಂದಿಯ ಮೇಲೆ ಮುರಕೊಂಡು ಬಿದ್ದಿತು. ಬೆಚ್ಚಿಬಿದ್ದ ಜನ ಸುಧಾರಿಸಿಕೊಳ್ಳುವ ಮೊದಲೇ ಜಿಲ್ಲಾಧಿಕಾರಿ ಪಡೆ ದಾಳಿ ಶುರು ಮಾಡಿತು. ಡಿಸಿ, ಎಸಿ, ತಹಸೀ[…] ನಗರಸಭೆ ಆಯುಕ್ತ, ಇಂಜಿನಿಯರ್, ಪೊ[…] ಬಲದೊಂದಿಗೆ ರಸ್ತೆಗೆ ಧುಮುಕಿದರು. ರಸ್ತೆ ಕೆಲಸ […] ಮಾಡಿಯೇ ಬಿಟ್ಟರು. ತಾವೇ ಬಲಾತ್ಕಾರವಾಗಿ […] ಮಾಡಿ ಅಸಹಾಯಕರ ಜೀವನಾಧಾರ ನೆಲೆ-ಕ[…] ಸಂಚಕಾರ ನೀಡಿದರು!! ಜನರು ಬೀದಿಗೆ ಬೀ[…] ಭಯದಿಂದ ತತ್ತರಿಸಿಹೋದರು. ಜಿಲ್ಲಾಧಿಕಾರಿಗೆ […] ಹಾಕುತ್ತಾ ಕಣ್ಣೀರು ಸುರಿಸಹತ್ತಿದರು.


ಕಾರವಾರ-ಕೋಡಿಬಾಗ್ ರಸ್ತೆ

ಡಿಸಿ ದಾದಾಗಿರಿ!


ಜಿಲ್ಲಾಡಳಿತದ ಕ್ರೌರ್ಯದಿಂದ ಕಂಗೆಟ್ಟ ಜ[…] ಒಂದಾಗತೊಡಗಿದರು. ಆದರೆ ಆಡಳಿತಶಾಹಿಯ ಅ[…] ರೀಕು; ಲಾಠಿ-ಬೂಟಿನವರ ಎದುರು ನಿಂತು ಮಾತಾಡ[…] ಅಳಲು ತೋಡಿಕೊಳ್ಳುವ ಧೈರ್ಯ ಈ ಮಂದಿಗಿರ[…] ಆಗವರಿಗೆ ಧ್ವನಿಯಾಗಿದ್ದು ಸ್ಥಳೀಯ ನ್ಯಾಯವಾದಿ […] ನಾಯ್ಕ, ಜನಪರ ಚಿಂತನೆಯ ನಾಯ್ಕ ನಿರಾಶ್ರಿತರ[…] ಜನರನ್ನು ಡಿಸಿ ಬಳಿ ಕರೆದೊಯ್ದರು. ಡಿಸಿ ಈ ಅಸಹಾ[…] ಮಂದಿಯ ಮಾತು ಕಿವಿಗೊಟ್ಟು ಕೇಳಿದರು.

ಅಸಹಾಯಕ ಜನರ ಜೀವನಾಧಾರ […] ಕಾನೂನುಬಾಹಿರವಾಗಿ ವಶಪಡಿಸಿಕೊಳ್ಳಬಾರ[…] ಹಾಗೊಮ್ಮೆ ಖಾಸಗಿಯವರ ಜಾಗದ ಅವಶ್ಯಕತೆ ಇ[…] ಭೂಸ್ವಾಧೀನ ಕಾಯ್ದೆ (Land Acquisition A[…] ಪ್ರಕಾರ ಪರಿಹಾರ ನೀಡಬೇಕೆಂದು ಜಿ.ಟಿ. ನಾ[…] ನಿಯೋಗದ ಮನವಿ ಡಿಸಿಗೆ ಅದೆಷ್ಟು ಅರ್ಥವಾ[…] ಏನೋ?

ಅಂದೇ ಡಿಸಿ ಉಜ್ವಲ್ ನಗರಸಭೆ ಮೀಟಿ[…] ನಡೆಸಿದರು. ಇಷ್ಟು ದಿನ 14 ಮೀಟರ್ ಅಗಲೀ[…] ಎನ್ನುತ್ತಿದ್ದ ಸಾಹೇಬರು 18 ಮೀಟರ್ ಅಗಲದ […] ನಗರಸಭೆ ಠರಾವ್ ಪಾಸ್ ಮಾಡುವಂತೆ ಹಿಕ[…] ನಡೆಸಿದರು. ಇಂಥ ಜನ ಪೀಡಕ ಪ್ರಚೋದನೆ […] ಅದೆಲ್ಲಿಂದ ಬಂತೋ ಏನೋ? ಕಾರವಾರದಲ್ಲಿ ಇ[…] ಸುದ್ದಿ ಪ್ರಕಾರ, ಲ್ಯಾಂಡ್ ಮಾಫಿಯಾ ಸಂಪರ್ಕದ ಪತ್ರಿ[…] ವಕೀಲರ ವಂಧಿಮಾಗಧ ತಂಡದ ತಂತ್ರಗಾರಿಕೆಯೇ […]


ಡಿಸಿ ಬಗಲಲ್ಲಿ ಭ್ರಷ್ಟ ಆರ್ಪಿ!!

ಡಿಸಿ ಉಜ್ವಲ್‌ಕುಮಾರ್ ಘೋಷ್ ಒಂಥರಾ ಎಡವಟ್ಟನಾದರೂ ಸರ್ಕಾರಿ ಹಣ ಕೊಳ್ಳೆ ಹೊಡೆವ ಕಳ್ಳನಲ್ಲ ಎಂಬ ಅಭಿಪ್ರಾಯವಿದೆ. ಆದರೆ ಜಿಲ್ಲಾ ಅಭಿವೃದ್ಧಿ ಕೋಶದ ಎಇಇ ಆರ್.ಪಿ. ನಾಯ್ಕ ಎಂಬ ಬ್ರಹ್ಮಾಂಡಭ್ರಷ್ಟ ಸದಾ ಡಿಸಿ ಬಗಲಲ್ಲಿ ಠಳಾಯಿಸುವುದು ಅನೇಕ-ಅನುಮಾನ ಹುಟ್ಟುಹಾಕಿದೆ. ಜಿಲ್ಲೆಯ 11 ನಗರಾಡಳಿತ ಸಂಸ್ಥೆಗೆ ಪ್ರತಿ ವರ್ಷ ಸಾವಿರಾರು ಕೋಟಿ ಕಾಮಗಾರಿ ಅನುದಾನ ಬರುತ್ತದೆ. ಈ ಕಾಮಗಾರಿಗಳು ಜಿಲ್ಲಾ ಅಭಿವೃದ್ಧಿ ಕೋಶದಿಂದ ಓಕೆ ಆಗಲು ಆರ್ಪಿ ನಾಯ್ಕನಿಗೆ ಶೇಕಡಾ 5ರಂತೆ ಅಮೇಧ್ಯ ಕೊಡಲೇಬೇಕು. ಇಲ್ಲದಿದ್ದರೆ ಆತ ಬಿಲ್ ಪಾಸ್ ಆಗದಂತೆ ತಡೆಯುತ್ತಾನೆ. ಈತನ ಕಿರುಕುಳಕ್ಕೆ ಹೆದರಿ ನಗರಾಡಳಿತ ಮುಖ್ಯಾಧಿಕಾರಿಗಳು; ಕಮೀಷನರ್‌ಗಳು ಮುಂಗಡವಾಗೇ ಚೋರ ಆರ್ಪಿಗೆ ಪರ್ಸೆಂಟೇಜ್ ಸಂದಾಯ ಮಾಡುವುದೂ ಇದೆ. ಪೌರ ಕಾರ್ಮಿಕರ ಹೆಸರಲ್ಲೂ ಹಣ ಕೊಳ್ಳೆ ಹೊಡೆದ ಕೀರ್ತಿ ಈತನದ್ದು.


ಆರ್.ಪಿ ನಾಯ್ಕ್

ಈ ಆರ್ಪಿ ನಾಯ್ಕ ಒಂದುಕಾಲದಲ್ಲಿ ಒಪ್ಪೊತ್ತು ಗಂಜಿಗೂ ಗತಿಯಿಲ್ಲದ ತಿರುಬೋಕಿ. ಈಗಾತ ನೂರಾರು ಕೋಟಿಗಳ ಒಡೆಯ. ಆತನ ಕಳ್ಳ ಕಾಸು ಚೆನ್ನೈನ ಬ್ಯಾಂಕುಗಳಲ್ಲಿ ಬೇನಾಮಿಯಾಗಿ ಇಡಲಾಗಿದೆ ಎಂಬುದು ನಗರಾಡಳಿತದ ಕಂಬ-ಕಂಬಗಳಿಗೂ ಗೊತ್ತಿರುವ ಸಂಗತಿ. ಸುಳ್ಳು ಸೇವಾ ದಾಖಲೆ ಒದಗಿಸಿ ಸರ್ಕಾರದಿಂದ ಲಕ್ಷಾಂತರ ರೂ. ಬಡ್ತಿ-ಸಂಬಳ ಪಡೆದಿರುವ ಈ ಕ್ರಿಮಿನಲ್ ಹೊನ್ನಾವರದಲ್ಲಿ ಬೇನಾಮಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದಾನೆ. ಹೊನ್ನಾವರ ಮುನ್ಸಿಪಾಲ್ಟಿಯ ಎರಡೆರಡು ಸೈಟ್ ಹೆಂಡತಿ ಹೆಸರಲ್ಲಿ ಕಬಳಿಸಿದ್ದಾನೆ. ಇನ್ಯಾರದೋ ಸೈಟ್ ಸ್ವಾಹಾ ಮಾಡಿದ ಕೇಸು ಬೆಳಗಾವಿಯ ವಿಭಾಗಾಧಿಕಾರಿ ಕೋರ್ಟ್‌ನಲ್ಲಿ ವಿಚಾರಣೆಯಾಗುತ್ತಿದೆ. ಲೋಕಾಯುಕ್ತ ಪೊಲೀಸರು, ನಗರಾಭಿವೃದ್ಧಿ ಇಲಾಖೆಯ ದೊಡ್ಡ ಅಧಿಕಾರಿಗಳನ್ನೆಲ್ಲ ಕಿಸೆಯಲ್ಲಿಟ್ಟುಕೊಂಡಿರುವ ಆರ್ಪಿ ಲೂಟಿ ಹೇಳತೀರದು.

ಇಂಥ ದರೋಡೆಕೋರ ಆರ್ಪಿ ನಾಯ್ಕನ ಅಂತರಂಗ-ಬಹಿರಂಗ ಜಾಣ-ಪ್ರಾಮಾಣಿಕ ಐಎಎಸ್ ಉಜ್ವಲ್‌ಗೆ ಅರ್ಥವಾಗಿಲ್ಲವಾ? ಅಥವಾ ಚಾಲಾಕಿ ಆರ್ಪಿ ಡಿಸಿ ಉಜ್ವಲ್‌ರ[…] ಪಳಗಿಸಿದ್ದಾನಾ? 15 ಕೋಟಿ ಕೋಡಿಬಾಗ್ ಕಾಮಗಾರಿ ಉಸ್ತುವಾರಿ ಖದಿಮಾ[…] ಆರ್ಪಿಗೆ ವಹಿಸಿರುವ ಡಿಸಿಯ ಮರ್ಮವೇನು? ಕೋಟಿ-ಕೋಟಿ ರೂ.ಗಳ ಕಾಮ[…] ಉಸ್ತುವಾರಿಗೆಲ್ಲ ಡಿಸಿಗೆ ಈ ಟೆಕ್ನಿಕಲ್ ವೀಕ್-ಪರ್ಸೆಂಟೇಜ್ ಎಕ್ಸ್‌ಪರ್ಟ್ ಆರ್ಪಿಯ[…] ನೆಚ್ಚಿಕೊಂಡಿರುವುದರ ಗುಟ್ಟೇನು? ಹಿಂದಿನ ಡಿಸಿಗಳು ಈ ಆರ್ಪಿ ಅವ್ಯವಹಾರದ […] ನಗರಾಭಿವೃದ್ಧಿ ಇಲಾಖೆಗೆ ವಿಚಾರಣಾ ವರದಿ ಕಳಿಸಿದ್ದು ಖಡಕ್ ಡಿಸಿ ಉಜ[…] ಗಮನಕ್ಕೆ ಬರಲಿಲ್ಲವಾ?


ವಿನಯಕುಮಾರ್ ಸೊ[…]

ನಗರಸಭೆ ಇಂಜಿನಿಯರ್ ಮೋಹನ್‌ರಾಜ್, ಕಮೀಷನರ್ ಜತ್ತಣ್ಣನ ಕಾರ್ಯವೈಖರಿಯು ಸಂಶಯಾಸ್ಪದವಾಗಿದೆ. ಕೋಡಿಬಾಗ್ ರಸ್ತೆ ಅಗಲೀಕರಣ ಬೇಕಾಬಿಟ್ಟಿಯಾಗಿ ಮಾಡಲಾಗುತ್ತಿದೆ. ಕೆಲವೆಡೆ 18 ಮೀಟರ್ ಅಗಲವಾದರೆ, ಇನ್ನೊಂದಿಷ್ಟು ಕಡೆ 14 ಮೀಟರ್ ಅಗಲ ಮಾಡಲಾಗಿದೆ. ಮತ್ತೂ ಕೆಲವೆಡೆ ಬರೀ 12 ಮೀಟರಿಗೆ ನಿಂತಿದೆ. ಹಣವಂತರು ನಗರಾಡಳಿತ ಅಧಿಕಾರಿಗಳಿಗೆ ಲಂಚ ಕೊಟ್ಟು, ತಮಗೆ ಅನುಕೂಲವಾಗುವಂತೆ ಅಗಲೀಕರಣದ ಕರಾಮತ್ತು ನಡೆಸಿದ್ದಾರೆ. ಹೀಗೆ ನಗರಸಭೆ ಅಧಿಕಾರಿಗಳು ಕಲೆಕ್ಷನ್ ಮಾಡಿದ ಹಣವೇ ಕೋ[…] ಕೋಟಿ ಮೀರಿದೆ ಎಂಬ ಮಾತು ಕಾರವಾರದಲ್ಲಿ ಟಾಕ್ ಆಫ್ ದಿ ಟೌನ್!


ಇಂಥ ವ್ಯವಹಾರದಲ್ಲಿ ಸಿಕ್ಕಿ ಬಿದ್ದಿದ್ದ ಕಮೀಷನರ್ ಜತ್ತಣ್ಣ ಡಿಸಿ ಕೆಂಗಣ್ಣಿಗೆ ತುತ್ತಾಗಿದ್ದನು[…] ಕೆರಳಿದ ಡಿಸಿ ಸಾಹೇಬ ಕಮೀಷನರ್ ಜತ್ತಣ್ಣನ ಮೇಲೆ ಕ್ರಿಮಿನಲ್ ಕೇಸು ಹಾಕ[…] ಸೂಚಿಸಿದ್ದರು. ಆದರೆ ಅದೇನು ಪವಾಡವಾಯ್ತೋ! ಜತ್ತಣ್ಣ ಆರಾಮಾಗಿದ್ದಾನೆ. ಕೋಡಿಬಾ[…] ರಸ್ತೆ ಕಾಮಗಾರಿ ಮಾತ್ರ ದಿನಕ್ಕೊಂದು ಆಯಾಮ ಪಡೆಯುತ್ತ ಭಾನ್ಗಡಿ ಮ[…] ಭಾನ್ಗಡಿಗಳಾಗುತ್ತಲೇ ಇದೆ.


ನಗರಾಭಿವೃದ್ಧಿ ಮಂತ್ರಿ ವಿನಯಕುಮಾರ್ ಸೊರಕೆಗೆ ಈ ಕಾಮಗಾರಿ ತನಿ[…] ಒಳಪಡಿಸಿ ಕಳ್ಳರಿಗೆ ಕೋಳ ತೊಡಿಸುವ ತಾಕತ್ತು ಇದೆಯಾ? ನೊಂದವರಿಗೆ ನ್ಯಾ[…] ಸಿಕ್ಕೀತಾ? ಅಥವಾ ನ್ಯಾಯ ಕೇಳಿದವರಿಗೆ ಜೈಲೇ ಗತಿನಾ? ಅಧಿಕಪ್ರಸಂಗಿ ಡಿ[…] ಕೈಯಲ್ಲಿ ಮತ್ತೆಷ್ಟು ಪಾಪದವರು ಹೈರಾಣಾಗಬೇಕು?!

ಜ್ವಲ್ ಉಲ್ಟಾ ಹೊಡೆಯಲು ಕಾರಣವಂತೆ! ಪೊಲೀಸ್ ಲದಿಂದ ಡಿಸಿ ದಾದಾಗಿರಿಗೆ ಇಳಿದುಬಿಟ್ಟರು. ತಲತಲಾಂತ ದಿಂದ ಜೀವನಕ್ಕೆ ಆಧಾರವಾಗಿದ್ದ ಅಸಹಾಯಕರ ಮನೆ, ಂಗಡಿ, ಕಾಂಪೌಂಡ್ ಗೋಡೆಯನ್ನೆಲ್ಲ ಜೆಸಿಬಿಯಿಂದ ರುಳಿಸಿ ಜಾಗ ಸ್ವಾಧೀನಕ್ಕೆ ಪಡೆಯಲಾರಂಭಿಸಿತು ಲ್ಲಾಡಳಿತ.

ನ್ಯಾಯಾಲಯಕ್ಕೆ ಮೊರೆ

ಡಿಸಿ ಉಜ್ವಲರ ಉಪದ್ರವದಿಂದ ಹೈರಾಣಾದ ಜನರು ೇರೆ ದಾರಿ ಕಾಣದೆ ಸಿವಿಲ್ ನ್ಯಾಯಾಲಯದ ಟ್ಟಿಯೇರಬೇಕಾಗಿ ಬಂತು. ನ್ಯಾಯವಾದಿ ಜೆ.ಟಿ. ನಾಯ್ಕ ಲ್ಲಾಡಳಿತ-ನಗರಸಭೆಯ ಕುಕೃತ್ಯದಿಂದ ಜನರಿಗಾಗುತ್ತಿರುವ ೊಂದರೆ-ಸಂಕಟ ನ್ಯಾಯಾಲಯಕ್ಕೆ ಮನವರಿಕೆ ಾಡಿಕೊಟ್ಟರು. ನ್ಯಾಯಾಲಯ ಜಿಲ್ಲಾಧಿಕಾರಿ ಹಾಗು ಗರಸಭೆಯ ಕಾನೂನುಬಾಹಿರ ಕಾರ್ಯಾಚರಣೆಗೆ ತಾತ್ಕಾಲಿಕ ಡೆಯಾಜ್ಞೆ ನೀಡಿತು! ಭೂಸ್ವಾಧೀನ ಕಾಯ್ದೆಯ ಯಮಾವಳಿ ಪರಿಪಾಲಿಸದೆ ಖಾಸಗಿ ಜಮೀನು ುಟ್ಟದಂತೆ ಪ್ರತಿಬಂಧಕಾಜ್ಞೆ ವಿಧಿಸಿತು. ಆಗ ಕೆರಳಿತು ೋಡಿ ಐಎಎಸ್ ಉಜ್ವಲ್‌ರ ಈಗೋ!! ಪಿತ್ಥ ನೆತ್ತಿಗೇರಿಸಿ ಂಡ ಡಿಸಿ ನ್ಯಾಯಾಲಯಕ್ಕೆ ಹೋದವರ ಮೇಲೆ ಸೇಡು ೀರಿಸಿಕೊಳ್ಳಲು ಸ್ಕೆಚ್ ಹಾಕಿದರು. ಡಿಸಿಯ ಬೆಂಕಿಗೆ ವೃತ್ತಿ ಮಾತ್ಸರ್ಯದ ಪೊರಕೆ-ಕೀಲನೊಬ್ಬ ಲೀಟರ್‌ಗಟ್ಟಲೆ ಪೆಟ್ರೋಲ್ ುರಿದನೆಂದು ಕಾರವಾರಿಗರು ಇವತ್ತಿಗೂ ಾತಾಡಿಕೊಳ್ಳುತ್ತಿದ್ದಾರೆ.





ನಿರಾಶ್ರಿತರಾಗುವ ಆತಂಕದಲ್ಲಿದ್ದವರ ತೃತ್ವ ವಹಿಸಿದ್ದ ವಕೀಲ ಜೆ.ಟಿ. ನಾಯ್ಕರ ನೆ ಕಾಂಪೌಂಡ್ ಗೋಡೆ ಒಡೆಯಲು ಿ ಪರಿವಾರ ನಿರ್ಧಾರ ಮಾಡಿತು. ಗರಸಭೆ ಅಧಿಕಾರಿಗಳು ಪೊಲೀಸರೊಂದಿಗೆ .ಟಿ. ನಾಯ್ಕರ ಆವರಣ ಗೋಡೆ ಕೆಡವಲು ಪ್ರಯತ್ನಿಸಿದರು. ನಾಯ್ಕರ್ ಆಸ್ತಿ ಾನಿ ಮಾಡಿ ಬಾಯಿ ಮುಚ್ಚಿಸುವ ಬೆದರಿಕೆ ತ್ರ ಡಿಸಿಯದಾಗಿತ್ತು. ಆ ಮೂಲಕ ೆ 'ಆಜ್ಞೆ' ಪ್ರಶ್ನಿಸಿದವರಿಗೆ ಎಂಥ ಗತಿ ದಿದೆ ನೋಡಿ ಎಂಬ ಸಂದೇಶದ ಸಂಕೇತ ತ್ತರಿಸುವ ಯೋಚನೆ ಡಿಸಿ ಉಜ್ವಲ್ ಾಗಿತ್ತು. ಆದರೆ ಇದಕ್ಕೆ ಜೆ.ಟಿ. ನಾಯ್ಕ ಪ್ಪು ಹಾಕಲಿಲ್ಲ. ನ್ಯಾಯಾಲಯದ ತಿಬಂಧಕಾಜ್ಞೆ ಉಲ್ಲಂಘಿಸಿ ಆಸ್ತಿಗೆ ಹಾನಿ ಾಡುತ್ತಿದ್ದಾರೆಂದು ಅಧಿಕಾರಿಗಳ ಮೇಲೆ ಪ್ಲೇಂಟು ಕೊಡಲು ನಾಯ್ಕ ಮತ್ತವರ ಗಡ ವಕೀಲರು ಕಾರವಾರದ ನಗರ ೊಲೀಸ್ ಠಾಣೆಗೆ ಹೋದರು.

ಆದರೆ ಅಲ್ಲಿ ಪೊರಕೆ ವಕೀಲನ ಕಿತಾಪತಿ ನಡೆದಿತ್ತು. ಯಿಂದ ಕಂಪ್ಲೇಂಟು ಕೊಡಲು ಬಂದವರನ್ನೇ ಂಧಿಸುವಂತೆ ಪೊಲೀಸರಿಗೆ ಡಿಸಿ ಸಾಹೇಬರಿಂದ ಆರ್ಡರ್ ಾಡಿಸಿದ್ದ ಪೊರಕೆ ವಕೀಲ. ಜೆ.ಟಿ. ನಾಯ್ಕ್ ಮತ್ತವರ ತ್ರರನ್ನು ಪೊಲೀಸರು ಕುಂಟು ನೆಪಹೇಳಿ ಜೈಲುಪಾಲು ಾಡಿದರು. ಅತ್ತ ನಾಯ್ಕ ಅನ್ಯಾಯವಾಗಿ ಜೈಲು ಸೇರಿದರೆ ತ್ತ ಆತನ ಮನೆ ಮೇಲೆ ದಾಳಿ ಮಾಡಿದ ಅಧಿಕಾರಿಗಳು ಂಪೌಂಡ್ ಗೋಡೆ ಒಡೆದುಹಾಕಿ ಡಿಸಿ ಸಾಹೇಬರ ಗೋ ತಣಿಸಿದರು. ಪ್ರತಿಭಟನೆಗೆ ಇಳಿದವರ ಮೇಲೂ ುನಲ್ ಕೇಸ್ ಹಾಕಿಸಿದರು ಡಿಸಿ ಸಾಹೇಬರು. ರಾಘು ಯ್ಕ್ ಎಂಬಾತನ ಮನೆಯನ್ನೇ ನುಂಗಿಹಾಕಿತು ೋಲೀಶ್ ಪಡೆ!! ದುರಂತ ಎಂದರೆ, ಜನರು ಇಷ್ಟೊಂದು ಧಿಕಾರಶಾಹಿಯಿಂದ ಅನುಭವಿಸಿದರೂ ಮಂತ್ರಿ-ಶಾಸಕ ಂದು ಮಾತಾಡಿಸಿ ಸಾಂತ್ವನ ಹೇಳುವ ಮನುಷ್ಯತ್ವ ೇರಿಸಲಿಲ್ಲ. ಡಿಸಿ ದಾದಾಗಿರಿ ಪ್ರಶ್ನಿಸುವ ನೈತಿಕ ತಾಕತ್ತು ರವಾರದ ಒಬ್ಬೇ ಒಬ್ಬ ಜನಪ್ರತಿನಿಧಿಗಿಲ್ಲ ಎಂಬುದು ಚಿತ್ರವಾದರೂ ಸತ್ಯ!!

ಯಾರ ಲಾಭಕ್ಕಾಗಿ ಲಫಡಾ?

ಕೋಟ್ಯಂತರ ರೂ.ಗಳ ಕೋಡಿಬಾಗ್ ಚತುಷ್ಪಥ ರಸ್ತೆ ಮಗಾರಿ ಕಣ್ಣಾಮುಚ್ಚಾಲೆ ಕಂಡರೆ ಅನೇಕ ಅನುಮಾನ ುತ್ತದೆ. ಈ ಬೃಹತ್ ರಸ್ತೆ ಕೆಲಸ ಕೈಗೆತ್ತಿಕೊಳ್ಳುವಾಗ ಧಕ-ಬಾಧಕದ ಬಗ್ಗೆ ಯಾರೂ ತಲೆಯೇ ಕೆಡಿಸಿಕೊಂಡಿಲ್ಲ. ರವಾರದ ಬಕಾಸುರ ವಂಶಜರಾದ ಮುನ್ಸಿಪಾಲ್ಟಿ ಸದಸ್ಯರಿಗೆ ಮಗಾರಿಯಲ್ಲಿ ಸಿಗುವ ಕಮಿಷನ್ ವಿವರ ಬಿಟ್ಟರೆ ೇನೂ ಗೊತ್ತಿಲ್ಲ. ಜಿಲ್ಲಾಡಳಿತ ಅಧಿಕಾರಿಗಳಂತೂ ಡಿಸಿ ಜ್ವಲ್‌ರ ಒಣಪ್ರತಿಷ್ಠೆ ಕಾಯಲು 'ನಿಷ್ಠೆ'ಯಿಂದ ಕೆಲಸ ಾಡುತ್ತಿದ್ದಾರೆಯೇ ಹೊರತು ಕಾಮಗಾರಿ ಪ್ರಕ್ರಿಯೆಯಲ್ಲಿನ ್ರಮ-ಅನ್ಯಾಯ-ಅವಾಂತರದ ಬಗ್ಗೆ ಡೂಕಾಣದಂತಿದ್ದಾರೆ.

ತಾನೊಬ್ಬ ಮಹಾನ್ ಜನಪರ ಅಧಿಕಾರಿ, ಮಹಾ ದ್ಧಿವಂತ, ಕಾನೂನುನಿಷ್ಠ, ಪ್ರಗತಿಪರ ಎಂದೆಲ್ಲ ಪೋಸು ಡುವ ಡಿ.ಸಿ. ಉಜ್ವಲ್ ಕಾಮಗಾರಿಯ ಆರಂಭದಲ್ಲೇ ಸ್ತವ್ಯಸ್ತಗೊಳಿಸಿ ಎಡವಟ್ಟು ಮಾಡಿ ಎಡವಿದ್ದಾರೆ. ಯೋಜನೆ

ಕಾರ್ಯಗತಕ್ಕೆ ಕೈಹಾಕುವ ಮೊದಲೇ ಸಂತ್ರಸ್ತರಾಗೋರಿಗೆ ಪರಿಹಾರ, ಅನುದಾನ ಮೀಸಲಿಡಲು ಡಿಸಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಬೇಕಿತ್ತು. ಭೂಸ್ವಾಧೀನ ಕಾಯ್ದೆಯನ್ನು ಧಿಕ್ಕರಿಸಿ ತಾನು ಹೇಳಿದ್ದೇ ಕಾನೂನು ಎಂಬಂತೆ ಹಾರಾಡುತ್ತಿರುವ ಡಿಸಿ ವರ್ತನೆ ಕಾರ್ಪೊರೇಟ್ ಲಾಬಿಗೆ ನೆರವಾಗುವಂತಿದೆ ಅನ್ನಿಸುತ್ತದೆ. ತಾನೆಂಥ ಮಹಾ ಚಾಣಾಕ್ಷನೆಂದರೂ ಬಡವರ, ಅಸಹಾಯಕರ ನಾಡಿಮಿಡಿತ ಅರ್ಥೈಸಿಕೊಳ್ಳಲು ಈ ಐಎಎಸ್ ವಿಫಲವಾಗಿರೋದು ಕೋಡಿಬಾಗ್ ರಸ್ತೆ ಕರ್ಮಕಾಂಡ ನಿಸ್ಸಂಶಯವಾಗಿ ಸಾಬೀತುಪಡಿಸುವಂತಿದೆ.

ಡಿಸಿ ಸಾಹೇಬರ ತರಾತುರಿಯಿಂದ ಎಂತೆಂಥ ಅನಾಹುತವಾಗುತ್ತಿದೆ ಗೊತ್ತಾ? ಯಾರ್‍ಯಾರದೋ ಮನೆ-ಅಂಗಡಿ ಕಿತ್ತು ಬೀದಿ ಪಾಲು ಮಾಡಲಾಗಿದೆ. ಇನ್ಯಾರದೋ ಮನೆ ಅರ್ಧ ತೆಗೆದು ಆತ ಕೈಯಿಂದ ಹಣ ವ್ಯಯಿಸಿ ಮನೆ ರಿಪೇರಿ ಮಾಡಿಕೊಳ್ಳುವ ಕಷ್ಟಕ್ಕೆ ತಳ್ಳಲಾಗಿದೆ. ಬೇಕಾಬಿಟ್ಟಿಯಾಗಿ ಜೆಸಿಬಿಯಿಂದ ಚರಂಡಿ ತೋಡುವಾಗ ಯಾರ್‍ಯಾರದೋ ಮನೆ ಮುರಿದುಬಿದ್ದಿದೆ. ಅದೃಷ್ಟವಶಾತ್ ಜನ ಬಚಾವಾಗಿದ್ದಾರೆ. ಇಂತಹ ಅಧಿಕಪ್ರಸಂಗಿ ಡಿಸಿ ಮೇಲೆ ಕ್ರಿಮಿನಲ್ ಕೇಸು ಹಾಕುವ ಛಾತಿ ಯಾರಿಗಿದೆ? ಇಂಥ ಬರ್ಬರ ಪಾತಕ ಮಾಡಿದರೂ ಡಿಸಿಯನ್ನು ಸಹಿಸಿಕೊಳ್ಳುವ ಮಂತ್ರಿ-ಶಾಸಕರಿಗೆ ಜನ ಉಗಿಯುತ್ತಿದ್ದಾರೆ. ಮನುಷ್ಯ ವಿರೋಧಿ 'ಅಭಿವೃದ್ಧಿ' ಮಾಡುತ್ತಿರುವ ಡಿಸಿಯನ್ನು ಸ್ಥಳೀಯ ಪತ್ರಿಕೆಯ ಜಾಹಿರಾತೋದ್ಯಮಿ ಯಂತೂ ಪುಂಖಾನುಪುಂಖವಾಗಿ ಹೊಗಳುತ್ತಿದ್ದಾನೆ. ಗೋಕರ್ಣದಲ್ಲಿ ರೆಸಾರ್ಟ್‌ಗೆ ಪರ್ಮಿಷನ್ ಕೊಟ್ಟಿರುವ ಡಿಸಿ ಋಣ ತೀರಿಸಲು ಆತನಿಗೆ ಬೇರೆ ದಾರಿ ಯಾವುದಿದೆ?

ಈ ಕೋಡಿಬಾಗ್ ರಸ್ತೆ 15 ಕೋಟಿ ಕಾಮಗಾರಿ ಅಧಿಕಾರಿ ಗಣದ ಲಾಭಕ್ಕಾಗಿ ಮಾಡಲಾಗುತ್ತಿದೆಯೇ ಹೊರತು ಕಾರವಾರಿಗರ ಒಳಿತಿನ ಕಳಕಳಿಯಿಂದಲ್ಲ ಎಂಬ ಮಾತು ಕೇಳಿಬರುತ್ತಿದೆ. ಸದ್ರಿ ಕಾಮಗಾರಿ 2015ರ ಡಿಸೆಂಬರ್‌ನಲ್ಲೇ ಮುಗಿಯಬೇಕಿತ್ತು. ನಂತರ 2016ರ ಮಾರ್ಚ್ ತನಕ ಅವಧಿ ವಿಸ್ತರಿಸಲಾಯ್ತು. ಆದರೆ ಮೇ ಕಳೆದರೂ ಅರ್ಧದಷ್ಟು ಕೆಲಸವೂ ಆಗಿಲ್ಲ. ಜನ ಟ್ರಾಫಿಕ್ ಜಾಮ್‌ನಿಂದ ಹಿಂಸೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳ ಅಸಹಕಾರದಿಂದ ಗುತ್ತಿಗೆದಾರ ಒಂದು ಹಂತದಲ್ಲಿ ಕಾಮಗಾರಿ ರದ್ದುಪಡಿಸಿಕೊಳ್ಳಲಿಕ್ಕೂ ಮುಂದಾಗಿದ್ದ. ಆಗ ಕೋಟ್ಯಂತರ ರೂ. ಕಮೀಷನ್ನೇ ಬರುವ ಈ ಕಾಮಗಾರಿ ರದ್ದಾಗುವ ಭಯದಲ್ಲಿ ಅಧಿಕಾರಿಗಳು ಗಡಿಬಿಡಿಗೆ ಬಿದ್ದು ತರಾತುರಿಯಲ್ಲಿ ಕೆಲಸ ಮಾಡತೊಡಗಿದರು.


ಕನಿಷ್ಠ ಕಾನೂನುಬದ್ಧತೆ, ಮಾನವೀಯತೆಯೂ ಇಲ್ಲದ ಈ ರಸ್ತೆ ಕಾಮಗಾರಿಯಲ್ಲಿ ಶಿಸ್ತೂನಾಸ್ತಿ! ಅಧಿಕಾರಿಗಳು ಡಿಸಿ ಸಾಹೇಬರ ಸಂಪ್ರೀತಗೊಳಿಸಲು ಭಯೋತ್ಪಾದಕರಂತೆ ವರ್ತಿಸುತ್ತಿದ್ದಾರೆ. ಸಣ್ಣಪುಟ್ಟ ಜೀವನೋಪಾಯ ಕಸುಬು ಮಾಡೋರಿಗೆ ಲೈಸೆನ್ಸ್ ರದ್ದುಮಾಡುವ, ನಗರಸಭೆಯ ಕೆಲಸ ಆಗದಂತೆ ಮಾಡುವ, ಕ್ರಿಮಿನಲ್ ಕೇಸ್ ಹಾಕುವ ಬ್ಲಾಕ್‌ಮೇಲ್ ಮಾಡಿ ಅಧಿಕಾರಿಗಳು ತೆರವು ಕಿತಾಪತಿ ಮಾಡುತ್ತಿದ್ದಾರೆ. ಅಗಲೀಕರಣದ ನೆಪದಲ್ಲಿ ಅಸಹಾಯಕರನ್ನು ಸುಖಾಸುಮ್ಮನೆ ಪೀಡಿಸಲಾಗುತ್ತಿದೆ. ರಸ್ತೆ ಅಗಲೀಕರಣವಾದರೆ ತಮ್ಮ ರಿಯಲ್ ಎಸ್ಟೇಟ್ ದಂಧೆಯ ದೆಸೆ ಖುಲಾಯಿಸುತ್ತದೆಂದು ಲ್ಯಾಂಡ್ ಮಾಫಿಯಾ ದೊರೆಗಳು ಡಿಸಿ ಬೆನ್ನಿಗೆ ಕಂಡೂಕಾಣದಂತೆ ನಿಂತು ಕುಮ್ಮಕ್ಕು ಕೊಡುತ್ತಿದ್ದಾರೆ. ಹುಂಬ ಡಿಸಿಯನ್ನು ಬಳಸಿಕೊಂಡು ದಗಲುಬಾಜಿಗಳು-ಧಣಿಕೋರರು ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ.

ಇಂಥ ರಾಕ್ಷಸಿ ಜಿಲ್ಲಾಡಳಿತ ಪಂಚೇಂದ್ರಿಯ ಇಂಗಿದವರು ಮಾತ್ರ ತಾರೀಫು ಮಾಡಬೇಕಷ್ಟೇ. ಈ ಡಿಸಿ ಉಜ್ವಲ್ ಅದೆಂಥ ಪಡಪೋಸಿ ಆಸಾಮಿ ಎಂಬುದಕ್ಕೆ ತೀರಾ ಈಚೆಗೆ ಕಾರವಾರ ನಗರಸಭೆ ಜಿಲ್ಲಾಡಳಿತದ ಪರವಾಗಿ ಜಾರಿ ಮಾಡಿರುವ ಹಾಸ್ಯಾಸ್ಪದ ನೋಟಿಸು ನಿದರ್ಶನದಂತಿದೆ. ಮಳೆ ನೀರು ಸರಿಯಾಗಿ ಚರಂಡಿಯಲ್ಲಿ ಹರಿಯದೇ ಖಾಸಗಿ ಆಸ್ತಿಗೆ ಹಾನಿಯಾದರೆ ಅದಕ್ಕೆ ನಗರಸಭೆ-ಸ್ಥಳೀಯಾಡಳಿತ ಹೊಣೆಯಲ್ಲ ಎಂದು ಡಿಸಿ ಸಾಹೇಬರ ಪರವಾಗಿ ನೋಟಿಸ್ ಹೊರಡಿಸಲಾಗಿದೆ. ವಿತ್ತ-ಜೀವಿತದ ರಕ್ಷಣೆ ಜಿಲ್ಲಾಡಳಿತದ ಹೊಣೆಯಲ್ಲವಾ ಮಿಸ್ಟರ್ ಡಿಸಿ ಸರ್?!

ಇಂಥ ಜನಪರ ಜಿಲ್ಲಾಡಳಿತ ನಡೆಸುತ್ತಿರುವ ತಲೆಮಾಸಿದ ಅನುಭವಿ ಮಂತ್ರಿ ದೇಶಪಾಂಡೆ ಅಭಿನಂದನಾರ್ಹರು ತಾನೆ? ಪ್ರಜಾಪೀಡಕ ಡಿಸಿ ಎಂದು ತೊಲಗುತ್ತಾನೋ ಎಂದು ಜನ ಮಂತ್ರಿ ದೇಶಪಾಂಡೆಗೆ ಶಾಪ ಹಾಕುತ್ತ ಕಾಯುತ್ತಿದ್ದಾರೆ!!

● ವರದಿಗಾರ

ನರೇಶ್ ಶೆಣೈ ಪಾಕಿಸ್ತಾನಕ್ಕೆ ಪೇರಿ ಕಿತ್ತನೆ?



ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾ ಕೊಲೆಯಲ್ಲಿ ಪ್ರಮುಖ ಆರೋಪಿ ಎಂದು ಪೊಲೀಸರು ಪರಿಗಣಿಸಿರುವ ನಮೋ ಬ್ರಿಗೇಡ್ ಸ್ಥಾಪಕ ನರೇಶ್ ಶೆಣೈ ಪರಾರಿಯಾಗಿ ತಿಂಗಳುಗಳೇ ಕಳೆದಿವೆ. ಬಾಳಿಗಾ ಕೊಲೆಯಾದ ದಿನದಿಂದ ನಾಪತ್ತೆಯಾಗಿರುವ ಮಂಗಳೂರಿನ ಉದ್ಯಮಿ ನರೇಶ್ ಶೆಣೈಗಾಗಿ ಪೊಲೀಸರು ಹುಡುಕುತ್ತಿದ್ದಾರೆ. ಸುಪಾರಿ ಕೊಲೆಗಾರರನ್ನು ನೇಮಿಸಿ ವಿನಾಯಕ ಬಾಳಿಗಾ ಕೊಲೆಯಲ್ಲಿ ನರೇಶ್ ಶೆಣೈ ಪ್ರಧಾನ ಪಾತ್ರ ವಹಿಸಿದ್ದಾರೆಂದು ಮಂಗಳೂರು ಪೊಲೀಸರು ಶಂಕಿಸಿದ್ದಾರೆ. ಬಾಳಿಗಾ ಕೊಲೆಗೆ ಸಂಬಂಧಿಸಿ ಐವರು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ.


ನರೇಶ್ ಶೆಣೈಗೆ ಅಡಗುದಾಣ ಬದಲಾಯಿಸಲು ನೆರವಾಗುತ್ತಿದ್ದ ಛಾಯಾಗ್ರಾಹಕ ಮಂಜು ನಿರೇಶ್ವಾಲ್ಯ ಯಾನೆ ಮಂಜುನಾಥ ಶೆಣೈನನ್ನೂ ಸಹ ಕಳೆದ ಭಾನುವಾರ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.. ಆದರೆ ನರೇಶ್ ಶೆಣೈ ಮಾತ್ರ ಇನ್ನೂ ಪತ್ತೆಯಾಗಿಲ್ಲ. ಕೇರಳ, ಉತ್ತರ ಪ್ರದೇಶ, ದುಬೈ- ಹೀಗೆ ಹಲವಾರು ಕಡೆ ನರೇಶ್ ಶೆಣೈ ಅಡಗಿರಬಹುದು ಎಂಬ ಗುಸುಗುಸು ಇದ್ದರೂ ಪೊಲೀಸರಿಗೆ ಇನ್ನೂ ಆತನನ್ನು ಬಂಧಿಸುವಲ್ಲಿ ಯಶಸ್ಸು ಸಿಕ್ಕಿಲ್ಲ.

ಇದೀಗ ಹೊಸ ಸುದ್ದಿಯೊಂದು ಅಲ್ಲಲ್ಲಿ ಚಾಲ್ತಿಯಲ್ಲಿದ್ದು ಸಾರ್ವಜನಿಕರಲ್ಲಿ ಕುತೂಹಲ ಮೂಡಿದ್ದು ನರೇಶ್ ಶೆಣೈ ಪಾಕಿಸ್ತಾನಕ್ಕೆ ಪರಾರಿಯಾಗಿರಬಹುದೆ ಎಂಬ ಅನುಮಾನ ವ್ಯಕ್ತವಾಗಿದೆ. ಇಂತಹದೊಂದು ಸಾಧ್ಯತೆ ಅಸಾಧ್ಯವಲ್ಲವಾದರೂ ಈ ಸುದ್ದಿಯ ಹಿಂದೆ ವ್ಯಂಗ್ಯವೂ ಅಡಗಿದೆ.

ವಿನಾಯಕ ಬಾಳಿಗಾ ಕೊಲೆಯ ಬಳಿಕ ನರೇಶ್ ಶೆಣೈ ಪಾಕಿಸ್ತಾನಕ್ಕೆ ಪರಾರಿಯಾಗಿರಬಹುದು ಎಂಬ ಅನುಮಾನಕ್ಕೆ ಕಾರಣವಿದೆ. ನರೇಂದ್ರ ಮೋದಿಯನ್ನು ಪ್ರಧಾನಿಯಾಗಿಸಲು ಯುವಕರನ್ನು ಒಗ್ಗೂಡಿಸಿ ನಮೊ ಬ್ರಿಗೇಡ್ ಎಂಬ ಸಂಘಟನೆಯನ್ನು ನರೇಶ್ ಶೆಣೈ ಸ್ಥಾಪಿಸಿದ್ದ. ನರೇಂದ್ರ ಮೋದಿ ಪ್ರಧಾನಿಯಾಗುವ ಮುನ್ನ ಆತ ಪ್ರಧಾನಿಯಾದರೆ ಈ ದೇಶದಲ್ಲಿರಲು ಬಯಸಲಾರೆ ಎಂಬ ಹೇಳಿಕೆಯನ್ನು ಸಾಹಿತಿ ಡಾ. ಯು. ಆರ್. ಅನಂತಮೂರ್ತಿ ನೀಡಿದ್ದಾರೆಂದು ನಮೊ ಬ್ರಿಗೇಡ್ ಆರೋಪಿಸಿತ್ತು. ಈ ಹೇಳಿಕೆಗಾಗಿ ಅನಂತಮೂರ್ತಿಯವರನ್ನು ಸಾಮಾಜಿಕ ಜಾಲತಾಣದಲ್ಲಿ ಅತ್ಯಂತ ಹೀನಾಯವಾಗಿ ನಿಂದಿಸಿದ್ದ ನಮೊ ಬ್ರಿಗೇಡ್ ಡಾ. ಮೂರ್ತಿಯವರ ವಿರುದ್ಧ ದೊಡ್ಡ ಬೈಗುಳದ ಅಭಿಯಾನವನ್ನೇ ಆರಂಭಿಸಿತ್ತು. ಇಷ್ಟು ಸಾಲದೆಂಬಂತೆ ಮೋದಿಯವರು ಪ್ರಧಾನಿಯಾಗುವುದು ಖಚಿತ, ಹೀಗಾಗಿ ಡಾ. ಅನಂತಮೂರ್ತಿಯವರು ಭಾರತ ಬಿಟ್ಟು ಪಾಕಿಸ್ತಾನಕ್ಕೆ ಹೋಗಲಿ ಎಂದು ಹೇಳಿಕೆ ನೀಡಿದ್ದ ನಮೊ ಬ್ರಿಗೇಡ್ ಸಂಸ್ಥಾಪಕ ನರೇಶ್ ಶೆಣೈ ಡಾ. ಅನಂತಮೂರ್ತಿಯವರಿಗೆ ಪಾಕಿಸ್ತಾನಕ್ಕೆ ಹೋಗಲು ಒನ್ವೇ ಟಿಕೆಟ್ ಅನ್ನು ಬುಕ್ ಮಾಡಿ ಅದನ್ನು ಅನಂತಮೂರ್ತಿಯವರಿಗೆ ಕಳುಹಿಸಿದ್ದ.

ಈ ಕುರಿತು ಮಾಧ್ಯಮಗಳಿಗೆ ಆಗ ಹೇಳಿಕೆ ನೀಡಿದ್ದ ನರೇಶ್ ಶೆಣೈ ಡಾ. ಅನಂತಮೂರ್ತಿ ಪಾಕಿಸ್ತಾನಕ್ಕೆ ಹೋಗಲು ನಮೊ ಬ್ರಿಗೇಡ್ ಮೂಲಕ ಟಿಕೆಟ್ ಬುಕ್ ಮಾಡಲಾಗಿದೆ ಎಂಬ ಮಾಹಿತಿಯನ್ನೂ ನೀಡಿದ್ದ.

2014ರ ಮೇ 16ರಂದು ನರೇಂದ್ರ ಮೋದಿ ಪ್ರಧಾನಿಯಾಗುವುದು ಖಚಿತವಾದ ಬಳಿಕ ಮಾಧ್ಯಮಕ್ಕೆ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ "ಮೇ 13ರಂದೇ ನಾವು ಡಾ. ಅನಂತಮೂರ್ತಿಯವರಿಗೆ ಕರಾಚಿ ಟಿಕೆಟ್ ಬುಕ್ ಮಾಡಿ ಇಟ್ಟಿದ್ದೇವೆ. ಮೋದಿ ಪ್ರಧಾನಿಯಾದ ಬಳಿಕ ದೇಶ ಬಿಡಲು ಅನಂತಮೂರ್ತಿಗೆ ಕೊನೆಕ್ಷಣದಲ್ಲಿ ಅನಾನುಕೂಲ ಆಗದಿರಲಿ ಎಂದು ಮೊದಲೇ ಟಿಕೆಟ್




ಬುಕ್ ಮಾಡಲಾಗಿದೆ. ಮೂರ್ತಿಯವರಿಗೆ ಶ್ರೀಲಂಕಾ ಮೂಲಕ ವಿಮಾನ ಯಾನಕ್ಕೆ ಟಿಕೆಟ್ ಖರೀದಿಸಲಾಗಿದೆ. ಮೇ 17ರಂದು ಶ್ರೀಲಂಕಾ ಏರ್ಲೈನ್ಸ್ ಕೊಲಂಬೊದಿಂದ ಮಧ್ಯಾಹ್ನ 1 ಗಂಟೆಗೆ ಪಾಕಿಸ್ತಾನದ ಕರಾಚಿಗೆ ಹೊರಡಲಿದ್ದು ಸಂಜೆ 4.40ಕ್ಕೆ ಕರಾಚಿ ತಲುಪಲಿದೆ. ಈ ವಿಮಾನದ ಮೂಲಕ ಡಾ. ಅನಂತಮೂರ್ತಿಯವರನ್ನು ಕರಾಚಿಗೆ ತಲುಪಿಸುವಂತೆ ವ್ಯವಸ್ಥೆ ಮಾಡಲಾಗಿದ್ದು ಸಂಪೂರ್ಣ ವೆಚ್ಚವನ್ನು ನಮೊ ಬ್ರಿಗೇಡ್ ಭರಿಸಿದೆ" ಎಂದು ನರೇಶ್ ಶೆಣೈ ಹೇಳಿಕೊಂಡಿದ್ದ. ಮೋದಿ ಪ್ರಧಾನಿಯಾದರು. ಅನಂತಮೂರ್ತಿ ಕೆಲ ತಿಂಗಳ ಬಳಿಕ ಅನಾರೋಗ್ಯದಿಂದ ನಿಧನರಾದರು. ಇದೆಲ್ಲ ಈಗ ಇತಿಹಾಸ.

ಅಂದು ಅನಂತಮೂರ್ತಿಯವರನ್ನು ಕರಾಚಿಗೆ ಕಳುಹಿಸಲು ಪಕ್ಕಾ ಪ್ಲಾನ್ ಮಾಡಿದ್ದ ನರೇಶ್ ಶೆಣೈ ಈಗ ಸ್ವತಃ ಪಾಕಿಸ್ತಾನದಲ್ಲಿರಬಹುದು ಎಂಬ ಅನುಮಾನ ವ್ಯಕ್ತವಾಗಿದೆ. ನಮೊ ಬ್ರಿಗೇಡ್ ಅಧ್ಯಕ್ಷನಾಗಿದ್ದಾಗ ಪಾಕಿಸ್ತಾನಕ್ಕೆ ಹೋಗಿಬರುವ ವಿಮಾನಗಳು, ಅವುಗಳ ಸಮಯ, ನಿಲ್ದಾಣಗಳು ಹೀಗೆ ಎಲ್ಲ ವಿಚಾರಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ನರೇಶ್ ಶೆಣೈ ತನ್ನ ಹಳೆಯ ಅನುಭವ ಮತ್ತು ತಿಳಿವಳಿಕೆಯನ್ನು ಉಪಯೋಗಿಸಿ ಬಾಳಿಗಾ ಕೊಲೆಯ ಬಳಿಕ ಕರಾಚಿ ಅಥವಾ ಪಾಕಿಸ್ತಾನದ ಬೇರಾವುದೇ ಪ್ರದೇಶಕ್ಕೆ ಪರಾರಿಯಾಗಿರಬಹುದು ಎಂಬ ಅನುಮಾನ ವ್ಯಂಗ್ಯವೆಂಬಂತೆ ಕಂಡರೂ ತಳ್ಳಿಹಾಕುವಂತಿಲ್ಲ ಅಲ್ಲವೆ? ಮಂಗಳೂರು ಪೊಲೀಸರು ನರೇಶ್ ಶೆಣೈ ಎಲ್ಲಿದ್ದರೂ ಶೀಘ್ರದಲ್ಲಿ ಬಂಧಿಸಿ ಬಾಳಿಗಾ ಕೊಲೆಗೆ ನ್ಯಾಯ ಒದಗಿಸುತ್ತಾರೆಯೆ ಎಂದು ಕಾದುನೋಡಬೇಕಾಗಿದೆ.

● ಶಶಿಧರ ಹೆಮ್ಮಾಡಿ

ದಾವಣಗೆರೆ: ಬಿಜೆಪಿಗಳ ಡಿಶುಡಿಶುಂ ಹಿಂದೆ ಯಡ್ಡಿ ದುಶ್ಮನಿ




ಅವತ್ತು ದಾವಣಗೆರೆ ಪಿಜೆ ಬಡಾವಣೆಯ 'ಆ ಕಟ್ಟಡದೊಳಗೆ ನಡೆದದ್ದು ಅಕ್ಷರಶಃ ಮಾರಾಮಾರಿ. ಅದು ಬಿಜೆಪಿಯ ಜಿಲ್ಲಾ ಪಾರ್ಟಿ ಆಫೀಸು. ಮಾತುಮಾತಿಗೆ ತಮ್ಮದು 'ಶಿಸ್ತುಬದ್ಧ' ಪಕ್ಷ ಅಂತ ಫರಾಕು ಹಾಕಿಕೊಳ್ಳೋ ಬಿಜೆಪಿಗಳ ಶಿಸ್ತು ಅದೆಂತದ್ದು ಅನ್ನೋದಕ್ಕೆ ಮಾತ್ರವಲ್ಲ, ಯಡ್ಡಿಯೆಂಬ ಅಪಶಕುನ ಮತ್ತೆ ಬಿಜೆಪಿಯ ಹೆಗಲೇರಿದ ಮೇಲೆ ಪಾರ್ಟಿ ಅದೆಂತಹ ಅಧೋಗತಿಯ ಹಾದಿ ಹಿಡಿದಿದೆ ಅನ್ನೋದಕ್ಕೂ ಅವತ್ತಿನ ಮಾರಾಮಾರಿ ಮುನ್ನುಡಿಯಂತಿತ್ತು. ಹೌದು, ಫಾರಿನ್ ಟೂರ್ ಮೋದಿ ಪುಟ್ಟ ಮೇ 29ರಂದು ಕಾಟನ್‌ಸಿಟಿಯ ಹೈಸ್ಕೂಲ್ ಮೈದಾನದಲ್ಲಿ 'ಇ'ಕಾಸ ಪರ್ವ ಅಂತ ಕನವರಿಸುವುದಕ್ಕೂ ಎರಡು ದಿನ ಮುನ್ನ ರಾಜ್ಯ ಬಿಜೆಪಿಯೊಳಗಿನ ಒಟ್ಟಾರೆ ಭಿನ್ನಮತ ಸಾಂಕೇತಿಕವಾಗಿ ಪುಟಿದೆದ್ದದ್ದು ಅದೇ ದಾವಣಗೆರೆಯಲ್ಲಿ.

ಬಿಜೆಪಿಯೊಳಗೆ ಯಡ್ಡಿಗೆ ಅದೆಷ್ಟು ಮಂದಿ ಮಿತ್ರರಿದ್ದಾರೋ ಅದಕ್ಕಿಂತ ದುಪ್ಪಟ್ಟು ಸಂಖ್ಯೆ ಹಿತಶತ್ರುಗಳೇದ್ದಾರೆ. ಇದು ಸ್ವತಃ ಯಡ್ಡಿಗೂ ಗೊತ್ತು, ಗೊಬ್ಬರದ ಮಂತ್ರಿ ಅನಂತ್ಕುಮಾರ, ಬಾಯಿಹರುಕ ಈಸ್ರಪ್ಪ ಕಿರಾಣಿ ಅಂಗ್ಡಿ ಶೆಟ್ರು, ಕಿಸುಬಾಯಿ ಸದ್ದೂ ಗೌಡ, ಧಾರವಾಡದ ಜೋಷಿ ... ಹೂಹ್ಞುಂ, ಇವರ್ಯಾರಿಗೂ ಯಡ್ಡಿಯ ಮುಖ ಕಂಡರೆ ಆಗದು. ಹಾಗಾಗಿ ಯಡ್ಡಿ ಕೆಜೆಪಿ ಕಟ್ಟಿಕೊಂಡು ಬಿಜೆಪಿಯಿಂದ ಹೊರನಡೆದಾಗ ಆ ಮುಖಗಳ ಮೇಲೆ ಇದ್ದ ನೆಮ್ಮದಿ ಆತ ಬಿಜೆಪಿಗೆ ವಾಪಾಸಾದ ಮೇಲೆ ಕಾಣುತ್ತಿಲ್ಲ. ಆದರೆ ಯಡ್ಡಿಯಂತಹ ಗುಟುರು ಗೂಳಿ ಇಲ್ಲದೆ ತಮ್ಮ ಕೈಯಿಂದ ಬಿಜೆಪಿಯ ನೊಗ ಎಳೆಯಲು ಸಾಧ್ಯವಿಲ್ಲ ಅನ್ನೋದೂ ಖಾತ್ರಿಯಾಗಿರೋದರಿಂದ ಆತ ಪಕ್ಷಕ್ಕೆ ವಾಪಾಸಾಗಿರೋದನ್ನು ಸಹಿಸಿಕೊಂಡಿದ್ದಾರಷ್ಟೆ. ಹಾಗಂತ ಇವರ್ಯಾರೂ ತೆಪ್ಪಗೆ ಕುಳಿತಿಲ್ಲ, ಯಡ್ಡಿಯನ್ನು ಮಟ್ಟಹಾಕಲು ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟೆಲ್ಲ ಕಸರತ್ತು ನಡೆಸುತ್ತಲೇ ಇದ್ದಾರೆ. ಯಡ್ಡಿಗೆ ರಾಜ್ಯಾಧ್ಯಕ್ಷ ಸ್ಥಾನ ದೊರಕುವುದು ವಿಳಂಬವಾಗುವುದರಿಂದ ಹಿಡಿದು ಆತನ ಮೇಲಿನ ಕೇಸುಗಳ ಕುರಿತು ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸುವಂತೆ ನೋಡಿಕೊಂಡ ಪ್ರಕರಣಗಳವರೆಗೆ ಇವರುಗಳ ಪರೋಕ್ಷ ಕೈವಾಡವಿರುವುದು ರಹಸ್ಯವೇನೂ ಅಲ್ಲ. ತನ್ನ ರಕ್ತದಲ್ಲೇ ಫ್ಯಾಸಿಸಂ, ಡಿಕ್ಟೇಟರ್‌ಶಿಪ್‌ಗಳನ್ನು ಸಾಕಿಕೊಂಡಿರುವ ಯಡ್ಡಿಗೆ ಫ್ರಂಟ್‌ಲೈನ್ ನಾಯಕತ್ವಗಳಲ್ಲೇ ಮಾತ್ರವಲ್ಲ ತಳಮಟ್ಟದ ಲೀಡರ್‌ಶಿಪ್‌ಗಳಲ್ಲೂ ಇಂತಹ ಪ್ರತಿರೋಧವಿದೆ. ಯಡ್ಡಿ ಮತ್ತವನ ಪಟಾಲಮ್ಮಿನ ಆರ್ಭಟದ ಮುಂದೆ ತಾವು ಮೂಲೆಗುಂಪು ಆಗಿಬಿಡುತ್ತೇವೆನ್ನುವ ಆತಂಕ ಬಹಳಷ್ಟು ಲೋಕಲ್ ಲೀಡರ್‌ಗಳಿಗೂ ಇದೆ. ಹೊಸ ಕೋರ್ ಕಮಿಟಿ ಕಟ್ಟುವ ನೆಪದಲ್ಲಿ ಯಡ್ಡಿ ಈಗಾಗಲೇ ಅದನ್ನು ಕಾರ್ಯರೂಪಕ್ಕೂ ತಂದಿದ್ದಾನೆ. ತನಗಾಗದವರನ್ನು ಸೈಡ್‌ವಿಂಗ್‌ಗೆ ಸರಿಸಿ, ತನ್ನ ಚೇಲಾಗಳನ್ನು ಪಕ್ಷದ ಆಯಕಟ್ಟಿನ ಜಾಗೆಯೊಳಕ್ಕೆ ನುಗ್ಗಿಸುವ ಸಂಚು ನಡೆಸಿದ್ದಾನೆ. ಒಂದರ್ಥದಲ್ಲಿ ತನ್ನ ಹಿಂಬಾಲಿಸಿ ಕೆಜೆಪಿಗೆ ಕಾಲಿಟ್ಟು ತೆಂಗಿನ ಕಾಯಿ ಕುಕ್ಕಿದವರಿಗೆ ಮಣೆ, ಇಲ್ಲದವರಿಗೆ ಕತ್ತಲೇ ಕೋಣೆ ಅನ್ನೊ ಪಾಲಿಸಿ ಯಡ್ಡಿಯದ್ದು. ಇದು ಬಿಜೆಪಿಯೊಳಗೆ ಭಿನ್ನಮತವನ್ನು ಸಣ್ಣದಾಗಿ ಹುಟ್ಟುಹಾಕಲು ಶುರು ಮಾಡಿದೆ. ಮೇ 27ರ ಶುಕ್ರವಾರ ದಾವಣಗೆರೆಯಲ್ಲಿ ಮಟಮಟ ಮಧ್ಯಾಹ್ನ ನಡೆದದ್ದು ಕೂಡಾ ಇದರ ಒಂದು ಸ್ಯಾಂಪಲ್ ಅಷ್ಟೆ.

ಮೋದಿಯ 'ಇ'ಕಾಸ ಪರ್ವವನ್ನು ಶತಾಯಗತಾಯ ಸಕ್ಸಸ್ ಮಾಡಲೇಬೇಕಿತ್ತು ಅದು ಹಾಳಾದರೆ ರಾಜ್ಯಾಧ್ಯಕ್ಷ ಹುದ್ದೆ ದಕ್ಕಿಸಿಕೊಂಡಿದ್ದ ಯಡ್ಡಿಯ ಮೇಲಿದ್ದ ಹೊಣೆ. ಹಾಗಾಗಿ ತನ್ನ ಜಾತಕ್ಕನ ಭಂಟ ದಾವಣಗೆರೆ ಸಂಸದ ಕಮ್ ಕೇಂದ್ರ ಮಂತ್ರಿ ಜಿ.ಎಂ.ಸಿದ್ದೇಶ್‌ಗೆ ಅದರ ಸಂಪೂರ್ಣ ಹೊಣೆ ಹೊರಿಸಿದ್ದ ಹಳೇ ಮೈಸೂರು, ಕರಾವಳಿ ಕರ್ನಾಟಕ, ಉತ್ತರ ಕರ್ನಾಟಕ ಹೀಗೆ ಎತ್ತ ಕಡೆಯಿಂದ ನೋಡಿದರೂ ಕರ್ನಾಟಕದ ಮಧ್ಯಭಾಗದಲ್ಲಿರೋ ದಾವಣಗೆರೆಯಲ್ಲಿ 'ಇ'ಕಾಸ ಪರ್ವ ನಡೆದರೆ ಜನರನ್ನು ಗುಡ್ಡೆ ತಂದು ಗುಡ್ಡೆಹಾಕುವುದು ಸುಲಭ ಅನ್ನೋದು ಚಡ್ಡಿಗಳ ಲೆಕ್ಕಾಚಾರವಾಗಿತ್ತು. ಅದರ ಭಾಗವಾಗಿಯೇ ಸಮಾವೇಶದ ಪೂರ್ವಭಾವಿ ಸಿದ್ಧತೆ ಕುರಿತು ಚರ್ಚೆ ನಡೆಸಲು ಶುಕ್ರವಾರ ಜಿಲ್ಲಾ ಹೆಡ್ಡಾಫೀಸಿನಲ್ಲಿ ಜಿಲ್ಲಾಧ್ಯಕ್ಷ ಅಣಬೇರು ಜೀವನಮೂರ್ತಿ ಸಭೆ ಕರೆದಿದ್ದ.

ಸಭೆ ಸಾಂಗವಾಗಿ ಸಾಗಿತ್ತು, ಮಧ್ಯಾಹ್ನ 1.00 ಗಂಟೆಯ ಸುಮಾರಿಗೆ ಒಂದಷ್ಟು ಬಿಜೆಪಿ ಕಾರ್ಯಕರ್ತರನ್ನು ಕರೆತಂದ ಬಿ.ಎಸ್.ಜಗದೀಶ್ ಎಂಬ ಮರಿಲೀಡರ್ ಏಕಾಏಕಿ ಪಾರ್ಟಿ ಆಫೀಸಿನ ಮುಂದೆ ಧರಣಿ ಕೂತ. ಇಕಾಸ ಪರ್ವ ಸಮಾವೇಶದಲ್ಲಿ ಮಾಜಿ ಸಚಿವ ಎಸ್.ಎ ರವೀಂದ್ರನಾಥ, ಮಾಜಿ ಎಂಎಲ್‌ಎ ಬಸವರಾಜ ನಾಯ್ಕ, ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಶಿವಯೋಗಿ ಸ್ವಾಮಿ ಮೊದಲಾದವರನ್ನು ಮೂಲೆಗುಂಪು ಮಾಡಲಾಗಿದ್ದು, ಫ್ಲೆಕ್ಸ್ ಬ್ಯಾನರ್‌ಗಳಲ್ಲಿ ಅವರ ಫೋಟೊ, ಹೆಸರುಗಳೇ ಇಲ್ಲ; ಪೂರ್ವಸಿದ್ಧತಾ ಸಭೆಗೂ ಅವರನ್ನು ಆಹ್ವಾನಿಸಿಲ್ಲ ಅನ್ನೋದು ಆ ಜನರ ಆಕ್ರೋಶವಾಗಿತ್ತು. ಅವರನ್ನೆಲ್ಲ ಸಮಾಧಾನ ಮಾಡುವ ಬದಲು ಜಿಲ್ಲಾಧ್ಯಕ್ಷ ಅಣಬೇರು ಜೀವನಮೂರ್ತಿ 'ಇಲ್ಲಿ ಯಾರನ್ನೂ ಕಡೆಗಣಿಸಿಲ್ಲ, ಯಾರ್‍ಯಾರಿಗೆ ಎಷ್ಟೆಷ್ಟು ಸಾಮರ್ಥ್ಯವಿದೆಯೋ ಅದಕ್ಕೆ ತಕ್ಕಂತೆ ಪ್ರಾಶಸ್ತ್ಯ ನೀಡಿದ್ದೇವೆ' ಅಂತ ಮತ್ತಷ್ಟು ಕೆರಳಿಸುವಂತೆ ಮಾತಾಡಿದ್ದ. ಧರಣಿ ನಡೆಸುತ್ತಿದ್ದವರು ಇನ್ನೇನೋ ಪ್ರಶ್ನೆ ಕೇಳಿದಾಗ ಅದಕ್ಕೆ ಕ್ಯಾರೆ ಎನ್ನದ ಮೂರ್ತಿ ಆಫೀಸಿನ ಒಳಸೇರಿಕೊಂಡಿದ್ದ. ಯಾವಾಗ ಜಿಲ್ಲಾಧ್ಯಕ್ಷನಿಂದಲೇ ಇಂತಹ ಉದ್ಧಟ ಹೇಳಿಕೆಗಳು ಹೊರಬಿದ್ದವೋ ರೊಚ್ಚಿಗೆದ್ದ ರವೀಂದ್ರನಾಥನ ಭಂಟರು ಆಫೀಸಿನ ಒಳನುಗ್ಗಿ ಅಣಬೇರು ಮೂರ್ತಿಯನ್ನು ತರಾಟೆಗೆ ತೆಗೆದುಕೊಳ್ಳಲು ಮುಂದಾಗಿದ್ದರು. ಆಗ ಅಲ್ಲಿದ್ದ ಅಣಬೇರು ಮೂರ್ತಿ ಬೆಂಬಲಿಗರು ಮಾತಿಗೆಮಾತು ಬೆಳೆಸಿದ್ದು ಪರಿಸ್ಥಿತಿಯನ್ನು ವಿಕೋಪಕ್ಕೆ ಕೊಂಡೊಯ್ದಿತ್ತು, ನೋಡ ನೋಡುತ್ತಿದ್ದಂತೆಯೇ ಒಬ್ಬರಿಗೊಬ್ಬರು ಕೈಕೈ ಮಿಲಾಯಿಸಿ ಬಡಿದಾಡಿಕೊಂಡುಬಿಟ್ಟರು.



ರವೀಂದ್ರನಾಥ್

ಯಡ್ಡಿಯ ಮಾನಸಪುತ್ರ ನರ್ಸ್ ರೇಣುಕಾ ಅಡ್ಡುರದೇ ಹೋಗಿದ್ದಿದ್ದರೆ ಜಿಎಂ ಸಿದ್ದೇಶ್‌ನ ಪಟ್ಟಾಶಿಷ್ಯ ಅಣಬೇರು ಮೂರ್ತಿಯ 'ಜೀವನ'ಕ್ಕೇ ಅವತ್ತು ಒಂದು ಗತಿ ಕಾಣುತ್ತಿದ್ದುದರಲ್ಲಿ ಅನುಮಾನವಿಲ್ಲ. ಇದಿಷ್ಟೂ ಘಟನೆಗೆ ಡೈಲಾಗ್ ಸಮೇತ ಸ್ಕ್ರೀನ್‌ಪ್ಲೇ ಬರೆದು ಛೂಬಿಟ್ಟು ಮರೆಯಲ್ಲಿ ನಿಂತು ನೋಡುತ್ತಿದ್ದ ಮಾಜಿ ತರಕಾರಿ ಮಂತ್ರಿ ಎಸ್.ಎ.ರವೀಂದ್ರನಾಥ ಕೂಡಾ ಯಾರೋ ಟೆಲಿಗ್ರಾಂ ಕೊಟ್ಟು ಕರೆಸಿಕೊಂಡವರಂತೆ ಗಲಾಟೆ ಶುರುವಾದ ಕೆಲವೇ ಸೆಕೆಂಡುಗಳಲ್ಲಿ ಸ್ಥಳಕ್ಕಾಗಮಿಸಿ ಬಸವರಾಜ್ ನಾಯ್ಕ, ಶಿವಯೋಗಿಸ್ವಾಮಿಯ ಜೊತೆಗೆ 'ಆದದ್ದು ಆಯ್ತು ಹೋಗ್ಲಿ ಬಿಡ್ರಿ' ಅನ್ನೋ ಒಣ ಡ್ರಾಮ ಆಡಿದ ನಂತರವಷ್ಟೆ ಜಗದೀಶ್ ನೇತೃತ್ವದಲ್ಲಿ ದಾಂಗುಡಿಯಿಟ್ಟಿದ್ದ ಪ್ರೀಪೇಯ್ಡ್ ಕಾರ್ಯಕರ್ತರು ತಣ್ಣಗಾದದ್ದು. ಇಷ್ಟು ಅವಾಂತರ ನಡೆದದ್ದೇ ತಡ, ಮಾಧ್ಯಮದವರನ್ನೆಲ್ಲಾ ಹೊರಗಟ್ಟಿದ ಕೇಸರಿ ಪಡೆ ಬಾಗಿಲು ಹಾಕಿಕೊಂಡು ಅದೇನೋ ಸಂಧಾನದ ನಾಟಕವಾಡಿ ಸಭೆಯನ್ನು ತಣ್ಣಗೆ ಮುಗಿಸಿಕೊಂಡರು. ಆದರೆ ಯಡ್ಡಿ ಮುಖ್ಯಮಂತ್ರಿ ಗಾದಿಯಲ್ಲಿ ಕೂತಿದ್ದ ಲಾಗಾಯ್ತಿನಿಂದಲೂ ಅವನಿಗೆ ಸಿಡ್ಡು ಹೊಡೆಯುತ್ತಲೇ ಬಂದಿದ್ದ ಎಸ್.ಎ.ರವೀಂದ್ರನಾಥ್ ದಾವಣಗೆರೆಯಲ್ಲಿ ಯಡ್ಡಿ ನಾಯಕತ್ವದ ಹೊಸ ಪಟಾಲಮ್ಮಿಗೆ ಭಿನ್ನಮತದ ಚಾವಟಿ ತೋರಿಸಿರುವುದು ಮಾತ್ರ ಇದರಿಂದ ಸಾಬೀತಾಗಿದೆ. ಮುಖ್ಯವಾಗಿ ಇದು ರವೀಂದ್ರನಾಥ ಮತ್ತು ಕೇಂದ್ರ ಮಂತ್ರಿ ಸಿದ್ದೇಶ್ ನಡುವಿನ ಆಂತರಿಕ ಜಟಾಪಟಿ ಅನ್ನೋದು ಸ್ಪಷ್ಟವಾಗಿದೆ.


ಒಂದಾನೊಂದು ಕಾಲದಲ್ಲಿ....

ಎಸ್.ಎ ರವೀಂದ್ರನಾಥ ಯಡ್ಡಿಯ ಸಮಕಾಲೀನ. ದಾವಣಗೆರೆ ಇನ್ನೂ ಅವಿಭಜಿತ ಶಿವಮೊಗ್ಗ ಜಿಲ್ಲೆಯ ಭಾಗವಾಗಿದ್ದಾಗಿನಿಂದಲೂ ಇಲ್ಲಿ ಶಾಮನೂರು ಧಣಿಗಳ 'ಕೈ'ಗೆ ಆಪೋಶಿಸ್ಸಾಗಿ ಕವಲದ ಚಾವುಟ ಹಾರಾಡಿಸಿದವನೇ ಈ ರವೀಂದ್ರ. ಆಗ ದಾವಣಗೆರೆಯ ಮೇಲೆ ಕಾಂಗ್ರೆಸ್ ಕುಬೇರರ ಹಿಡಿತ ಎಂತಹದ್ದಿತ್ತೆಂದರೆ ಬಿಜೆಪಿಗೆ ಜೈಕಾರ ಹಾಕಲು ಕಾರ್ಯಕರ್ತರೂ ಗತಿ ಇರಲಿಲ್ಲ. 1977ರಿಂದ 1995ರವರಗೆ ಇಲ್ಲಿ ಸಂಸದರಾಗಿ ಆಯ್ಕೆ ಆಗುತ್ತಿದ್ದುದು ಕಾಂಗ್ರೆಸ್ ಅಭ್ಯರ್ಥಿಗಳೇ. ಅಷ್ಟರಮಟ್ಟಿಗೆ ಇದು ಕಾಂಗ್ರೆಸ್‌ನ ಭದ್ರಕೋಟೆಯಂತಿತ್ತು ಆದರೆ 1996ರಲ್ಲಿ ಬಿಜೆಪಿ ಭೀಮಸಮುದ್ರದ ಅಡಿಕೆ ಧಣಿ ಜಿ. ಮಲ್ಲಿಕಾರ್ಜುನಪ್ಪನನ್ನು ಎಂಪಿ ಅಖಾಡಕ್ಕೆ ಎಳೆತಂದದ್ದು ದಾವಣಗೆರೆ ಮಟ್ಟಿಗೆ ಹೊಸ ಜಾತಿ ಸಮೀಕರಣವೊಂದನ್ನು ಹುಟ್ಟುಹಾಕಿತ್ತು, ಶಾಮನೂರು ಶಿವಶಂಕರಪ್ಪ ಹೇಗೆ ಲಿಂಗಾಯತ ಸಮುದಾಯಕ್ಕೆ ಸೇರಿದವರೋ ಮಲ್ಲಿಕಾರ್ಜುನಪ್ಪ ಕೂಡಾ ಅದೇ ಸಮುದಾಯಕ್ಕೆ ಸೇರಿದವರು. ಶಾಮನೂರು ಶಿವಶಂಕರಪ್ಪರನ್ನು ಎಷ್ಟೇ ಬೆಂಬಲಿಸಿದರೂ ಆತ ಕ್ಯಾಪಿಟಲಿಸ್ಟ್ ಕಸುಬಿನಿಂದ ಮತ್ತು ಮೇಲ್ಜಾತಿ ವಿರೋಧ ಕಟ್ಟಿಕೊಂಡಿದ್ದ ಕಾಂಗ್ರೆಸ್‌ನ ಛಾಯೆಯಿಂದ ಹೊರಬಂದು ದಿಲ್ಲಿ ಮಟ್ಟದಲ್ಲಿ ಸಮುದಾಯದ ಹಿತಕಾಯುವುದು ಅಷ್ಟಕ್ಕಷ್ಟೇ ಅಂತ ಲೆಕ್ಕ ಹಾಕಿದ ಈ ಭಾಗದ ಪವರ್‌ಫುಲ್ ಸಿರಿಗೆರೆ ತರಳಬಾಳು ಮಠ ಮಲ್ಲಿಕಾರ್ಜುನಪ್ಪನ ಪರವಾಗಿ ಫರ್ಮಾನು ಹೊರಡಿಸಿದ್ದರಿಂದಲೇ ಕಮಲ ಮೊದಲ ಬಾರಿ ಕಾಂಗ್ರೆಸ್‌ನ ಭದ್ರಕೋಟೆಯನ್ನು ಛಿದ್ರ ಮಾಡಿತ್ತು.

ಅವತ್ತು ಮಲ್ಲಿಕಾರ್ಜುನಪ್ಪನ ಗೆಲುವಿಗಾಗಿ ಓಡಾಡಿ ಶ್ರಮಿಸಿದವರಲ್ಲಿ ಎಸ್.ಎ.ರವೀಂದ್ರನಾಥ್ ಕೂಡಾ ಒಬ್ಬರಾಗಿದ್ದರು. ಅಲ್ಲದೇ ದುರ್ಗದ ಪಂಚಾಯ್ತಿ ಪೊಲಿಟಿಕ್ಸ್‌ಗೆ ಸೀಮಿತವಾಗಿದ್ದ ರಾಜಕಾರಣಿ ಮಲ್ಲಿಕಾರ್ಜುನಪ್ಪನನ್ನು ದಾವಣಗೆರೆ ಪಾರ್ಲಿಮೆಂಟ್ ಅಂಗಳಕ್ಕೆ ಆಮದು ಮಾಡಿ ತರುವಲ್ಲಿ ಶಂಕರನಾರಾಯಣ, ವೈ. ಮಲ್ಲೇಶಿ, ಓಂಕಾರಪ್ಪನಂತವರ ಜೊತೆಗೆ ರವೀಂದ್ರನಾಥನೂ ಪ್ರಧಾನಪಾತ್ರ ವಹಿಸಿದ್ದ. ಶಾಮನೂರು ಪ್ರಾಬಲ್ಯಕ್ಕೆ ಪ್ರತಿಯಾಗಿ ಬಿಜೆಪಿಯನ್ನು ದಾವಣಗೆರೆಯಲ್ಲಿ ಉಸಿರಾಡಿಸುವುದಷ್ಟೇ ಅವರೆಲ್ಲರ ಹಂಬಲವಾಗಿತ್ತು. ಅಸಲಿಗೆ ಈ ಮಲ್ಲಿಕಾರ್ಜುನಪ್ಪ ಮತ್ತು ಇವರ ಮಗ ಸಿದ್ದೇಶ್ ಇಬ್ಬರೂ ಚಿತ್ರದುರ್ಗದಲ್ಲಿ ರಾಜಕಾರಣ ಮಾಡಿದಷ್ಟೂ ದಿನ ಕಾಂಗ್ರೆಸ್ ಕಮ್ಮಟದಲ್ಲೇ ಪಳಗಿದಂತವರು. ಆದರಲ್ಲೂ ಮಗ ಸಿದ್ದೇಶಿಯಂತೂ ದುರ್ಗದ ಮಾಜಿ ಎಂಪಿ ಕಾಂಗ್ರೆಸ್‌ನ ಎಚ್.ಹನುಮಂತಪ್ಪನವರ ಪರಮಾಪ್ತ ಶಿಷ್ಯ. ಆದರೆ ಯಾವಾಗ ಬಿಜೆಪಿ ದಾವಣಗೆರೆಯಲ್ಲಿ ಕಾಂಗ್ರೆಸ್ ಧನಿಕನಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ರೊಕ್ಕಸ್ಥನ ಹುಡುಕಾಟಕ್ಕೆ ಇಳಿಯಿತೋ ಆಗ ಮಲ್ಲಿಕಾರ್ಜುನಪ್ಪ ದುರ್ಗದ ರಾಜಕಾರಣ ಬಿಟ್ಟು ದಾವಣಗೆರೆ ಪೊಲಿಟಿಕ್ಸ್‌ಗೆ ಕಮಲ ಲಾಂಛನದಡಿ ಎಂಟ್ರಿಕೊಟ್ಟರು. ಜೊತೆಗೆ ಮಗ ಸಿದ್ದೇಶಿಯೂ ಅಪ್ಪನ್ನೇ ಅನುಸರಿಸಿ ಬಿಜೆಪಿಗೆ ಶಿಫ್ಟಾದ.

ಬಿಜೆಪಿಗೆ ಬೇಕಿದ್ದ ಬ್ರೇಕ್‌ಥ್ರೂ ಏನೊ ಸಿಕ್ಕಿತು, ಆದರೆ ಮಲ್ಲಿಕಾರ್ಜುನಪ್ಪನ ವೃದ್ಧ ವಯಸ್ಸು ಅವರನ್ನು ಚಟುವಟಿಕೆಯಿಂದ ಓಡಾಡಿ ಪಕ್ಷ ಕಟ್ಟಲು ಆಗದಷ್ಟು ಬಿಗಿದು ಕೂರಿಸಿತ್ತು. ಆಗ ಅವರ ಮಗ ಸಿದ್ದೇಶಿಯನ್ನು ಜೊತೆಗಾತಿಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇ ರವೀಂದ್ರನಾಥ. ಆಗಿನ್ನೂ ಯಡ್ಡಿಯ ಪ್ರಭಾವಳಿಗೆ ಮಲ್ಲಿಕಾರ್ಜುನಪ್ಪನಾಗಲಿ, ಮಗ ಸಿದ್ದೇಶಿಯಾಗಲಿ ಒಳಗಾಗಿರಲಿಲ್ಲ. ಜನಸಂಘ ಕಾಲದ ರಾಜಕೀಯ ಮನುಷ್ಯ ರವೀಂದ್ರನಾಥನಿಗೂ ಈ ಬಚ್ಚಾ ಸಿದ್ದೇಶ ಏನು ಮಾಡಿಯಾನು ಅನ್ನೋ ಭ್ರಮೆ ಇತ್ತು. ಹಾಗಾಗಿ ಅವರಿಬ್ಬರ ನಡುವಿನ ಬಾಂಧವ್ಯ ಚೆನ್ನಾಗಿಯೇ ಸಾಗಿತ್ತು. ಅದು ಬಿಜೆಪಿಗೂ ವರ್ಕೌಟ್ ಆಯಿತು. 1996ರಲ್ಲಿ ಜಿ.ಮಲ್ಲಿಕಾರ್ಜುನಪ್ಪ ಗೆದ್ದಮೇಲೆ 1998ರಲ್ಲಿ ಶಾಮನೂರು ಶಿವಶಂಕರಪ್ಪ ಒಮ್ಮೆ ಸಂಸದರಾಗಿದ್ದು ಬಿಟ್ಟರೆ ಬರೋಬ್ಬರಿ





ಐದು ಬಾರಿ ದಾವಣಗೆರೆ ಎಂಪಿ ಸ್ಥಾನ ಬಿಜೆಪಿ[illegible] ಒಲಿಯುತ್ತಲೇ ಬಂದಿದೆ. ಅದರಲ್ಲೂ ಯಡ್ಡಿಯ 'ಲಿಂಗಾಯ[illegible] ಲೀಡರ್‌ಶಿಪ್' ಫ್ಯಾಕ್ಟರ್ ದಾಂಗುಡಿಯಿಟ್ಟ ನಂತರವಂ[illegible] ದಾವಣಗೆರೆ ಬಿಜೆಪಿಯ ಭದ್ರಕೋಟೆ ಅನ್ನುವಷ್ಟರಮಟ್ಟಿ[illegible] ಪರಿಸ್ಥಿತಿ ಬದಲಾಗಿಹೋಗಿದೆ.

ಯಡ್ಡಿ ತಂದಿಟ್ಟ ಬಿರುಕು

ಜಿ.ಮಲ್ಲಿಕಾರ್ಜುನಪ್ಪ ಸಾವನ್ನಪ್ಪಿದ ನಂತ[illegible] ದಾವಣಗೆರೆಯನ್ನು ಮತ್ತೆ ತಮ್ಮ ತೆಕ್ಕೆಗೆ ಸೆಳೆದುಕೊಳ್ಳ[illegible] ಶಾಮನೂರು ಫ್ಯಾಮಿಲಿಯಿಂದ ಪ್ರಯತ್ನಗ[illegible] ಶುರುವಾಗಿದ್ದವು. ತನ್ನ ಉತ್ತಾಹಿ ವ[illegible] ಎಸ್.ಎಸ್.ಮಲ್ಲಿಕಾರ್ಜುನ್‌ರನ್ನೇ ಕಣಕ್ಕಿಳಿಸುವ ತಯ[illegible] ನಡೆಸಿದ್ದ ಶಿವಶಂಕರಪ್ಪ, ಹಣದ ಹೊಳೆ ಹರಿಸಿಯಾದರ[illegible] ಗೆಲುವನ್ನು ಕೊಂಡುಕೊಳ್ಳಲು ಸಜ್ಜಾಗಿದ್ದರು. ಆಗಲ[illegible] ಒನ್ಸ್ ಎಗೇನ್, ಬಿಜೆಪಿಗೆ ಕಾಡಿದ್ದು ಅದೇ ರೊ[illegible] ಅಭ್ಯರ್ಥಿಯ ಸಮಸ್ಯೆ, ಬಿಜೆಪಿಗೆ ಬೇರೆ ಆಯ್ಕೆಯೇ ಇರಲ[illegible] ಜಿ.ಎಂ.ಸಿದ್ದೇಶಿಯನ್ನೇ ಕಣಕ್ಕಿಳಿಸಿತ್ತು; ಆತ ದುಡ್ಡು ಖ[illegible] ಮಾಡಬಲ್ಲ ಎನ್ನುವ ಆಯಾಮದ ಜೊತೆಗೆ ಅಪ್ಪನ ಸಾ[illegible] ಸಿಂಪಥಿಯೂ ದಕ್ಕುತ್ತದೆ ಎನ್ನುವ ಚಡ್ಡಿಗಳ ಫಾರ್ಮು[illegible] ಕೈಕೊಡಲಿಲ್ಲ, ಸಿದ್ದೇಶಿ ಗೆದ್ದು ಪಾರ್ಲಿಮೆಂಟ್ ಹೊಕ್ಕ[illegible] ಆಗಲೂ ಸಹ ಸಿದ್ದೇಶಿ ಗೆಲುವಿಗೆ ರವೀಂದ್ರನಾ[illegible] ಪ್ರಾಮಾಣಿಕವಾಗಿ ಓಡಾಡಿದ್ದ ಅಲ್ಲಿಯವರೆಗೂ ಅವರಿಬ[illegible] ನಡುವೆ ಯಾವುದೇ ಮನಸ್ತಾಪವಿರಲಿಲ್ಲ.

ಆದರೆ ಯಾವಾಗ ಯಡ್ಡಿ ಎಂಬ ತೂಫಾನು ದಾವಣ[illegible] ಪೊಲಿಟಿಕ್ಸ್‌ನಲ್ಲಿ ತನ್ನ ಪ್ರಭಾವ ತಾರಲು ಶುರು ಮಾಡಿತ[illegible] ಆಗಿನಿಂದ ರವೀಂದ್ರ ಮತ್ತು ಸಿದ್ದೇಶ್ ನಡುವಿನ ಬಾಂಧ[illegible] ಬಿರುಕು ಬಿಡಲಾರಂಭಿಸಿತು. ತನ್ನ ಸಮಕಾಲೀ[illegible] ಲೀಡರುಗಳನ್ನೆಲ್ಲ ಓವರ್‌ಟೇಕ್ ಮಾಡಿ ಯಡ್ಡಿ ಫ್ರಂಟ್‌ಲೈನ[illegible] ಬರುತ್ತಿದ್ದುದು ಬಹಳಷ್ಟು ಬಿಜೆಪಿ ನಾಯಕರುಗಳಿ[illegible] ಸಹಿಸಲಾಗುತ್ತಿರಲಿಲ್ಲ, ಅಂತವರಲ್ಲಿ ಎಸ್.ಎ.ರವೀಂದ್ರನಾ[illegible] ಕೂಡಾ ಒಬ್ಬ. ಜಿಎಂ ಸಿದ್ದೇಶ್ ಅಂಥಾ ಯಡ್ಡಿಯ ಸಾಂಗ[illegible] ಬಿದ್ದದ್ದು ರವೀಂದ್ರನಾಥನಿಗೆ ಸಹಜವಾಗಿಯೇ ಸಿಟ[illegible] ತರಿಸಿತ್ತು. ಅಲ್ಲಿಂದಾಚೆಗೆ ರವೀಂದ್ರನಾಥ ದಾವಣಗ[illegible] ಬಿಜೆಪಿಯಲ್ಲಿ ಬಂಡಾಯ ನಾಯಕನಾಗಿ ಉಳಿದುಬಿಟ[illegible] ಇತ್ತ ಬದಲಾದ ಕರ್ನಾಟಕದ ರಾಜಕಾರಣ[illegible] ಏರುಪೇರಾಟಗಳಲ್ಲಿ ಯಡ್ಡಿ ಪ್ರಬಲನಾಗಿ ಬೆಳೆದಿದ್ದರಿಂ[illegible] ದಾವಣಗೆರೆಯಲ್ಲೂ ಹೊನ್ನಾಳಿಯ ನರ್ಸ್ ರೇಣುಕಾಚಾರ್ಯ, ಹರಿಹರದ ಬಿ.ಪಿ.ಹರೀಶ, ಜಗಳೂರ[illegible] ಎಸ್.ವಿ.ರಾಮಚಂದ್ರ, ಚನ್ನಗಿರಿಯ ಮಾಡಾಳು ವಿರೂಪಾಕ್ಷ[illegible] ಹೀಗೆ ಯಡ್ಡಿಯ ಬಾಲಗಳು ಜೋರಾಗಿಯೇ[illegible] ಚಿಗುರಿಕೊಂಡವು. ಅವರಾಗೆಲ್ಲ ಸಿದ್ದೇಶನೇ ಫೈನಾನ್ಸಿಯರ[illegible]

ಕರ್ನಾಟಕದ ಪ್ರಭಾವಿ ಮತ್ತು ನಿರ್ಣಾಯಕ ಜಾತಿಗಳ[illegible] ಒಂದೆಂದು ನಂಬಲಾಗಿದ್ದ ಲಿಂಗಾಯತ ಜಾತಿಯ ಅನಭಿ[illegible] ಲೀಡರ್ ಅನ್ನೋ ಇಮೇಜು ದಕ್ಕಿದ ಮೇಲಂತೂ ಯ[illegible] ತನ್ನ ವಿರೋಧಿಗಳಿಗೆ ಇನ್ನಿಲ್ಲದ ಉಪಟಳ ಕೊಟ[illegible] ತುಳಿಯಲಾರಂಭಿಸಿದ. ರಾಜ್ಯ ರಾಜಕಾರಣದಲ್ಲಿ ಬಿಜೆಯಾಗಿ[illegible] ಯಡ್ಡಿ ಇಂತಹ ಕೆಲಸ ಮಾಡಲು ತನ್ನ ಸ್ಥಳೀಯ[illegible] ಭಂಟರುಗಳನ್ನು ಬಳಸಿಕೊಳ್ಳುತ್ತಿದ್ದ, ತಾನೂ ಸಹ ಮೂ[illegible] ಅತಿಸ್ಥಿಗ ಅನ್ನೋ ಕೇಸರಿ ದರ್ಪದಲ್ಲಿ ಯಡ್ಡಿ ನಾಯಕತ್ವ[illegible] ಕ್ಯಾರೆ ಅನ್ನದಿದ್ದ ರವೀಂದ್ರನಾಥನನ್ನು ದಾವಣಗೆರೆಯ[illegible] ಮಟ್ಟಹಾಕಲು ಯಡ್ಡಿ ಬಳಸಿಕೊಂಡದ್ದು ಇದೇ ಸಂಸ[illegible] ಸಿದ್ದೇಶಿಯನ್ನು, 2008ರಲ್ಲಿ ಯಡ್ಡಿ ಮುಖ್ಯಮಂತ್ರಿಯಾಗು[illegible] ಸಂದರ್ಭ ಬಂದಾಗಲೂ ಅದಾಗಲೇ ಮೂರ್‍ನಾಲ್ಕು ಬಾ[illegible] ಎಂಎಲ್‌ಎ ಆಗಿದ್ದ ರವೀಂದ್ರನಾಥನಿಗೆ ಮಂತ್ರಿಗಿ[illegible] ಕೊಡುವುದು ಯಡ್ಡಿಗೆ ಸುತಾರಾಂ ಇಷ್ಟವಿರಲಿಲ್ಲ, ಕೊನೆ[illegible] ರವೀಂದ್ರನಾಥ ತನಗಿದ್ದ ಆರೆಸ್ಸೆಸ್ ಪ್ರಭಾವ ಬಳಸಿ ಮಂತ್ರಿಗಿ[illegible] ಗಿಟ್ಟಿಸಿಕೊಳ್ಳಬೇಕಾಯ್ತು, ಆಗಲೂ ಬ್ಲ್ಯಾಕ್‌ಮೇಲ್ ಚತು[illegible] ರೇಣುಕಾಚಾರ್ಯನನ್ನು ಹೆಂಡದ ಮಂತ್ರಿ ಮಾಡುವ[illegible] ಮೂಲಕ ರವೀಂದ್ರನಾಥನಿಗೆ ಪರ್ಯಾಯ ಶಕ್ತಿ ರೂಪಿಸುವ[illegible] ಯಡ್ಡಿಯ ಪಾತ್ರ ಇರುವಷ್ಟೇ ಸಂಸದ ಸಿದ್ದೇಶ್‌ನ ಕೈವಾಡವೂ[illegible] ಇತ್ತು.

ರಾಜ್ಯದಲ್ಲಿ ಯಡ್ಡಿ ಹವಾ ಶುರುವಾದದ್ದೇ ತಡ ಇತ್ತ ಸಿದ್ದೇಶ್ವರನ ಚಕ್ರವರ್ತಿ ವರ್ತನೆಗೆ ಹಿಟ್ಲರನ ಟಚಪ್ ಸಿಕ್ಕದ್ದು. ಯಡ್ಡಿ ಮುಖ್ಯಮಂತ್ರಿಯಾದದ್ದೇ ತಡ, ಸಿದ್ದೇಶ್ವರ ಮಾತ್ರ ಸ್ಥಳೀಯ ಬಿಜೆಪಿ ರಾಜಕಾರಣದಲ್ಲಿ ನಿರಂಕುಶನಾಗುತ್ತ ಹೊರಟ. ರವೀಂದ್ರನಾಥ ವರ್ಸಸ್ ಸಿದ್ದೇಶ್ವರನ ರಾಜಕೀಯ ಜೈಪೋಟಿ ಮತ್ತಷ್ಟೂ ಬಿರುಸಾಗತೊಡಗಿತು. 2014ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಗೆದ್ದು ಹ್ಯಾಟ್ರಿಕ್ ಜಯ ಸಾಧಿಸಿದ್ದಲ್ಲದೇ ಮೋದಿ ಸರ್ಕಾರದಲ್ಲಿ ರಾಜ್ಯ ಮಂತ್ರಿಯಾದನೋ ಅಲ್ಲಿಂದ ಸಿದ್ದೇಶ್ವರನ ತಲೆ ತಿರುಗುವಿಕೆ ಇನ್ನೂ ಜೋರಾಯಿತು. ಅಷ್ಟಕ್ಕೂ ರವೀಂದ್ರನಾಥನೇನೂ ಸುಮ್ಮನೇ ಕೂತಿರಲಿಲ್ಲ, ಯಾವಾಗ ತಾನೇ ಬೆಳೆಸಿದ ಸಿದ್ದೇಶ್, ಯಡ್ಡಿ ಬಲದಲ್ಲಿ ತನಗೇ ತಿರುಮಂತ್ರ ತೀಡಲು ಶುರು ಮಾಡಿದನೋ ಆಗಿನಿಂದಲೂ ಸಿದ್ದೇಶ್ವರನೆದುರು ಪ್ರತಿತಂತ್ರದ ರಾಜಕಾರಣ ರೂಪಿಸುತ್ತಲೇ ಬಂದಿದ್ದ. ಆದರೆ ಆ ಪ್ರಯತ್ನದಲ್ಲಿ ಯಶ ಸಿಕ್ಕಿದ್ದಕ್ಕಿಂತ ಆತ ಎಡವಿದ್ದೇ ಹೆಚ್ಚು.

ವಿಕಾಸಪರ್ವದ ವಿಶ್ವಾಸಘಾತ

ಯಡ್ಡಿ ಬಿಜೆಪಿ ಮೇಲೆ ಮುನಿಸಿಕೊಂಡು ಕೆಜೆಪಿ ಅಂಗಡಿ ತೆರೆದು ಕೂತಿದ್ದಾಗ ಬಿ.ಪಿ.ಹರೀಶ, ನರ್ಸ್ ರೇಣುಕಾ, ಮಾಡಾಳು ವಿರುಪಾಕ್ಷಪ್ಪ, ಎಸ್.ವಿ.ರಾಮಚಂದ್ರರ ಕೈಗೆ ತೆಂಗಿನಕಾಯಿ ಕೊಟ್ಟು ಯಡ್ಡಿಗೆ ನಿವಾಳಿಸಿ ಹೊಡೆಯಲು ಕೆಜೆಪಿಗೆ ತಳ್ಳಿದ್ದೇ ಈ ಸಿದ್ದೇಶ್. 2013ರ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿ ಏನಾದರೂ ಇಪ್ಪತ್ತೋ, ಮೂವತ್ತೋ ಸೀಟು ಗೆದ್ದು ದೇವೇಗೌಡರಂತೆ ಯಡ್ಡಿಯೂ ಕಿಂಗ್‌ಮೇಕರ್ ಆಗಿಬಿಟ್ಟಿದ್ದಿದ್ದರೆ ಜಿಎಂ ಸಿದ್ದೇಶಿಯೂ 2014ರ ಪಾರ್ಲಿಮೆಂಟ್ ಚುನಾವಣೆಯನ್ನು ತೆಂಗಿನಕಾಯಿ ಅಡಿಯಲ್ಲೇ ಎದುರಿಸಿರುತ್ತಿದ್ದ. ಯಡ್ಡಿ ಮೇಲಿರುವ ಸಿದ್ದೇಶ್ ನಿಷ್ಠೆಯೇ ಅಂತದ್ದು. ಆದರೆ ಅಂದುಕೊಂಡಂತೆ ಯಾವುದೂ ನಡೆಯಲಿಲ್ಲ, ಕೇವಲ ನಾಲ್ಕು ಸ್ಥಾನವನ್ನು ಗೆದ್ದ ಯಡ್ಡಿಯ ಕೆಜೆಪಿ ಟೇಕಾಫ್ ಆಗಲೇ ಇಲ್ಲ. ಬಿಜೆಪಿಯಲ್ಲಿದ್ದವರನ್ನೆಲ್ಲ ಕೆಜೆಪಿಗೆ ತಳ್ಳಿದ್ದ ಸಿದ್ದೇಶ್ ತಾನೂ ಒಂದು ಕಾಲು ಅಲ್ಲಿಟ್ಟುಕೊಂಡು ನಿಂತಿದ್ದಾಗಲೂ ಬಿಜೆಪಿ ಪಾಲಿಗೆ ನಿಷ್ಠರಾಗಿ ಉಳಿದುಕೊಂಡವರೆಂದರೆ ರವೀಂದ್ರನಾಥ, ಬಸವರಾಜ ನಾಯ್ಕ ಮತ್ತು ಮಾಜಿ ಎಂಎಲ್‌ಸಿ ಶಿವಯೋಗಿಸ್ವಾಮಿಯಂತವರು. ಅಸಲಿಗೆ ಬಿಜೆಪಿ ನಿಷ್ಠೆಗಿಂತ ಹೆಚ್ಚಾಗಿ ಯಡ್ಡಿ ಮೇಲಿದ್ದ ಸಿಟ್ಟಿನಿಂದಾಗಿಯೇ ಅವರೆಲ್ಲ ಸಿದ್ದೇಶ್‌ನ ಅಸಹಕಾರದ ನಡುವೆಯೂ ಯಡ್ಡಿಯ ಕಣ್ಣುಕುಕ್ಕುವಂತೆ ಬಿಜೆಪಿ ಕಟ್ಟಲು ನಾವು ಸಶಕ್ತರಾಗಿದ್ದೇವೆ ಅಂತ ತೋರಿಸಿಕೊಳ್ಳಲು ಓಡಾಡುತ್ತಿದ್ದರು. ಇದು ಯಡ್ಡಿ ಮತ್ತು ಸಿದ್ದೇಶ್‌ನ ಆಕ್ರೋಶಕ್ಕೆ ಕಾರಣವಾಗಿತ್ತು.

ಈಗ ಯಡ್ಡಿ ಬಿಜೆಪಿಗೆ ವಾಪಾಸಾದ ನಂತರ, ಅದರಲ್ಲೂ ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಠಳಾಯಿಸಿದ ನಂತರ ತಮ್ಮ ವಿರೋಧಿಗಳಿಗೆ ಒಂದು ಗತಿ ಕಾಣಿಸಲು ಸಿದ್ದೇಶ್ ಕಾರ್ಯತಂತ್ರ ಹೆಣೆದಿದ್ದಾನೆ. ಬೇಕುಬೇಕಂತಲೇ ಜಿಲ್ಲಾ ರಾಜಕಾರಣದಲ್ಲಿ ತನ್ನ ವಿರೋಧಿಗಳನ್ನು ನಿರ್ಲಕ್ಷಿಸಿ, ಮೂಲೆಗುಂಪು ಮಾಡುವುದು ಆತನ ಹುನ್ನಾರ. ಅದಕ್ಕೆ ಮೋದಿಯ ವಿಕಾಸ ಪರ್ವವನ್ನು ಅಚ್ಚುಕಟ್ಟಾಗಿ ಬಳಸಿಕೊಂಡ. ತನ್ನ ಕೈಗೊಂಬೆಯಂತಿರುವ ಜಿಲ್ಲಾಧ್ಯಕ್ಷ ಅಣಬೇರು ಜೀವನ್‌ಮೂರ್ತಿಯ ಮೂಲಕ ರವೀಂದ್ರನಾಥ, ಬಸವರಾಜ ನಾಯ್ಕ, ಶಿವಯೋಗಿಸ್ವಾಮಿಯನ್ನು ಸಮಾವೇಶದಿಂದ ವ್ಯವಸ್ಥಿತವಾಗಿ ದೂರವಿಡುತ್ತಾ ಬಂದ. ಸಮಾವೇಶದ ಕುರಿತ ಯಾವೊಂದು ಸಭೆಗೂ ಅವರನ್ನು ಆಹ್ವಾನಿಸಲಿಲ್ಲ, ಜಿಲ್ಲೆಯಲ್ಲಿ ರಾರಾಜಿಸುತ್ತಿದ್ದ ಯಾವೊಂದು ಫ್ಲೆಕ್ಸ್, ಬ್ಯಾನರ್‌ಗಳಲ್ಲೂ ಅವರ ಮುಖ, ಹೆಸರು ಕಾಣಿಸದಂತೆ ನೋಡಿಕೊಳ್ಳಲಾಗಿತ್ತು. ಅಷ್ಟೇ ಯಾಕೆ, ಪಕ್ಷದ ವತಿಯಿಂದ ಬಿಡುಗಡೆ ಮಾಡಲಾದ ಮಾಧ್ಯಮ ಪ್ರಕಟಣೆಗಳಲ್ಲೂ ಇವರ ಹೆಸರು ಇರಲಿಲ್ಲ.

ಯಾವ ಬಿಜೆಪಿ ಸರ್ಕಾರ ಎರಡು ವರ್ಷದಲ್ಲಿ ಮಹತ್ಸಾಧನೆ ಮಾಡಿ ಗುಡ್ಡೆ ಹಾಕಿದೆ ಅಂತ ಬಡಾಯಿಕೊಚ್ಚಿಕೊಳ್ಳಲು ವಿಕಾಸ ಪರ್ವವನ್ನು ಆಯೋಜಿಸಲಾಗಿತ್ತೋ ಅದೇ ಬಿಜೆಪಿಗೆ ನಿಷ್ಠರಾಗಿದ್ದವರಿಗೇ ಅವಮಾನ ಮಾಡಲು ಸಮಾವೇಶ ಬಳಕೆಗೊಂಡಿತು. ರವೀಂದ್ರನಾಥ ಇದರಿಂದ ವೈಯಕ್ತಿಕವಾಗಿ ಕುದ್ದು ಹೋದದ್ದೇ ಮೇ 27ರ ಆ ಧರಣಿ, ಮಾರಾಮಾರಿಗೆ ಕಾರಣ. ಅಷ್ಟಾದರೂ ಜಿಲ್ಲಾ ಬಿಜೆಪಿಯೊಳಗಿನ ಗುಂಪುಗಾರಿಕೆ, ಭಿನ್ನಮತ, ಸಿದ್ದೇಶ್ ವರ್ಸಸ್ ರವೀಂದ್ರ ಸಮೀಕರಣ ಬದಲಾಗಿಲ್ಲ. ಗಲಾಟೆ ನಡೆದ ಎರಡು ದಿನಗಳ ತರುವಾಯ, ಅಂದರೆ ಭಾನುವಾರ ಹೈಸ್ಕೂಲ್ ಮೈದಾನದ ವೇದಿಕೆಯಲ್ಲಿ ರಾಜ್ಯ ನಾಯಕರುಗಳ ಜೊತೆಗೆ ಸಿದ್ದೇಶ್, ಜಿಲ್ಲಾಧ್ಯಕ್ಷ ಅಣಬೇರು ಜೀವನಮೂರ್ತಿ, ನರ್ಸ್ ರೇಣುಕಾ ಸಹ ಕಾಣಿಸಿಕೊಂಡರೂ, ಬಿಪಿ ಹರೀಶ, ಯಶವಂತರಾವ್ ಜಾಧವ್‌ರಂತ ಲೋಕಲ್ ಮುಖಗಳು ವೇದಿಕೆಯ ಅಕ್ಕಪಕ್ಕ ಸುಳಿದಾಡಿ ಮಿಂಚಿದರೂ ನಾಲ್ಕು ಬಾರಿ ಶಾಸಕನಾಗಿರುವ ಮಾಜಿ ಮಂತ್ರಿಯೂ ಆದ ರವೀಂದ್ರನಾಥನ ಮುಖ ಸಮಾವೇಶದ ಲೈಮ್‌ಲೈಟಿಗೆ ಬೀಳಲೇ ಇಲ್ಲ.

ಯಾವುದೂ ಇನ್ನು ಮುಗಿದಿಲ್ಲ ಅನ್ನೋದಕ್ಕೆ ಇದಕ್ಕಿಂತ ನಿದರ್ಶನ ಬೇಕೆ?

● ಟಿ.ಎನ್. ಷಣ್ಮುಖ

ಬಸ್ ಸ್ಟ್ಯಾಂಡ್‌ಗಳಲ್ಲಿ ನಶಿಸುತ್ತಿರುವ ಕನ್ನಡ

ಲಾಭದ ಬೆನ್ನು ಬೀಳುವುದು ಪ್ರಜಾತಂತ್ರ ಸರ್ಕಾರಗಳ ಕೆಲಸವಲ್ಲ, ಅದಕ್ಕೆಂದೇ ಬಂಡವಾಳಶಾಹಿ ಕಾರ್ಪೋರೇಟ್ ಕುಲುಮೆಗಳಿವೆ. ಚುನಾಯಿತ ಸರ್ಕಾರಗಳು ಬೊಕ್ಕಸವನ್ನು ಸಶಕ್ತಗೊಳಿಸಿಕೊಳ್ಳುವ ಆದಾಯದ ಮೂಲಗಳನ್ನು ಸೃಷ್ಟಿಸಿಕೊಳ್ಳಬೇಕೇ ವಿನಃ ಅಂತಹ ಸೆಲೆಗಳನ್ನೇ ಕಟ್ಟಕಡೆಯ ವರೆಗೆ ಹೀರಿಬಿಡುವ ವಿದ್ರೋಹಕ್ಕೆ ಕೈ ಹಾಕಬಾರದು. ಜೊತೆಗೆ ಸಾಧ್ಯವಾದಲ್ಲೆಲ್ಲ ಸರ್ಕಾರವು ಇಲ್ಲಿನ ಭಾಷೆ, ಬದುಕು ಮತ್ತು ಬರಹವನ್ನು ಪ್ರೋತ್ಸಾಹಿಸಬೇಕೆ ಹೊರತು ಅವುಗಳನ್ನು ಲಾಭದ ಮಾನದಂಡಗಳ ಮೇಲೆ ಅಳೆಯಬಾರದು. ಆದರೆ ನಮ್ಮ ರಾಜ್ಯದಲ್ಲಿ ಹಲವಾರು ವರ್ಷಗಳಿಂದ ಸರ್ಕಾರಗಳೇ ಇಲ್ಲಿನ ಕನ್ನಡ ಭಾಷೆ, ಕನ್ನಡ ಪತ್ರಿಕೋದ್ಯಮ ಮತ್ತು ಕನ್ನಡ ಸಾಹಿತ್ಯಕ್ಕೆ ಕಂಟಕವಾಗಿವೆ. ಅದು ಕಣ್ಣುಕುಕ್ಕುವಂತೆ ಎದ್ದು ಕಾಣುವುದು ನಮ್ಮ ರಾಜ್ಯದ ಬಸ್ ಸ್ಟ್ಯಾಂಡ್‌ಗಳಲ್ಲಿ.

ಈಗ್ಗೆ ಏಳೆಂಟು ವರ್ಷಗಳ ಹಿಂದೆ ತಾಲ್ಲೂಕು ಅಥವಾ ದೊಡ್ಡ ಹೋಬಳಿ ಮಟ್ಟದ ಯಾವುದೇ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಣ್ಣುಹಾಕಿದರೂ ಅಲ್ಲೊಂದು ಚಿಕ್ಕ ಪುಸ್ತಕದ ಅಂಗಡಿ ಕಣ್ಣಿಗೆ ಬೀಳುತ್ತಲೇ ಇತ್ತು. ದಿನಪತ್ರಿಕೆಗಳಿಂದ ಹಿಡಿದು ವಾರಪತ್ರಿಕೆ, ಮಾಸಪತ್ರಿಕೆ, ಕನ್ನಡ ಸಾಹಿತ್ಯ ಪುಸ್ತಕಗಳೂ ಅಲ್ಲಿ ಮಾರಾಟಗೊಳ್ಳುತ್ತಿದ್ದವು. ಸಣ್ಣಪುಟ್ಟ ತಾಲ್ಲೂಕು ಮತ್ತು ಹೋಬಳಿಗಳಲ್ಲಂತೂ ಅವೇ ಸುದ್ದಿ ಮತ್ತು ಸಾಹಿತ್ಯ ಸರಬರಾಜಿನ ಹೃದಯದಂತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ಅಂಗಳದಲ್ಲಿ ಅಂತಹ ಪುಸ್ತಕದಂಗಡಿಗಳು ಕಣ್ಮರೆಯಾಗುತ್ತಿವೆ. ಕಳೆದ




ಮೂರ್ನಾಲ್ಕು ವರ್ಷದಿಂದ ಗುಲ್ಬರ್ಗಾ ಜಿಲ್ಲಾ ಬಸ್‌ಸ್ಟ್ಯಾಂಡ್‌ನಲ್ಲೇ ಪುಸ್ತಕದ ಮಳಿಗೆ ಬಂದ್ ಆಗಿದೆ ಅಂದಮೇಲೆ ಇನ್ನು ಅದೆಷ್ಟು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪುಸ್ತಕ ಮಳಿಗೆಗಳಿಗೆ ಇದೇ ಗತಿ ಬಂದಿರಬೇಡ. ಹಲವಾರು ಕಾರಣಗಳಿಂದ ಈಗಾಗಲೇ ದುಸ್ಥಿತಿಗೆ ಸಿಲುಕಿರುವ ಕನ್ನಡ ಅಕ್ಷರಲೋಕದ ಮೇಲೆ ಇದು ಮತ್ತೊಂದು ಮರ್ಮಾಘಾತ!

ಇದಕ್ಕೆ ಕಾರಣ ಹುಡುಕುತ್ತಾ ಹೊರಟರೆ, ಕೆಎಸ್‌ಆರ್‌ಟಿಸಿಯ ಹೊಸ ಮಾನದಂಡಗಳೇ ಎದ್ದು ಕಾಣುತ್ತವೆ. ಮೊದಲನೆಯದಾಗಿ, ಈ ಮೊದಲು ಕೆಎಸ್‌ಆರ್‌ಟಿಸಿ ಕಟ್ಟಡದಲ್ಲಿ ಮಳಿಗೆಗಳನ್ನು ಬಾಡಿಗೆ ನೀಡುವಾಗ ಇಂತಿಂತ ಉದ್ದೇಶಕ್ಕೆ ಬಳಸುವ ಮಳಿಗೆ ಅಂತ ವರ್ಗೀಕರಿಸಲಾಗುತ್ತಿತ್ತು. ಅಂದರೆ ಒಂದು ಮಳಿಗೆ ಹೊಟೇಲ್‌ಗೆ, ಒಂದು ಮಳಿಗೆ ಬೇಕರಿಗೆ, ಒಂದು ಮಳಿಗೆ ಪುಸ್ತಕದ ಅಂಗಡಿಗೆ, ಒಂದು ಮಳಿಗೆ ಜನರಲ್ ಸ್ಟೋರ್‌ಗೆ- ಹೀಗೆ ವರ್ಗೀಕರಣವಿರುತ್ತಿತ್ತು. ಆ ಉದ್ದೇಶಕ್ಕೆಂದು ಮೀಸಲಿಟ್ಟ ಮಳಿಗೆಯನ್ನು ಪಡೆದವರು ಆ ಕಾರ್ಯಕ್ಕೇ ಅದನ್ನು ಬಳಸುವ ನಿಯಮವಿತ್ತು. ಹಾಗಾಗಿ ಪುಸ್ತಕದ ಮಳಿಗೆಗೆ ಪುಸ್ತಕ ವ್ಯಾಪಾರಿಗಳೇ ಬಿಡ್ ಮಾಡಿ ಅದರಲ್ಲಿ ವ್ಯಾಪಾರ ಮಾಡುತ್ತಿದ್ದರು. ಆದರೆ ಕೆಲವರ್ಷಗಳ ಹಿಂದೆ ಪತ್ರಿಕೆ ಮತ್ತು ಪುಸ್ತಕ ಮಾರಾಟಕ್ಕೆಂದು ಮೀಸಲಿಡುತ್ತಿದ್ದ ಮಳಿಗೆಯನ್ನೇ ರದ್ದು ಮಾಡಿ ಅದನ್ನು ಜನರಲ್ ಸ್ಟೋರ್‌ಗೆ ಸೇರಿಸಿಬಿಟ್ಟಿದ್ದಾರೆ. ಅಲ್ಲಿಗೆ, ಪುಸ್ತಕ ವ್ಯಾಪಾರಿ ಮಾತ್ರವಲ್ಲದೆ ಬೇರೆ ವ್ಯಾಪಾರದವರೂ ಆ ಮಳಿಗೆಗೆ ಬಿಡ್ ಸಲ್ಲಿಸಬಹುದು. ಹಾಗಾಗಿ ಬಾಡಿಗೆ ದರ ಸಿಕ್ಕಾಪಟ್ಟೆ ಜಾಸ್ತಿಯಾಗಿ ಹೋಗಿದೆ.

ಹುಮ್ನಾಬಾದ್‌ನಂತಹ ತಾಲ್ಲೂಕು ಶಹರದಲ್ಲೇ ಐದು ವರ್ಷಗಳ ಹಿಂದೆ 10,100 ರೂಪಾಯಿ ಇದ್ದ ಪುಸ್ತಕ ಮಳಿಗೆಯ ಬಾಡಿಗೆ ಇವತ್ತು ಏಕಾಏಕಿ 21,000 ರೂಪಾಯಿಗೆ ಬಂದು ನಿಂತಿದೆ. ಕೆಎಸ್‌ಆರ್‌ಟಿಸಿಯಲ್ಲಿ ಒಂದು ನಿಯಮವಿದೆ, ಒಬ್ಬ ವ್ಯಾಪಾರಿ ಒಮ್ಮೆ ಬಿಡ್ ಕೂಗಿ ಟೆಂಡರ್ ತೆಗೆದುಕೊಂಡರೆ ಐದು ವರ್ಷಗಳವರೆಗೆ ಅವನಿಗೆ ಆ ಮಳಿಗೆ ನೀಡಲಾಗುತ್ತೆ, ಅಲ್ಲಿಯವರೆಗೂ ವರ್ಷವೊಂದಕ್ಕೆ 10% ಬಾಡಿಗೆ ಹೆಚ್ಚು ಮಾಡುತ್ತಾ ಬರಲಾಗುತ್ತೆ, ಹತ್ತು ಸಾವಿರ ರೂಪಾಯಿಗೆ ಅದೇ 10% ಹೆಚ್ಚಳ ಅನ್ವಯಿಸಿದರೆ ಅದು ಹದಿನೈದು ಸಾವಿರವನ್ನೂ ದಾಟುವುದಿಲ್ಲ, ಅಂತದ್ದರಲ್ಲಿ 21,000 ರೂಪಾಯಿ ಅಂದರೆ, ಮೊದಲಿಗಿಂತ ದುಪ್ಪಟ್ಟು ಹಣವನ್ನು ಕೊಟ್ಟು ಒಬ್ಬ ವ್ಯಾಪಾರಿ ಪುಸ್ತಕ, ಪತ್ರಿಕೆಗಳ ಮಾರಾಟ ಮಾಡುವುದು ಸಾಧ್ಯವಾದೀತೇ? ಹಾಗಾಗಿ ಒಂದೊಂದಾಗಿ ಪುಸ್ತಕ ಮಳಿಗೆಗಳು ಕಾಣೆಯಾಗುತ್ತಿವೆ.

"ನಾವು ಮಳಿಗೆಯನ್ನೇನೂ ಮುಚ್ಚಿಲ್ಲ, ಅದನ್ನು ಜನರಲ್ ಸ್ಟೋರ್ ಆಗಿ ಬದಲಿಸಿದ್ದೇವಷ್ಟೆ, ಬೇಕಾದವರು ಬಿಡ್ ಕೂಗಿ ಅಲ್ಲಿ ಪುಸ್ತಕ ಮಳಿಗೆಯನ್ನೇ ನಡೆಸಬಹುದು. ಅದಕ್ಕೇನೂ ನಮ್ಮ ಅಭ್ಯಂತರವಿಲ್ಲ" ಎಂಬುದು ಕೆಎಸ್‌ಆರ್‌ಟಿಸಿ ಮಂಡಳಿಯ ವಾದ. ಆದರೆ ಅಲ್ಲೊಂದು ತೊಡಕು ಎದುರಾಗುತ್ತದೆ. ಪುಸ್ತಕ ಅಥವಾ ಪತ್ರಿಕೆ ಮಾರಾಟವೆಂದರೆ ಅದು ಅತಿ ಕಡಿಮೆ ಲಾಭದ ಮಾರ್ಜಿನ್ ಇರುವ ವ್ಯವಹಾರ. ಇದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರ. ಪುಸ್ತಕ ಅಥವಾ ಪತ್ರಿಕೆ ಮೇಲೆ ಮುದ್ರಿತವಾಗಿರುವ ಬೆಲೆಗಿಂತ ಒಂದೇಒಂದು ಪೈಸೆಯನ್ನೂ ಅಂಗಡಿಯವರು ಹೆಚ್ಚಾಗಿ ಪಡೆದುಕೊಳ್ಳಲಾಗುವುದಿಲ್ಲ, ಆದರೆ ಅದೇ ಒಂದು ನೀರಿನ ಬಾಟಲ್ ಹೊರಗಡೆ ಹನ್ನೆರಡು ರೂಪಾಯಿಗೆ ಸಿಕ್ಕರೂ ಬಸ್‌ಸ್ಟ್ಯಾಂಡ್ ಅಂಗಡಿಯವನು ಅದನ್ನು ಇಪ್ಪತ್ತು ರೂಪಾಯಿಗೆ ಮಾರಾಟ ಮಾಡಬಲ್ಲ. ಕೇಳಿದರೆ 'ಇದು ಬಸ್‌ಸ್ಟ್ಯಾಂಡ್ ರೇಟು, ಬೇಕಿದ್ದರೆ ಹೊರಗಡೆಯೇ ಹೋಗಿ ತಗೊಂಡ್ ಬನ್ನಿ' ಎಂಬ ಉತ್ತರ ತೂರಿಬರುತ್ತೆ. ಇನ್ನು ಬಸ್‌ಸ್ಟ್ಯಾಂಡ್ ಹೊಟೇಲ್ ತಿಂಡಿಗಳ ಕತೆಯೂ ಇಂತದ್ದೇ. ಅಲ್ಲಿ ಸಿಗುವ ಊಟದ ಗುಣಮಟ್ಟ ದೇವರಿಗೇ ಪ್ರೀತಿ, ಇನ್ನು ಸ್ವಚ್ಛತೆಯನ್ನಂತೂ ಕೇಳುವುದೇ ಬೇಡ. ಆದರೂ ರೇಟುಗಳು ಬೇರೆ ಹೊಟೇಲ್‌ಗಳಿಗಿಂತ ದುಬಾರಿಯಾಗಿಯೇ ರೇಗಿಸುತ್ತವೆ. ಹೀಗೆ ಬೇರೆಲ್ಲ ಸರಕುಗಳ ಮೇಲೆ ಬೇಕಾದಷ್ಟು ಮಾರ್ಜಿನ್ ಪಡೆಯುವ ಅವಕಾಶ ವ್ಯಾಪಾರಿಗಳಿಗೆ ಇರುತ್ತೆ ಆದರೆ ಪುಸ್ತಕ ಮತ್ತು ಪತ್ರಿಕೆ ವ್ಯಾಪಾರಿಗಳಿಗೆ ಹಾಗೆ ಮಾಡಲಾಗುವುದಿಲ್ಲ. ಇನ್ನೂ ಮುದ್ರಿತ ಬೆಲೆಯ ಮೇಲೆ ಡಿಸ್ಕೌಂಟ್ ಕೊಟ್ಟು ಮಾರಾಟ ಮಾಡಬೇಕಾಗುತ್ತೆ. ಹೀಗಿರುವಾಗ ಅಪಾರ ಲಾಭ ಇರುವ ಜನರಲ್ ಸ್ಟೋರ್ ವ್ಯಾಪಾರಿಯ ಬಿಡ್‌ಗೆ ಒಬ್ಬ ಪುಸ್ತಕ ವ್ಯಾಪಾರಿಯ ಬಿಡ್ ಪೈಪೋಟಿ ನೀಡಲಾದೀತೆ? ಸಹಜವಾಗಿಯೇ ಅದು ಪುಸ್ತಕ ವ್ಯಾಪಾರಿಯ ಕೈಬಿಟ್ಟು ಹೋಗುತ್ತೆ. ಅದರಲ್ಲೂ ಕೆಎಸ್‌ಆರ್‌ಟಿಸಿಯಲ್ಲಿ ಈಗಲೂ ಕೆಲವು ಕಡೆ ಓಪನ್ ಟೆಂಡರ್ ವ್ಯವಸ್ಥೆಯೇ ಜಾರಿಯಲ್ಲಿರೋದರಿಂದ ಸಿಕ್ಕಾಪಟ್ಟೆ ಲಾಭದ ರುಚಿಕಂಡುಕೊಂಡ ಇತರೆ ವ್ಯಾಪಾರಿಗಳ ಟೆಂಡರ್ ಕೂಗಾಟದ ಮುಂದೆ ಪುಸ್ತಕ ವ್ಯಾಪಾರಿಗಳು ತೆಪ್ಪಗಾಗಬೇಕಾಗುತ್ತೆ. ಎಷ್ಟೋ ಬಾರಿ ಪುಸ್ತಕ ವ್ಯಾಪಾರಕ್ಕೆಂದೇ ಬಿಡ್ ಕೂಗಿ ಮಳಿಗೆ ಶುರು ಮಾಡಿದವರೂ ತಮ್ಮ ವ್ಯಾಪಾರ ಬಾಡಿಗೆ ತುಂಬುವುದಕ್ಕೂ ಸುಸ್ತಾಗಿ ಹೋಗಿದ್ದನ್ನು ಕಂಡು ಆ ಮಳಿಗೆಯನ್ನು ಬೇಕರಿಯನ್ನೋ, ಜನರಲ್ ಸ್ಟೋರನ್ನೋ ಮಾಡಿಕೊಂಡ ನಿದರ್ಶನಗಳಿವೆ. ಈ ಮುಂಚೆ ಲಾಟರಿ ವ್ಯಾಪಾರ ನಡೆಯುತ್ತಿದ್ದಾಗ ಇದೇ ಪುಸ್ತಕದ ಮಳಿಗೆಯವರಿಗೆ ಸಾಕಷ್ಟು ಲಾಭದ ದಾರಿಯೂ ಇತ್ತು. ಆಗ ಪುಸ್ತಕ ಮಳಿಗೆ ಅಂತ ವರ್ಗೀಕರಣವಿದ್ದರಿಂದ ಬಾಡಿಗೆಯೂ ಕಡಿಮೆ ಇತ್ತು. ಹಾಗಾಗಿ ಹೆಚ್ಚೆಚ್ಚು ಪುಸ್ತಕ ಮಳಿಗೆಗಳು ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್‌ನಲ್ಲಿ ಕಾಣಸಿಗುತ್ತಿದ್ದವು. ಈಗ ಲಾಟರಿಯಂತೂ ನಿಷೇಧವಾಗಿದೆ, ಅವರಿಗೆ ಆದಾಯದ ಮೂಲ ಅಂತ ಇರೋದು ಪುಸ್ತಕ ಮತ್ತು ಪತ್ರಿಕೆಗಳ ಮೇಲೆ ಪ್ರಕಾಶನ ಸಂಸ್ಥೆಗಳು ನೀಡುವ ಮಾರ್ಜಿನ್ ಮಾತ್ರ. ಅಂತದ್ದರಲ್ಲಿ ಅವುಗಳನ್ನು ಜನರಲ್ ಸ್ಟೋರ್ ಆಗಿಸಿ ಅವರ ಆದಾಯವನ್ನೇ ಸ್ಟ್ರಾ ಹಾಕಿ ಹೀರಲು ಕುಳಿತರೆ ಹೇಗೆ ತಾನೆ ಪುಸ್ತಕ ವ್ಯಾಪಾರ ಉಳಿದೀತು?

ಪಕ್ಕದ ರಾಜ್ಯಗಳ ಸಾರಿಗೆ ಮಳಿಗೆಗಳಿಗೆ ಹೋಲಿಸಿದರೆ ಕೆಎಸ್‌ಆರ್‌ಟಿಸಿಯ ರೇಟುಗಳು ಅತಿಯಾಯಿತು ಅನ್ನಿಸದಿರದು. ಮಹಾರಾಷ್ಟ್ರದ ಉದಾಹರಣೆಯನ್ನೇ



ತೆಗೆದುಕೊಳ್ಳಿ. ಅಲ್ಲಿ ಒಮ್ಮೆ ಟೆಂಡರ್ ಕೂಗಿದ ವ್ಯಕ್ತಿಗೆ ಏಳು ವರ್ಷಗಳ (ನಮ್ಮಲ್ಲಿ ಕೇವಲ 5 ವರ್ಷ ಮಾತ್ರ) ಕಾಲ ಮಳಿಗೆಯನ್ನು ಬಾಡಿಗೆ ನೀಡಲಾಗುತ್ತೆ, ಅಲ್ಲದೇ ಈ ಏಳು ವರ್ಷದ ಅವಧಿಯಲ್ಲಿ ಹೆಚ್ಚೆಂದರೆ 5% ನಷ್ಟು ಬಾಡಿಗೆಯನ್ನಷ್ಟೇ ಜಾಸ್ತಿ ಮಾಡಬಹುದು. ಆದರೆ ನಮ್ಮಲ್ಲಿ ಪ್ರತಿ ವರ್ಷ 10% ಹಿಗ್ಗುತ್ತಾ ಹೋಗುತ್ತೆ, ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿ ಪುಸ್ತಕ ಮಳಿಗೆಗಳಿಗೆ ಅಂತ ಮೀಸಲಿಟ್ಟ ಮಳಿಗೆಗಳನ್ನು ಜನರಲ್ ಸ್ಟೋರ್ ಆಗಿಸಿ ಲಾಭಕ್ಕೆ ದಾರಿ ಮಾಡಿಕೊಂಡಿಲ್ಲ.

ಇಪ್ಪತ್ತು, ಮೂವತ್ತು ವರ್ಷಗಳಿಂದ ಇದೇ ವೃತ್ತಿಯಲ್ಲಿ ಬದುಕು ಕಟ್ಟಿಕೊಂಡವರು ಬೇರೆ ವಿಧಿಯಿಲ್ಲದೆ ದುಬಾರಿ ಬೆಲೆಯನ್ನು ತೆತ್ತು ಪುಸ್ತಕ ಮಳಿಗೆ ನಡೆಸುತ್ತಿದ್ದಾರಾದರೂ ಅವರಿಗೂ ಹಲವು ಸಮಸ್ಯೆಗಳಿವೆ. ಅಷ್ಟೆಲ್ಲ ದುಬಾರಿ ಬಾಡಿಗೆ ಕೊಟ್ಟರೂ 15% ಹೆಚ್ಚುವರಿ ಸರ್ವಿಸ್ ಟ್ಯಾಕ್ಸು, ಕರೆಂಟ್ ಬಿಲ್ಲನ್ನು ಇವರೇ ತುಂಬಿಸಿಕೊಳ್ಳಬೇಕು. ಅಲ್ಲದೇ ತಮ್ಮಲ್ಲಿ ಬಿಕರಿಯಾಗುವ ಪತ್ರಿಕೆ, ಪುಸ್ತಕಗಳು ಗ್ರಾಹಕರ ಕಣ್ಣಿಗೆ ಬೀಳುವಂತಿರಲಿ ಅಂತ ಮಳಿಗೆಯಿಂದ ಒಂಚೂರು ಟೇಬಲ್ಲನ್ನು ಮುಂಚಾಚಿ ಪುಸ್ತಕ ಜೋಡಿಸಿಕೊಂಡರೆ ಅದೊಂದು ದೊಡ್ಡ ಅಪರಾಧ ಎನ್ನುವಂತೆ ಫೋಟೊ ತೆಗೆದುಕೊಂಡು, ಟೇಬಲ್ಲು ಮಳಿಗೆಯಿಂದ ಎಷ್ಟು ಹೊರಗೆ ಬಂದಿದೆಯೋ ಅಷ್ಟನ್ನು ಅಳೆದು ಪ್ರತಿ ಹೆಚ್ಚುವರಿ ಸೆಂಟಿಮೀಟರ್‌ಗೆ ಇಂತಿಷ್ಟು ಅಂತ ಪೆನಾಲ್ಟಿ ಬಗಿಯುತ್ತಾರೆ.


ರಾಣೆಬೆನ್ನೂರಿನಂತಹ ಪುಟ್ಟ ಶಹರದ ಕೆಎಸ್‌ಆರ್‌ಟಿಸಿ ಮಳಿಗೆಯಲ್ಲಿ ಪುಸ್ತಕದಂಗಡಿ ನಡೆಸುತ್ತಿರುವ ವ್ಯಕ್ತಿ ಕಳೆದ ಮೂವತ್ತು ವರ್ಷಗಳಿಂದ ಇದನ್ನೇ ತನ್ನ ವೃತ್ತಿಯಾಗಿಸಿಕೊಂಡವರು. ಹೇಗೋ ಕಷ್ಟಪಟ್ಟು ನಾಲ್ಕು ವರ್ಷಗಳ ಹಿಂದೆ ಬಿಡ್‌ನಲ್ಲಿ ಮಳಿಗೆ ಬಾಡಿಗೆ ಹಿಡಿದು ಅಂಗಡಿ ನಡೆಸುತ್ತಿದ್ದಾರೆ. ಇದು ಅವರ ಗುತ್ತಿಗೆಯ ಕೊನೇ ವರ್ಷ. ಈಗಾಗಲೇ ಆ ಮಳಿಗೆಗೆ ದುಬಾರಿ ಬಾಡಿಗೆಯ ಬಿಡ್ ಕೂಗಲು ಬೇರೆಬೇರೆ ವ್ಯಾಪಾರಿಗಳು ತಯಾರಾಗಿ ನಿಂತಿದ್ದಾರೆ. ಅವರ ಲಾಭಕೋರತನದ ಮುಂದೆ ಪುಸ್ತಕ ವ್ಯಾಪಾರಿ ಸೆಣಸಾಡಲಾರ. ಮುಂದಿನ ಭವಿಷ್ಯ ಹೇಗೆ ಅನ್ನುವ ಚಿಂತೆ ಅವರನ್ನು ಈಗಲೇ ಕಾಡಲಾರಂಭಿಸಿದೆ. ತಮಗೇ ಗೊತ್ತಿಲ್ಲದೆ ಕನ್ನಡ ಸಾಹಿತ್ಯ ಸೇವೆ ಮಾಡಿಕೊಂಡು, ಕನ್ನಡ ಪತ್ರಿಕೋದ್ಯಮ ಗಟ್ಟಿಯಾಗಿ ನೆಲೆಯೂರಲು ನೆರವಾದ ಅದೆಷ್ಟು ಬದುಕುಗಳು ಕೆಎಸ್‌ಆರ್‌ಟಿಸಿಯ ಹೊಸ ನಿಯಮಗಳಿಂದಾಗಿ ಅತಂತ್ರಗೊಂಡಿವೆಯೋ ಗೊತ್ತಿಲ್ಲ.

ಈ ವಿಚಾರವನ್ನು ಇಟ್ಟುಕೊಂಡೇ ಮೊನ್ನೆ ನಮ್ಮ 'ಲಂಕೇಶ್' ಬಳಗ ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರನ್ನು ಭೇಟಿಯಾಗಿತ್ತು. ಕೆಎಸ್‌ಆರ್‌ಟಿಸಿ ತಂದಿಟ್ಟಿರುವ ಈ ಸಮಸ್ಯೆಯನ್ನು ವಿವರಿಸಿ ಮನದಿಕೆ ಮಾಡಿಕೊಟ್ಟಿದ್ದಲ್ಲದೆ ಈ ಮೊದಲಿದ್ದಂತೆ ಜನರಲ್ ಸ್ಟೋರ್‌ಗೆ ಬದಲಿಗೆ ಪುಸ್ತಕ ಮಳಿಗೆ ವರ್ಗೀಕರಣವನ್ನು ಮರುಸೃಷ್ಟಿಸುವಂತೆಯೂ, ಆ ಮಳಿಗೆಗೆ ಕಡಿಮೆ ಬಾಡಿಗೆಯನ್ನು ವಿಧಿಸುವಂತೆಯೂ ಮನವಿ ಮಾಡಿಕೊಂಡಿದ್ದೇವೆ. ಹೀಗೆ ಮಾಡಿದರೆ ಕನ್ನಡ ಭಾಷೆ, ಕನ್ನಡ ಪತ್ರಿಕೆಗಳು ಮತ್ತು ಕನ್ನಡ ಸಾಹಿತ್ಯಕ್ಕೆ ಅನುಕೂಲವಾಗುತ್ತದೆ ಮಾತ್ರವಲ್ಲ, ಪತ್ರಿಕೆ ಮತ್ತು ಪುಸ್ತಕ ಮಾರಾಟವನ್ನೇ ತಮ್ಮ ಜೀವನೋಪಾಯ ಮಾಡಿಕೊಂಡಿರುವ ನೂರಾರು ಜನರ ಬದುಕೂ ಉದ್ಧಾರವಾಗುತ್ತದೆ ಎಂದು ಒತ್ತಿ ಹೇಳಿದ್ದೇವೆ. ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು ವಿವರಗಳೊಂದಿಗೆ ಒಂದು ಪತ್ರವನ್ನು ತಲುಪಿಸಿದರೆ, ಅಧಿಕಾರಿಗಳೊಂದಿಗೆ ಚರ್ಚಿಸಿ ಆದಷ್ಟು ಬೇಗ ಸಮಸ್ಯೆ ಬಗೆಹರಿಸುವುದಾಗಿ ಭರವಸೆಯನ್ನೂ ಕೊಟ್ಟಿದ್ದಾರೆ.

ನಮ್ಮ ತಂಡ ಸದಾ ಕನ್ನಡ ಭಾಷೆ ಮತ್ತು ಸಾಹಿತ್ಯದ ಪರವಾಗಿದೆಯಲ್ಲದೆ, ದುಡಿಯುವ ಶ್ರಮಿಕ ವರ್ಗದ ಪರವಾಗಿದ್ದು ಸದ್ಯದಲ್ಲೇ ಬಸ್‌ಸ್ಟ್ಯಾಂಡ್‌ಗಳಲ್ಲಿ ಪತ್ರಿಕೆ ಮತ್ತು ಪುಸ್ತಕ ವ್ಯಾಪಾರಿಗಳಿಗೆ ಪ್ರತ್ಯೇಕ ಮಳಿಗೆಯನ್ನು ಕಡಿಮೆ ದರದಲ್ಲಿ ಕೊಡಬೇಕೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರಿಗೆ ಮನವಿಯನ್ನು ಸಲ್ಲಿಸಲಿವೆ.

– ಲಂಕೇಶ್ ಬಳಗ

ಶಾಸಕ ಗೋಪಾಲ ಪೂಜಾರಿಯಿಂದ ಭಾರೀ ಗೋಲ್‌ಮಾಲ್


ಗೋಪಾಲ್ ಪೂಜಾರಿ

ಜನತಾ ಹೈಸ್ಕೂಲ್ ಜಾಗ ಡೀಲ್!

ಕುಂದಾಪುರ ತಾಲೂಕಿನ ಹೆಮ್ಮಾಡಿ, ಕಟ್ಬೇಲ್ತೂರು, ಸುಳ್ಸೆ ಮುಂತಾದ ಸುತ್ತಮುತ್ತಲಿನ ಹಳ್ಳಿಗಳ ಜನರು ಐದಾರು ದಶಕಗಳ ಹಿಂದೆ ಸ್ಥಳೀಯ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ಕಟ್ಟಿ ಬೆಳೆಸಿ ಲಕ್ಷಾಂತರ ಜನರ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಕಾಣಿಕೆ ನೀಡಿದ ಜನತಾ ಪ್ರೌಢಶಾಲೆ ಎಂಬ ಹೆಮ್ಮೆಯ ವಿದ್ಯಾಸಂಸ್ಥೆ ಈಗ ಸ್ಥಳೀಯ ಶಾಸಕ ಗೋಪಾಲ ಪೂಜಾರಿ ಮತ್ತು ಕೆಲ ಸ್ಥಾಪಿತ ಹಿತಾಸಕ್ತಿಗಳ ಸ್ವಾರ್ಥಕ್ಕೆ ಬಲಿಯಾಗುತ್ತಿರುವ ಕಳವಳಕಾರಿ ವಿದ್ಯಮಾನ ನಡೆಯುತ್ತಿದೆ.

ಹೆಮ್ಮಾಡಿ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಅಂದಿನ ಶಿಕ್ಷಕರು, ಶಿಕ್ಷಣ ತಜ್ಞರು, ಮೇಧಾವಿಗಳು, ಊರಿನ ಸಾಮಾನ್ಯ ನಾಗರಿಕರು ಸ್ಥಾಪಿಸಿ ಬೆಳೆಸಿದ ಶಾಲೆ ಇದು. ಶ್ರೀ ವಿ.ವಿ.ವಿ. ಮಂಡಳಿ (ವಿದ್ಯಾದಾಯಿನಿ ವಿವಿಧೋದ್ದೇಶ ವಿದ್ಯಾಪ್ರಸಾರಕ ಮಂಡಳಿ) ಎಂಬ ಹೆಸರಿನ ಆಡಳಿತ ಮಂಡಳಿಯ ಹೆಸರಿನಲ್ಲಿ ಈ ಶಾಲೆ ನಡೆಯುತ್ತಿದೆ. 50 ವರ್ಷಗಳಿಗೂ ಹೆಚ್ಚಿನ ಇತಿಹಾಸವಿರುವ ಈ ಶಾಲೆ ಶಿಕ್ಷಣಕ್ಕೆ ಹೆಸರುವಾಸಿಯಾದ ಶಾಲೆ. ಹೈಸ್ಕೂಲ್ ಇಲ್ಲದ ತಲ್ಲೂರು, ತ್ರಾಸಿ, ಉಪ್ಪಿನಕುದ್ರು, ದೇವಲ್ಕುಂದ, ಹೊಸಾಡು, ಕಟ್ಬೇಲ್ತೂರು ಮುಂತಾದ ಊರುಗಳ ಅಂದಿನ ವಿದ್ಯಾರ್ಥಿಗಳು ಇದೇ ಶಾಲೆಗೆ ವಿದ್ಯಾಭ್ಯಾಸಕ್ಕೆ ಬರುತ್ತಿದ್ದರು. ಮಾತ್ರವಲ್ಲ ಕುಂದಾಪುರದ ಸೈಂಟ್ ಮೇರಿಸ್ ಮುಂತಾದ ಶಾಲೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮತ್ತೆ ಇಲ್ಲಿ 8ನೇ ತರಗತಿಯಿಂದ ವಿದ್ಯಾಭ್ಯಾಸ ಪುನರಾರಂಭಿಸಿ ಅತ್ಯುತ್ತಮ ಅಂಕ ಗಳಿಸಿ ಹೈಸ್ಕೂಲ್ ತೇರ್ಗಡೆಯಾಗುತ್ತಿದ್ದ ದಿನಗಳೂ ಇದ್ದವು. ವಿಶಾಲವಾದ ಕ್ಯಾಂಪಸ್, ಅತ್ಯುತ್ತಮ ಶಿಕ್ಷಕರು ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಅದಮ್ಯ ಪ್ರೋತ್ಸಾಹ ಇಂದಿಗೂ ಈ ಶಾಲೆಯ ವಿಶೇಷತೆಗಳು. ಸರ್ಕಾರದ ಅನುದಾನ ಪಡೆಯುತ್ತಿರುವ ಈ ಶಾಲೆ ಈ ಊರಿನ ಜನರ ಆಸ್ತಿ. ಬೈಂದೂರಿನಲ್ಲಿರುವ ರತ್ತುಬಾಯಿ ಜನತಾ ಹೈಸ್ಕೂಲ್ ಕೂಡ ಇದೇ ಆಡಳಿತ ಮಂಡಳಿ ನಡೆಸುತ್ತಿರುವ ಇನ್ನೊಂದು ಪ್ರೌಢಶಾಲೆ.

ವಿವಿವಿ ಮಂಡಳಿಗೆ ವಕ್ಕರಿಸಿದ ಪೂಜಾರಿ

ಕೆಲವು ದಶಕಗಳ ಕಾಲ ಶಾಲೆಯ ಸಂಸ್ಥಾಪಕರಲ್ಲಿ ಓರ್ವರಾದ ಸುಳ್ಸೆಯ ರಾಮರಾವ್ ಮುಂತಾದವರ ಕೈಯಲ್ಲಿ ಆಡಳಿತ ಮಂಡಳಿಯ ಚುಕ್ಕಾಣಿ ಇತ್ತು. ಆದರೆ ಕ್ರಮೇಣ ಅವರ ಅನಾರೋಗ್ಯ, ಊರಿನ ಕೆಲ ಹಿರಿಯರ ವೃದ್ಧಾಪ್ಯ, ಸುಳ್ಸೆ ಕರ್ಣಿಕ್ ಕುಟುಂಬದ ಯಾರೊಬ್ಬರೂ ಊರಿನಲ್ಲಿ ಇಲ್ಲದಿದ್ದುದು, ಶಾಲೆಯ ಹಿಂದಿನ ಮುಖ್ಯೋಪಾಧ್ಯಾಯ ಎಂ.ಕೆ.ಹೆಗ್ಡೆ ಅವರ ನಿವೃತ್ತಿ ಹೀಗೆ ಹಲವಾರು ಕಾರಣಗಳಿಂದ ಆಡಳಿತ ಮಂಡಳಿ ಸೊರಗುತ್ತಿದ್ದಾಗ ವಿವಿವಿ ಮಂಡಳಿಗೆ ಸ್ಥಳೀಯ ಶಾಸಕ ಗೋಪಾಲ ಪೂಜಾರಿ ಹಿಂದಿನ ಬಾಗಿಲಿನಿಂದ ನುಸುಳಿಬಿಟ್ಟರು. ಯಾವತ್ತು ಗೋಪಾಲ ಪೂಜಾರಿ ಈ ಆಡಳಿತ ಮಂಡಳಿಯ ಚುಕ್ಕಾಣಿ ಹಿಡಿದರೋ ಅಂದಿನಿಂದ ಅದು ಅವರ ಕುಟುಂಬದ ಆಸ್ತಿಯಂತಾಗಿ ಬಿಟ್ಟಿತು. ಹೆಮ್ಮಾಡಿಯ ಜನತಾ ಪ್ರೌಢಶಾಲೆಯ ಪ್ರಮುಖ ಆಕರ್ಷಣೆ ಎಂದರೆ ಈ ಶಾಲೆಗೆ ಸೇರಿದ ವಿಶಾಲವಾದ ಜಾಗ. ಈ ಜಾಗವೇ ಈಗ ಈ ಪ್ರೌಢಶಾಲೆಗೆ ಮುಳುವಾಗಿಬಿಟ್ಟಂತಿದೆ. ಎಷ್ಟೆಂದರೂ ಶಾಸಕ ಗೋಪಾಲ ಪೂಜಾರಿ ರಿಯಲ್ ಎಸ್ಟೇಟ್ ಉದ್ಯಮಿ ತಾನೆ?

ಆಡಳಿತ ಮಂಡಳಿಯಲ್ಲಿ ಪೂಜಾರಿ ಬಂಧುಗಳು!

ಶಿಕ್ಷಣ ತಜ್ಞರು, ಶಿಕ್ಷಕರು, ಊರಿನ ಪ್ರಮುಖರು ಇರಬೇಕಾಗಿದ್ದ ಶಾಲಾಡಳಿತ ಮಂಡಳಿಯಲ್ಲಿ ಈಗ ಯಾರು ತುಂಬಿಕೊಂಡಿದ್ದಾರೆ ಗೊತ್ತೆ? ಶಾಸಕ ಗೋಪಾಲ ಪೂಜಾರಿಯ ತಮ್ಮಂದಿರು, ಭಾವನೆಂಟ, ಸೋದರಳಿಯ, ಅವರ ನಿಕಟ ಬಂಧುಗಳು, ರಾಜಕಾರಣಿಗಳು. ಹೆಸರಿಗೆ ಎಂಬಂತೆ ಊರಿನ ಪ್ರಮುಖರಲ್ಲಿ ಒಂದಿಬ್ಬರ ಹೆಸರು ಮಾತ್ರ ಈ ಸಮಿತಿಯಲ್ಲಿ ಸೇರ್ಪಡೆಯಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ವಿವಿವಿ ಮಂಡಳಿ ಈಗ ಗೋಪಾಲ ಪೂಜಾರಿಯವರ ಕೌಟುಂಬಿಕ ಮಂಡಳಿ ಎಂದರೆ ತಪ್ಪಲ್ಲ. ವಿವಿವಿ ಮಂಡಳದ ಮೀಟಿಂಗ್ ಮಾಡುವುದಾದರೆ ಗೋಪಾಲ ಪೂಜಾರಿ ಬೆಳಗ್ಗೆ ಮನೆಯಲ್ಲಿ ತಿಂಡಿ ತಿನ್ನುವಾಗಲೇ ಮಾಡಿಬಿಡಬಹುದು. ಅಷ್ಟರಮಟ್ಟಿಗೆ ಅದು ಅವರದ್ದಾಗಿಬಿಟ್ಟಿದೆ.

ಸ್ವತಃ ಶಾಸಕರೇ ಜನತಾ ಪ್ರೌಢಶಾಲೆಯ ಆಡಳಿತ ಮಂಡಳಿಯಲ್ಲಿದ್ದರೂ ಹೈಸ್ಕೂಲ್ ಕಟ್ಟಡ ನೋಡಿದರೆ ಈಗ ಬೀಳುತ್ತದೋ ಮತ್ತೊಂದು ಕ್ಷಣದಲ್ಲಿ ಬೀಳುತ್ತದೋ ಅನಿಸುತ್ತಿದೆ. ಜೂನಿಯರ್ ಕಾಲೇಜ್ ಒಂದನ್ನು ಸ್ಥಾಪಿಸಿದ್ದು ಬಿಟ್ಟರೆ ಇಲ್ಲಿ ಗೋಪಾಲ ಪೂಜಾರಿ ಮಾಡಿದ್ದು ಬೇರೇನೂ ಇಲ್ಲ. ಸ್ಥಾಪಿಸಿದ ಕಾಲೇಜ್ ಅಭಿವೃದ್ಧಿ ಬಗ್ಗೆಯೂ ಯಾವುದೇ ಆಸಕ್ತಿ ವಹಿಸದ ಶಾಸಕರು ಈಗ ಕಾಲೇಜನ್ನು ಸಹ ಪರಭಾರೆ ಮಾಡಲು ಹೊರಟಿದ್ದಾರೆ. ಇಷ್ಟೆಲ್ಲ ಕಥೆಯನ್ನು ಈಗ ಹೇಳಲು ಕಾರಣವಿದೆ.

ಶಾಲಾ ಜಾಗ ಪರಭಾರೆ!

ಹೆಮ್ಮಾಡಿಯ ಜನರ ಆಸ್ತಿಯಾಗಿರುವ ಜನತಾ ಪ್ರೌಢಶಾಲೆಯ ಜಾಗವನ್ನು ಈಗ ಬೆಂಗಳೂರಿನಲ್ಲಿರುವ ದುಡ್ಡು ಮಾಡುವ ಇಂಗ್ಲಿಷ್ ಶಾಲೆಯೊಂದಕ್ಕೆ ಮಾರಾಟ ಮಾಡಲು ಶಾಸಕ ಗೋಪಾಲ ಪೂಜಾರಿ ತುದಿಗಾಲಲ್ಲಿ ನಿಂತಿದ್ದಾರೆ. ಅದರ ಮೊದಲನೆಯ ಹಂತವಾಗಿ ಈಗ ಶಾಲೆಯ ಜಾಗವನ್ನು ಆಡಳಿತ ಮಂಡಳಿಯ ಗಮನಕ್ಕೂ ಸಹ ತಾರದೆ ಬೆಂಗಳೂರಿನ ಇಂಗ್ಲಿಷ್ ಶಾಲೆಯವರಿಗೆ 35 ವರ್ಷಗಳ ಮಟ್ಟಿಗೆ ಲೀಸ್ ಆಧಾರದಲ್ಲಿ ನೀಡಲಾಗಿದೆ. ಬೆಂಗಳೂರಿನಲ್ಲಿ ಗುರುದರ್ಶನ್ ಪಬ್ಲಿಕ್ ಸ್ಕೂಲ್ ಎಂಬ ಸಂಸ್ಥೆಯನ್ನು ನಡೆಸುತ್ತಿರುವ ಗುರುದರ್ಶನ್ ಎಜುಕೇಶನ್ ಟ್ರಸ್ಟ್‌ಗೆ ಜನತಾ ಹೈಸ್ಕೂಲ್ ಜಾಗವನ್ನು ಲೀಸ್ ಮೇಲೆ ಕೊಡಲಾಗಿದೆ. ಇಡೀ ಶಾಲೆಯ ಜಾಗವನ್ನೇ ಬೆಂಗಳೂರಿನ ಸಂಸ್ಥೆಗೆ ಕೋಟಿಗಟ್ಟಲೆ ಹಣಕ್ಕೆ ಮಾರಾಟ ಮಾಡಲಾಗಿದೆ ಎಂಬ ಗುಸುಗುಸು ಸುದ್ದಿ ಚಾಲ್ತಿಯಲ್ಲಿದ್ದರೂ ಅದಿನ್ನೂ ಸಾಬೀತಾಗಿಲ್ಲ. ಶಾಸಕ ಗೋಪಾಲ ಪೂಜಾರಿ ಹೇಗೆ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಸರ್ಕಾರಕ್ಕೂ, ಹೆಮ್ಮಾಡಿಯ ಜನರಿಗೂ ಮೋಸ ಮಾಡುತ್ತಿದ್ದಾರೆಂದರೆ ಶಾಸಕರೊಬ್ಬರು ಹೀಗೂ ಮಾಡಬಹುದೆ ಎಂದು ಅಚ್ಚರಿಯಾಗಬಹುದು. ಈ ಕೆಳಗಿನ ಅಂಶಗಳನ್ನು ಗಮನಿಸಿ.

ನಿಯಮದ ಉಲ್ಲಂಘನೆ

ಹೆಮ್ಮಾಡಿಯ ಜನತಾ ಪ್ರೌಢಶಾಲೆ ಅನುದಾನಿತ ಪ್ರೌಢಶಾಲೆ. ಸರ್ಕಾರದ ಸಂಬಳ, ಸವಲತ್ತು, ಅನುದಾನ ಎಲ್ಲವೂ ಈ ಶಾಲೆಗೆ ಲಭಿಸುತ್ತದೆ. ಹೀಗಿರುವಾಗ ಅನುದಾನಿತ ಪ್ರೌಢಶಾಲೆಯ ಜಾಗದಲ್ಲೇ ಇನ್ನೊಂದು ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ಆರಂಭಿಸುವಂತಿಲ್ಲ ಎಂದು ನಿಯಮವಿದ್ದರೂ ಆ ಎಲ್ಲ ನಿಯಮ ಗಾಳಿಗೆ ತೂರಿ ಸರ್ಕಾರಕ್ಕೆ ಸಂಬಂಧಿಸಿದ ಜಾಗವನ್ನು ಇನ್ನೊಂದು ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆ ನೀಡಲಾಗಿದೆ.

ಆಡಳಿತ ಮಂಡಳಿಯಲ್ಲಿ ಇರುವ ಗೋಪಾಲ ಪೂಜಾರಿ ಬಂಧುಗಳು ಹೇಗೂ ಅವರದೇ ಅಣತಿಗೆ ತಕ್ಕ ಹಾಗೆ ಕುಣಿಯುತ್ತಾರೆ. ಆದರೆ ಇದೇ ಮಂಡಳಿಯಲ್ಲಿ ಹೆಸರಿಗಷ್ಟೇ ಇರುವ ಇತರ ಒಂದಿಬ್ಬರು ಸದಸ್ಯರ ಬಳಿ ಕೇಳಿದರೆ ನಮಗೇನೂ ಗೊತ್ತಿಲ್ಲ. ಎಷ್ಟು ವರ್ಷಕ್ಕೆ ಕೊಡಲಾಗಿದೆ, ಎಷ್ಟು ಹಣ ಪಡೆಯಲಾಗಿದೆ, ಹಣವನ್ನು ಯಾವ ಖಾತೆಗೆ ಜಮಾ ಮಾಡಲಾಗಿದೆ ಎಂದು ತಮಗೆ ಗೊತ್ತಿಲ್ಲ ಎಂಬ ಉತ್ತರ ಬರುತ್ತದೆ. ಎಲ್ಲವನ್ನೂ ಶಾಸಕ ಗೋಪಾಲ ಪೂಜಾರಿ ಯಾರ ಗಮನಕ್ಕೂ ತಾರದೆ ಸ್ವಂತ ನಿರ್ಧಾರ ತೆಗೆದುಕೊಂಡು ಮಾಡಿದ್ದಾರೆ. ಎಲ್ಲಿಯವರೆಗೆ ಎಂದರೆ ಇಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಇಲ್ಲಿ ಏನು ನಡೆಯುತ್ತಿದೆ ಎಂಬುದೇ ತಿಳಿದಿಲ್ಲ. ಮಂಡಳಿಯ ಉಪಾಧ್ಯಕ್ಷರಿಗೂ ಈ ಡೀಲ್ ಕುರಿತ ಮಾಹಿತಿ ಇಲ್ಲ. ಅಷ್ಟಕ್ಕೂ ಗೋಪಾಲ ಪೂಜಾರಿ ಅಥವಾ ಇತರ ಯಾರಿಗೇ ಆಗಲಿ ಈ ಅನುದಾನಿತ ಪ್ರೌಢಶಾಲೆಯ ಜಾಗ ಪರಭಾರೆ ಮಾಡುವ ಅಧಿಕಾರವೇ ಇಲ್ಲ.

ಇಂಗ್ಲಿಷ್ ಶಾಲೆಗೆ ಅನುಮತಿ ಇಲ್ಲ

ಇದೀಗ ಶಾಲೆ ನಡೆಸಲು ಬಂದಿರುವ ಗುರುದರ್ಶನ್ ಎಜುಕೇಶನ್ ಟ್ರಸ್ಟ್‌ಗೆ ಶಾಲೆ ನಡೆಸಲು ಅನುಮತಿಯೇ ಸಿಕ್ಕಿಲ್ಲ. ಆದರೂ ಗುರು ರಕ್ಷಾ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್ ಎಂಬ ದೊಡ್ಡ ಹೆಸರಿಟ್ಟುಕೊಂಡು ಶಾಲೆ ಆರಂಭಗೊಂಡಿದೆ. ನಿಜವಾಗಿಯೂ ಇಲ್ಲಿ ಇಂಟರ್‌ನ್ಯಾಶನಲ್ ಬಿಡಿ ಗ್ರಾಮೀಣ ಶಾಲೆಯ ವಾತಾವರಣವೂ ಇಲ್ಲ. ಶಾಲೆಯನ್ನು ನಡೆಸಲಿಕ್ಕೆ ಅನುಮತಿ ಸಿಗದಿದ್ದರೂ ಎಲ್ಕೆಜಿಯಿಂದ 8ನೆ ತರಗತಿಯವರೆಗೆ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. ಇದರ ಹಿಂದೆ ಇನ್ನೊಂದು ರಹಸ್ಯವಿದೆ.

5ನೇ ತರಗತಿವರೆಗೆ ಅನುಮತಿ

ಹೆಮ್ಮಾಡಿಯ ಜನತಾ ಶಾಲೆ ನಡೆಸುವ ಶ್ರೀ ವಿವಿವಿ ಮಂಡಳಿ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆ ನಡೆಸಲು ಶಿಕ್ಷಣ ಇಲಾಖೆಗೆ ಅನುಮತಿ ಕೋರಿದೆ. ಶಿಕ್ಷಣ ಇಲಾಖೆ ಈ ಮಂಡಳಿಗೆ 1ರಿಂದ 5ನೆಯ ತರಗತಿವರೆಗೆ ಇಂಗ್ಲಿಷ್ ಮಾಧ್ಯಮ ಶಾಲೆ ನಡೆಸಲು ಅನುಮತಿ ನೀಡಿದೆ. ಅಂದರೆ ಈಗ ಹೆಮ್ಮಾಡಿಯ ವಿವಿವಿ ಮಂಡಳಿ ಸ್ವತಃ ಇಂಗ್ಲಿಷ್ ಮಾಧ್ಯಮ ಶಾಲೆ ನಡೆಸಬೇಕು. ಅದೂ ಸಹ 5ನೆಯ ತರಗತಿವರೆಗೆ ಮಾತ್ರ. ಆದರೆ ಈಗ ಇಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆ ನಡೆಸುತ್ತಿರುವುದು ಬೆಂಗಳೂರಿನ ಗುರುದರ್ಶನ್ ಎಜುಕೇಶನ್ ಟ್ರಸ್ಟ್. ಇವರಿಗೆ ಶಾಲೆ ನಡೆಸಲು ಯಾವುದೇ ಅನುಮತಿ ಇಲ್ಲದಿದ್ದರೂ 8ನೆಯ ತರಗತಿವರೆಗಿನ ಶಾಲೆಯನ್ನು ಈ ಸಂಸ್ಥೆ ನಡೆಸಲಿದೆ.

ಬಿಎಸ್‌ಇ ಶಾಲೆ ಎಂಬ ಹಸೀ ಸುಳ್ಳು

ಇನ್ನೂ ಒಂದು ಸುಳ್ಳು ಹೀಗಿದೆ. ಈ ಶಾಲೆಯಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಎಂದು ಎಲ್ಲೆಡೆ ಪ್ರಚಾರ ಮಾಡಲಾಗಿದೆ. ಶಾಲೆಯ ಪ್ರಚಾರ ಸಾಮಗ್ರಿಗಳಲ್ಲಿ, ಶುಲ್ಕ ವಿವರಿಸುವ ಪತ್ರಗಳಲ್ಲಿ ಸಿಬಿಎಸ್‌ಇ ಎಂದೇ ನಮೂದಿಸಲಾಗಿದೆ. ಆದರೆ ಈ ಶಾಲೆಗೆ ಸಿಬಿಎಸ್‌ಇ ಇಂದ ಯಾವುದೇ ಮಾನ್ಯತೆ ಇಲ್ಲ. ಈ ಕುರಿತು ಸಿಬಿಎಸ್‌ಇ ಜೊತೆ ವ್ಯವಹರಿಸಿದಾಗ ಇದು ಅಕ್ರಮ ಶಾಲೆ, ನಮ್ಮ ಮಾನ್ಯತೆ ಇಲ್ಲ ಎಂದೇ ಉತ್ತರ ಸಿಕ್ಕಿದೆ.

ಯಾವುದೇ ಅನುಮತಿ ಇಲ್ಲದ ಶಾಲೆಯ ಎಲ್‌ಕೆಜಿ ಶುಲ್ಕ ಎಷ್ಟು ಗೊತ್ತೆ? ಬರೋಬ್ಬರಿ 26 ಸಾವಿರ ರೂಪಾಯಿಗಳು. ಸುತ್ತಮುತ್ತಲ ಊರುಗಳಲ್ಲಿ ಇರುವ ಹೆಸರಾಂತ ಮತ್ತು ಬಹಳ ವರ್ಷಗಳಿಂದ ಕಾರ್ಯಾಚರಿಸು ತ್ತಿರುವ ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಸ್ಟೇಟ್ ಸಿಲಬಸ್ ಶಾಲೆಗಳಲ್ಲೂ ಇಷ್ಟು ದುಬಾರಿ ಶುಲ್ಕ ಇಲ್ಲ. ಫೀಸ್ ಕಟ್ಟುವವರಿಗೆ ಸಿಬಿಎಸ್‌ಇ ಪಠ್ಯಕ್ರಮಕ್ಕೆ ಇಷ್ಟು ಶುಲ್ಕ ಎಂದು ಮುದ್ರಿಸಿಯೇ ಕೊಡಲಾಗುತ್ತಿದೆ.

420 ಕೇಸ್ ಹಾಕಬೇಕಾದ ಶಾಲೆ


ಅತ್ತ ಸರ್ಕಾರದ ಅನುಮತಿಯೂ ಇಲ್ಲ, ಇತ್ತ ಸಿಬಿಎಸ್‌ಇ ಪಠ್ಯ ಕ್ರಮವೂ ಇಲ್ಲ, ಶಾಲೆ ನಡೆಸುವ ಜಾಗವೂ ಇವರದಲ್ಲ. ಆದರೂ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್, ಸಿಬಿಎಸ್‌ಇ, 8ನೇ ತರಗತಿವರೆಗೆ ದಾಖಲಾತಿ ಎಂದೆಲ್ಲ ಹೇಳಿ ಜನರನ್ನು ವಂಚಿಸುವ ಈ ಶಾಲೆಯ ವಿರುದ್ಧ ಸಾರ್ವಜನಿಕರು 420 ಕೇಸ್ ಹಾಕಬಹುದು ಎಂದು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಕಾಲೇಜು ಕೂಡ ಗುರುದರ್ಶನ್ ಟ್ರಸ್ಟ್‌ಗೆ

ವಿವಿವಿ ಮಂಡಳಿ ಆರಂಭಿಸಿದ ಸ್ವಾಯತ್ತ ಪದವಿಪೂರ್ವ ಕಾಲೇಜನ್ನು ಸಹ ಈಗ ಗುರುದರ್ಶನ್ ಟ್ರಸ್ಟ್‌ಗೆ ವರ್ಗಾಯಿಸಲಾಗಿದೆ. ಹಾಗೆಯೇ ಕಾಲೇಜು ಶುಲ್ಕ ಕೂಡ ದುಬಾರಿಯಾಗಿದೆ. ತಾವು ಪಾಠ ಮಾಡುವ ಕಾಲೇಜು ಈಗ ಯಾರ ಆಡಳಿತದಲ್ಲಿದೆ ಎಂಬುದು ಅಲ್ಲಿ ಕೆಲಸ ಮಾಡುವ ಉಪನ್ಯಾಸಕರಿಗೂ ಗೊತ್ತಿಲ್ಲ.

ಒಂದೇ ಆವರಣದಲ್ಲಿ ಒಂದು ಹಳೆಯ ಪ್ರೌಢಶಾಲೆ. ಇನ್ನೊಂದೆಡೆ ಇಂಗ್ಲಿಷ್ ಮಾಧ್ಯಮ ಶಾಲೆ. ಹೈಸ್ಕೂಲ್ ವಿದ್ಯಾರ್ಥಿಗಳ ಸಂಪೂರ್ಣ ಬಳಕೆಗಾಗಿ ಇರುವ ಮೈದಾನ ಮತ್ತು ಇತರ ಸೌಲಭ್ಯಗಳನ್ನು ಇನ್ನು ದುಡ್ಡುಕೊಟ್ಟು ಲೀಸ್‌ಗೆ ಪಡೆದ ಇಂಗ್ಲಿಷ್ ಶಾಲೆಯವರೇ ಹೆಚ್ಚು ಬಳಕೆ ಮಾಡಿಕೊಳ್ಳುವುದಂತೂ ನಿಜ.

ಇನ್ನೂ ಒಂದು ದುರಂತವೆಂದರೆ ವಿವಿವಿ ಮಂಡಳಿ ಕಾಲೇಜಿಗೆಂದು ಕಟ್ಟಿಸಿದ ಕಟ್ಟಡವನ್ನು ಈಗ ಇಂಗ್ಲಿಷ್ ಮಾಧ್ಯಮ ಶಾಲೆಗೆ ಬಾಡಿಗೆಗೆ ನೀಡಲಾಗಿದೆ. ಇದೇ ಕಟ್ಟಡದಲ್ಲಿ ಜನತಾ ಹೈಸ್ಕೂಲ್ ವಿದ್ಯಾರ್ಥಿಗಳನ್ನು ಕೂರಿಸಿ ಪಾಠ ಮಾಡಬಹುದಿತ್ತು. ಆದರೆ ದುಡ್ಡು ಮಾಡಲು ಹೊರಟಿರುವ ಶಾಸಕ ಪೂಜಾರಿ ಕನ್ನಡದ ಮಾಧ್ಯಮ ಹೈಸ್ಕೂಲ್ ವಿದ್ಯಾರ್ಥಿಗಳನ್ನು ಶಿಥಿಲಾವಸ್ಥೆಯ ಕಟ್ಟಡದಲ್ಲಿಯೇ ಪಾಠ ಕೇಳುವ ದೌರ್ಭಾಗ್ಯಕ್ಕೆ ಒಡ್ಡಿದ್ದಾರೆ.


ಬಾಬು ರಾ[illegible]

ಋಣ ತೀರಿಸುತ್ತಾರಂತೆ ಬಾಬುರಾವ್!

ಈಗ ಹೆಮ್ಮಾಡಿಯಲ್ಲಿ ಆರಂಭವಾಗಲಿರುವ ಗುರು ರಕ್ಷಾ ಶಾಲೆಯ ಸ್ಥಾಪಕ ಬಾಬುರಾವ್ ಅವರು ಬೆಂಗಳೂರಿನಲ್ಲಿ 10 ವರ್ಷಗಳಿಂದ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಶಾಲೆ ನಡೆಸುತ್ತಿದ್ದು ಇದೀಗ ಹುಟ್ಟೂರ ಋಣ ತಿರಿಸಲು ಬರುತ್ತಿದ್ದಾರಂತೆ. ಅದಕ್ಕಾಗಿ ಇಲ್ಲಿ ಅಂತಾರಾಷ್ಟ್ರೀಯ ಮಟ್ಟದ ಶಾಲೆ ಸ್ಥಾಪಿಸುತ್ತಾರಂತೆ. ಬಾಬುರಾವ್ ಅವರು ಹುಟ್ಟೂರ ಋಣ ತೀರಿಸಲು ಬರುತ್ತಿದ್ದಾರೋ ಅಥವಾ ಇವರ ಹುಟ್ಟೂರಿನಲ್ಲಿರುವ ಮಕ್ಕಳ ತಂದೆತಾಯಂದಿರನ್ನು ಇವರ ದುಬಾರಿ ಶುಲ್ಕ ಕಟ್ಟಲಿಕ್ಕಾಗಿ ಸಾಲದಲ್ಲಿ ಮುಳುಗಿಸಲು ಬರುತ್ತಿದ್ದಾರೋ ಅನ್ನುವ ಅನುಮಾನ ಮೂಡಿದೆ. ಈ ಪರಿಸರದಲ್ಲಿ ಎಲ್ಲೂ ಇರದ ದುಬಾರಿ ಶುಲ್ಕವನ್ನು ವಸೂಲಿ ಮಾಡುತ್ತಿರುವ ಶಾಲೆ ದುಡ್ಡು ಮಾಡಲು ಇಲ್ಲಿಗೆ ಬರುತ್ತಿದೆ ವಿನಃ ಶಿಕ್ಷಣ ನೀಡುವ ಸಲುವಾಗಿ ಅಲ್ಲ ಎಂಬುದು ಎಲ್ಲರಿಗೂ ಅರ್ಥವಾಗಬಹುದಾದ ವಿಷಯ.

ಅನಧಿಕೃತ ಶಾಲೆ ಉದ್ಘಾಟನೆಗೆ ಸಚಿವರು, ಶಾಸಕರು!

ಈ ರೀತಿ ದುಬಾರಿ ಶುಲ್ಕ ವಸೂಲಿ ಮಾಡುತ್ತಾ ಸಿಬಿಎಸ್‌ಇ ಎಂದು ಸುಳ್ಳು ಹೇಳುತ್ತಾ ಜನರನ್ನು ಎಲ್ಲ ಬಗೆಯಿಂದಲೂ ವಂಚಿಸುತ್ತಿರುವ ಶಾಲೆಯನ್ನು ಜಿಲ್ಲಾ ಉಸ್ತುವಾರಿ ಮತ್ತು ನಗರಾಭಿವೃದ್ಧಿ ಸಚಿವ ವಿನಯ ಕುಮಾರ್ ಸೊರಕೆ ಉದ್ಘಾಟಿಸಿ ಹೋಗಿದ್ದಾರೆ. ಇಂತಹ ಅನಧಿಕೃತ ಶಾಲೆಯೊಂದರ ಉದ್ಘಾಟನೆಗೆ ಅವರು ಕಣ್ಣು ಮುಚ್ಚಿಕೊಂಡು ಬಂದಿದ್ದಾರೆ. ವಿಶೇಷವೆಂದರೆ ಜನಪ್ರತಿನಿಧಿಯಾದ ಶಾಸಕ ಗೋಪಾಲ ಪೂಜಾರಿ ಸ್ವತಃ ಜನರಿಗೂ ಮತ್ತು ಸರ್ಕಾರಕ್ಕೂ ಮೋಸ ಮಾಡಿ ಆರಂಭಿಸುತ್ತಿರುವ ಈ ಶಾಲೆಗೆ ಸರ್ಕಾರದಲ್ಲಿರುವ ಜವಾಬ್ದಾರಿಯುತ ಪ್ರತಿನಿಧಿಗಳು ಬೆಂಬಲ ನೀಡುವರೆ ಕಾದು ನೋಡಬೇಕಾಗಿದೆ. ಕಾಂಗ್ರೆಸ್ ಶಾಸಕ ಗೋಪಾಲ ಪೂಜಾರಿ ಪ್ರೊಟೊಕಾಲ್ ಪ್ರಕಾರ ಕರೆಯಬೇಕಾಗಿದ್ದ ಸಂಸದ ಯಡಿಯೂರಪ್ಪ ಅಥವಾ ಇತರ ಬಿಜೆಪಿ ಎಂಎಲ್‌ಸಿಗಳನ್ನು ಸಹ ಶಾಲೆಯ ಉದ್ಘಾಟನಾ ಸಮಾರಂಭಕ್ಕೆ ಸೌಜನ್ಯಕ್ಕಾದರೂ ಕರೆದಿಲ್ಲ.

ಜನತೆಯನ್ನು ಕತ್ತಲಲ್ಲಿಟ್ಟ ಶಾಸಕರು

ಹೆಮ್ಮಾಡಿಯ ಜನತೆ ವಿಶ್ವಾಸವಿಟ್ಟು ಶಾಸಕ ಗೋಪಾಲ ಪೂಜಾರಿಯನ್ನು ವಿವಿವಿ ಮಂಡಳಿಯ ಅಧ್ಯಕ್ಷರನ್ನಾಗಿ ವಿನಿಯೋಗ ಮಾಡಿದರು. ಆದರೆ ಪೂಜಾರಿ ಮಾತ್ರ ಜನರ ವಿಶ್ವಾಸಕ್ಕೆ ಕೊಡಲಿಯೇಟು ಕೊಟ್ಟಿದ್ದಾರೆ. ಹೆಮ್ಮಾಡಿಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಶಾಲೆಯ ಜಾಗವನ್ನು ಮಾರಿ ತಿನ್ನಲು ಹೊರಟಿದ್ದಾರೆ. ಮಾತ್ರವಲ್ಲ ಶಾಲೆ ಸಿಬಿಎಸ್‌ಇ ಪಠ್ಯ ಕ್ರಮ ಎಂದು ಸುಳ್ಳು ಹೇಳುತ್ತಾ ಹೆಮ್ಮಾಡಿ ಪರಿಸರದ ಮಕ್ಕಳಿಗೂ, ಹೆತ್ತವರಿಗೂ ವಂಚನೆ ಮಾಡುತ್ತಿದೆ. ಅನುಮತಿ ಇಲ್ಲದ ಶಾಲೆಯನ್ನು ನಡೆಸಲು ಬೆಂಬಲ ಕೊಟ್ಟಿದ್ದು ಮಾತ್ರವಲ್ಲ ಅವರ ರಕ್ಷಣೆಗೂ ನಿಂತಿದ್ದಾರೆ ಪೂಜಾರಿ. ಹೆಮ್ಮಾಡಿಯ ಜನತಾ ಪ್ರೌಢಶಾಲೆಯನ್ನು ಅಧೋಗತಿಗೆ ತಲುಪಿಸಿದ ಬಳಿಕ ಹೆದ್ದಾರಿ ಪಕ್ಕದಲ್ಲೇ ಇರುವ ಶಾಲೆಯ 6 ಎಕರೆ ವಿಸ್ತಾರದ ಭೂಮಿಯನ್ನು ವಶಮಾಡಿಕೊಂಡು ತನ್ನ ಸ್ವಂತಕ್ಕೆ ಬಳಸಿಕೊಳ್ಳುವ ಅಥವಾ ಮಾರಾಟ ಮಾಡುವ ಹುನ್ನಾರ ಗೋಪಾಲ ಪೂಜಾರಿಯವರಿಗೆ ಇದ್ದಂತಿದೆ ಎಂಬುದು ಸ್ಥಳೀಯರ ಅಂಬೋಣ. ಗೋಪಾಲ ಪೂಜಾರಿ ಕೈಗೊಳ್ಳುತ್ತಿರುವ ಏಕಪಕ್ಷೀಯ ವಿವೇಚನಾರಹಿತ ನಿರ್ಧಾರಗಳು ಅದನ್ನೇ ಸೂಚಿಸುತ್ತಿವೆ.

ಶಾಲೆಯ ಜಾಗವನ್ನು ತನ್ನ ಆಸ್ತಿಯಂತೆ ಭಾವಿಸಿ ಶಾಲಾ ಜಾಗ ಮಾರಲು ಹೊರಟಿರುವ ಶಾಸಕ ಗೋಪಾಲ ಪೂಜಾರಿಯವರ ವಿರುದ್ಧ ಹೆಮ್ಮಾಡಿಯ ಜನತೆ ಸಿಡಿದು ನಿಲ್ಲುವ ದಿನ ದೂರವಿಲ್ಲ.


● ವರದಿಗಾರ



ಹಳೇ ಶಾಲಾ ಕಟ್ಟಡ


ಹೊಸ ಶಾಲಾ ಕಟ್ಟಡ

ದಕ್ಷಿಣ ಪದವೀಧರ ಚುನಾವಣೆ

ಮುರಿದುಬಿತ್ತು ಕುಮ್ಮಿ-ಚೆಲ್ವಿ ಲವ್ವಿಡವ್ವಿ!






ೇದು ದಕ್ಷಿಣ ಪದವೀಧರ ಚುನಾವಣೆ ಜೆಡಿಎಸ್‌ನಲ್ಲಿ ತ್ರ ಧಿಕ್ಕತ್ತು. ಕಳೆದ ಆರೇಳು ತಿಂಗಳಿಂದ ಜೆಡಿಎಸ್ ಮನೆಯಂತಾಗಿರುವುದು ರಹಸ್ಯ ಸಂಗತಿಯೇನೂ ಇತ್ತ ದೇವೇಗೌಡ್ರು, ಕುಮಾರಸ್ವಾಮಿ ಒಟ್ಟೊಟ್ಟಿಗೆ ಏನು, ನಮ್ ಪಕ್ಷದ ಸಾಮರ್ಥ್ಯ ಏನು, ಅಂತಕ್ಕದ್ದನ್ನ ಸ್ತೀವಿ, ಫೀನಿಕ್ಸ್‌ನಂತೆ ಎದ್ದು ಬರ್ತೀವಿ' ಅಂತ ತ್ತಿದ್ದಂತೆಯೇ ಅತ್ತ ಜಮೀರು, ಚೆಲುವರಾಯಸ್ವಾಮಿ ಲಿಯನ್ನು ಸಿಎಂ ಸಿದ್ದರಾಮಯ್ಯರನ್ನು ಭೇಟಿ ಮಾಡಿದ ಹರಿದಾಡುತ್ತೆ. ಇತ್ತ ಕುಮಾರಣ್ಣ 'ನಾವೆಲ್ಲ ಗಿದೀವಿ' ಅಂತ ಹೇಳಿದ ಕ್ಷಣಕ್ಕೆ ಸರಿಯಾಗಿ ಅತ್ತ ೀರು 'ನಾವೊಂದ್ಯೆದು ಶಾಸಕ್ರು ರಾಜ್ಯಸಭಾ ನ್‌ನಾಗೆ ಕಾಂಗ್ರೆಸ್ನು ಕ್ಯಾಂಡಿಡೇಟಗೆ ಓಟ್ ಮಾಡ್ತಿವಿ' ಮಾತನ್ನು ಟೀವಿ ಕ್ಯಾಮೆರಾದ ಮುಂದೆ ತೇಲಿಬಿಡ್ತಾರೆ. ಜೆಡಿಎಸ್ ಪಾರ್ಟಿಯ ಭಿನ್ನಮತದ ಕುರುಹುಗಳು.


ಬಿಎಂಪಿ ಎಲೆಕ್ಷನ್‌ನಿಂದಲೂ ಕುಮಾರಸ್ವಾಮಿ ಮತ್ತು ೇಗೌಡರ ಜೊತೆ ಅಷ್ಟಕ್ಕಷ್ಟೇ ಎನ್ನುವಂತಿರುವ ವರಾಯಸ್ವಾಮಿ ಈಗ ತನ್ನ ಬೆಂಬಲಿಗ ವಿ.ಕೆ. ೀಶನಿಗೆ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಕೊಡಲಿಲ್ಲ ಅಂತ ಬಹಿರಂಗ ಸಮರವನ್ನೇ ದ್ದಾರೆ. ಪಕ್ಷದ ಅಧಿಕೃತ ಅಭ್ಯರ್ಥಿ ಕೆ.ಟಿ.ಶ್ರೀಕಂಠೇಗೌಡರ ಗಿ ನಾನು ಕೆಲಸ ಮಾಡಲ್ಲ, ಈ ಚುನಾವಣೆಯಲ್ಲಿ ನಾಗಿದ್ದುಬಿಡುತ್ತೇನೆ ಅಂತ ಈಗಾಗಲೇ ಘೋಷಿಸಿರುವ ವಣ್ಣ ಜೆಡಿಎಸ್ ಕ್ಯಾಂಡಿಡೇಟನ್ನು ಅಡ್ಡಡ್ಡ ಮಲಗಿಸಲು ಗಲೇ ತೆರೆಮರೆಯ ಕಸರತ್ತು ಶುರು ಮಾಡಿದ್ದಾರೆ. ಭಾಗವಾಗಿಯೇ ಮೊನ್ನೆ ತನ್ನ ಪರಮಾಪ್ತ ಟಿಕೆಟ್ ತ ಜಗದೀಶ್‌ನನ್ನು ಖುದ್ದು ಯಡ್ಡಿಯ ಸಮ್ಮುಖದಲ್ಲೇ ಗೆ ಸೇರ್ಪಡೆ ಮಾಡಿಸಿದ್ದಾರೆ. ಅಲ್ಲಿಗೆ ಜೆಡಿಎಸ್ ತ್ತೊಂದು ಸುತ್ತಿನ ವಿಘಟನೆಗೆ ಸಜ್ಜಾಗಿದೆ ಅನ್ನೋದು ಯಾದಂತಾಯ್ತು.

2010ರಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಟಿಕೆಟ್‌ಗಾಗಿ ವರಾಯಸ್ವಾಮಿ ಶಿಷ್ಯ ವಿ.ಕೆ.ಜಗದೀಶ್ ಸಾಕಷ್ಟು ಪ್ರಯತ್ನ ದ್ದ ತನ್ನ ಶಿಷ್ಯ ವಿ.ಕೆ.ಜಗದೀಶನಿಗೆ ಟಿಕೆಟ್ ಕೊಡಿಸಲು ವರಾಯಸ್ವಾಮಿ ಕೂಡ ಇನ್ನಿಲ್ಲದ ಪ್ರಯತ್ನ ನಡೆಸಿದ್ದರು. ಚುನಾವಣೆಯಲ್ಲಿ ಕೆ.ಟಿ.ಶ್ರೀಕಂಠೇಗೌಡರೇ ಸ್ಪರ್ಧಿಸಲಿ, ದಿನ ಚುನಾವಣೆಯಲ್ಲಿ ವಿ.ಕೆ.ಜಗದೀಶನಿಗೆ ಅವಕಾಶ ೋಣ' ಎಂದು ಕುಮಾರಸ್ವಾಮಿ ಸಮಾಧಾನಪಡಿಸಿ ಆದರೆ ಈ ಬಾರಿಯ ಚುನಾವಣೆಯಲ್ಲಿ ಕುಮಾರ ಹಾಗೂ ಚೆಲುವರಾಯಸ್ವಾಮಿ ದೋಸ್ತಿಯಲ್ಲಿ ಬಿರುಕು ಡಿದ್ದನ್ನೇ ಲಾಭ ಮಾಡಿಕೊಂಡ ಕೆ.ಟಿ.ಶ್ರೀಕಂಠೇಗೌಡ, ತಮ್ಮಣ್ಣನ ಮೂಲಕ ಟಿಕೆಟ್ ಪಡೆಯುವಲ್ಲಿ ಸ್ವಿಯಾದರು. ಬೀಗ ದೇವೇಗೌಡರ ಆಶೀರ್ವಾದವಿದ್ದೂ . ಅಧ್ಯಕ್ಷ ಸ್ಥಾನದಲ್ಲಿ ನಾಗರತ್ನ ಸ್ವಾಮಿಯನ್ನು ಸಲಾಗದೆ ತೀವ್ರ ಮುಖಭಂಗ ಅನುಭವಿಸಿದ ತಮ್ಮಣ್ಣ ದರೂ ಮಾಡಿ ಚೆಲುವರಾಯಸ್ವಾಮಿಗೆ ತಿರುಗೇಟು ು ಕಾತರಿಸುತ್ತಿದ್ದ, ಅದಕ್ಕೆ ವೇದಿಕೆ ಕಲ್ಪಿಸಿಕೊಟ್ಟದ್ದು ಪದವೀಧರ ಕ್ಷೇತ್ರದ ಚುನಾವಣೆ. ಶ್ರೀಕಂಠೇಗೌಡನ ವಕಾಲತ್ತು ವಹಿಸಿದ ತಮ್ಮಣ್ಣ ಜಗದೀಶ್‌ಗೆ ಟಿಕೆಟು ಖುಷಿ ಅನುಭವಿಸಿದ್ದು ಚೆಲುವರಾಯಸ್ವಾಮಿಗೆ ಲಾಗಲಿಲ್ಲ, ಹಾಗಾಗಿ ಶ್ರೀಕಂಠೇಗೌಡರನ್ನು ಮಕಾಡೆ ಗಿಸಲು ತಯಾರಾಗಿದ್ದಾರೆ.

ಸಂಘಟನೆಗಿಂತ ಹೆಚ್ಚಾಗಿ ವಿಘಟನೆಯನ್ನೇ ಕಂಡುಬಂದ ಜೆಡಿಎಸ್ಸು, ಬಂಡಾಯ, ಭಿನ್ನಮತ ಆ ಪಾರ್ಟಿಗೆ ದೇನೂ ಅಲ್ಲ, ಆದರೆ ಈ ಸಲದ ಬಂಡಾಯವಂತೂ ರ ಪಾರ್ಟಿಗೆ ಭರ್ಜರಿ ಏಟನ್ನೇ ಕೊಡಲಿದೆ. ಹಿಂದೆ ಾಮಯ್ಯ, ಎಂಪಿ ಪ್ರಕಾಶ್‌ರಂತ ನಾಯಕರನ್ನು ಕೊಂಡಾಗಲೂ ಜೆಡಿಎಸ್‌ನ ಅಸ್ಥಿಗೆ ಯಾವ ಏಟೂ ಲಿಲ್ಲ, ಹಾಗಾಗಿ ಅದು ರೆಬೆಲ್ ಆಗಿ ನಿಲ್ಲುತ್ತಲೇ ತ್ತು ಅಷ್ಟಕ್ಕೂ ಜೆಡಿಎಸ್‌ನ ಅಸ್ಥಿ ಬಂಡವಾಳ ಎಲ್ಲವೂ ಮೈಸೂರು ಭಾಗದ ಪ್ರಭಾವಿ ಒಕ್ಕಲಿಗ ಮತಬ್ಯಾಂಕ್. ದು ಜಾತ್ಯತೀತ ಪಾರ್ಟಿ ಅಂತೇಳಿಕೊಳ್ಳುತ್ತಲೇ ೇಗೌಡರು ಅಂತ ಒಂದು ಭದ್ರ ಜಾತಿ ಓಟ್ ಬ್ಯಾಂಕ್ ಿಂದನ್ನು ಸೃಷ್ಟಿಸಿಕೊಂಡಿದ್ದರು. ರೇಸ್‌ಕೋರ್ಸ್ ಬಳಿಯೇ ಹಳೇ ಜನತಾದಳ ಆಫೀಸಿನ ಒಡೆತನದ ಹುಯುಲ್ಲಿ ಕಾಂಗ್ರೆಸ್ ಮುಂದೆ ಮುಗ್ಗರಿಸಿ ಬಿದ್ದಾಗ ರೆಬಿಂದಾಗಲೂ ದೇವೇಗೌಡರ ಜೆಡಿಎಸ್‌ಗೆ ಜಾಗ ಕೊಟ್ಟಿದ್ದು ಇದೇ ಒಕ್ಕಲಿಗರ ಸಂಘ! ಅಷ್ಟರಮಟ್ಟಿಗೆ ಜೆಡಿಎಸ್ ಪಾರ್ಟಿಯನ್ನು ಒಕ್ಕಲಿಗ ಜಾತಿಯೊಂದಿಗೆ ಗೌಡರು ಬೆಸೆದುಬಿಟ್ಟಿದ್ದರು. ಎಸ್.ಎಂ.ಕೃಷ್ಣ, ಡಿಕೆ ಶಿವಕುಮಾರ್, ಅಂಬರೀಶ್, ಆರ್.ಅಶೋಕ್ ಥರದ ಒಕ್ಕಲಿಗ ನಾಯಕರು ಬೇರೆ ಪಕ್ಷದಲ್ಲಿದ್ದಾಗಲೂ ಒಕ್ಕಲಿಗ ಸಮುದಾಯ ತನ್ನ ಪ್ರಶ್ನಾತೀತ ನಾಯಕ ಅಂತ ಸ್ವೀಕರಿಸಿದ್ದು ದೇವೇಗೌಡರನ್ನು ಮಾತ್ರ. ಈಗ ಎದ್ದಿರುವ ಭಿನ್ನಮತ ಜೆಡಿಎಸ್‌ನ ಅಸ್ಥಿಯನ್ನೇ ಅಲ್ಲಾಡಿಸುತ್ತಿರುವುದು ದೇವೇಗೌಡರನ್ನು ಇನ್ನಿಲ್ಲದಂತೆ ಕಂಗೆಡಿಸಿದೆ. ಆದರೆ ಒಬ್ಬ ಅನುಭವಿ ಪೊಲಿಟಿಶಿಯನ್ನಾಗಿ ಅದನ್ನೆಲ್ಲಾ ಹೊರಗಡೆ ತೋರಿಸಿಕೊಳ್ಳುತ್ತಿಲ್ಲ ಅಷ್ಟೆ!

ಅದು ಚೆಲುವರಾಯಸ್ವಾಮಿ





ಕುಮಾರಸ್ವಾಮಿಯ ನಂತರ ದೇವೇಗೌಡರು ಹೆಚ್ಚು ಭರವಸೆಯಿಟ್ಟು ಬೆಳೆಸಿದ್ದೆಂದರೆ ಅದು ನಾಗಮಂಗಲದ ಚೆಲುವರಾಯಸ್ವಾಮಿ. ಒಕ್ಕಲಿಗ ಪ್ರಾಬಲ್ಯವಿರುವ ಮಂಡ್ಯ, ಮೈಸೂರು ಭಾಗಗಳಲ್ಲಿ ಜೆಡಿಎಸ್ ಪಕ್ಷವನ್ನು ಇವತ್ತೂ ಕಂಟ್ರೋಲ್‌ನಲ್ಲಿ ಇಟ್ಟುಕೊಂಡಿರೊದು ಅಂದ್ರೆ ಅದು ಕುಮಾರಣ್ಣ ಅಲ್ಲ, ಚೆಲುವರಾಯಸ್ವಾಮಿ! ಒಂದು ಕಾಲಕ್ಕೆ ಕುಚಿಕ್ಕು ಗೆಳೆಯರಂತಿದ್ದ ಕುಮ್ಮಿ-ಚೆಲ್ವಿಯ ಜೋಡಿ ಇವತ್ತು ಪಕ್ಕಾ ಜಿದ್ದಾಜಿದ್ದಿಗೆ ಬಿದ್ದ ಪ್ರತಿಸ್ಪರ್ಧಿಗಳು. ಇದೆಲ್ಲಾ ಶುರುವಾದದ್ದು ದೇವೇಗೌಡರು ತಮ್ಮ ಸಂಬಂಧಿ ಅನ್ನೋ ಕಾರಣಕ್ಕೆ ಡಿ.ಸಿ. ತಮ್ಮಣ್ಣ ಎಂಬ ಸಮಯಸಾಧಕ ರಾಜಕಾರಣಿಗೆ ಮಣೆ ಹಾಕಿ ಪಕ್ಷದೊಳಗೆ ಸೇರಿಸಿಕೊಂಡ ದಿನದಿಂದ.

ಮಂಡ್ಯ ಜಿಲ್ಲಾ ದಳದ ಮಟ್ಟಿಗೆ ಚೆಲುವರಾಯಸ್ವಾಮಿ ಹಾಗೂ ಸಂಸದ ಸಿ.ಎಸ್.ಪುಟ್ಟರಾಜುರೇ ನಾಯಕರು. ಇಡೀ ಜಿಲ್ಲೆಯಲ್ಲಿ ಇವರಿಬ್ಬರ ಮಾತಿಗೆ ಸಾಕಷ್ಟು ಬೆಲೆಯಿದೆ. ಇಂತಹ ಸಂದರ್ಭದಲ್ಲಿ ಕಳೆದ ವಿಧಾನಸಭಾ ಚುನಾವಣೆಯ ವೇಳೆ ಬೀಗತನದ ನಂಟನ್ನೇ ಮುಂದುಮಾಡಿಕೊಂಡು ಪಕ್ಷ ಸೇರಿ ಮದ್ದೂರಿನ ಶಾಸಕನಾದ ಡಿ.ಸಿ.ತಮ್ಮಣ್ಣ ನಂತರದ ದಿನಗಳಲ್ಲಿ ಪಕ್ಷದಲ್ಲಿ ತನ್ನ ಹಿಡಿತ ಸಾಧಿಸಲು ಮುಂದಾಗಿದ್ದು ಚೆಲುವಣ್ಣ ಹಾಗೂ ಪುಟ್ಟಣ್ಣನಿಗೆ ಕೋಪ ತರಿಸಿತ್ತು; ಕಳೆದ ಜಿ.ಪಂ. ಅಧ್ಯಕ್ಷ ಚುನಾವಣೆಯ ಸಂದರ್ಭದಲ್ಲಿ ತನ್ನ ಶಿಷ್ಯ ದುಡ್ಡಿನಕುಳ ಸ್ವಾಮಿಯ ಪತ್ನಿ ನಾಗರತ್ನರನ್ನು ಅಧ್ಯಕ್ಷೆಯನ್ನಾಗಿಸಲು ದೇವೇಗೌಡರ ಅನುಮತಿಯೊಂದಿಗೆ ತಯಾರಾಗಿ ಬಂದಿದ್ದ ಡಿ.ಸಿ.ತಮ್ಮಣ್ಣನ ಪ್ಲಾನ್ ಸಂಪೂರ್ಣ ಉಲ್ಟಾ ಮಾಡಿದ ಚೆಲುವಣ್ಣ ಹಾಗೂ ಪುಟ್ಟರಾಜಣ್ಣ ತಮ್ಮ ಬಣದ ಪ್ರೇಮಕುಮಾರಿಯನ್ನು ಗೆಲ್ಲಿಸಿಕೊಂಡು ತಮ್ಮಣ್ಣನ ನಡು ಮುರಿದಿದ್ದರು.

ಹೀಗೆ ಜಿಲ್ಲೆಯ ಮೇಲೆ ಹಿಡಿತ ಸಾಧಿಸುವ ವಿಚಾರವಾಗಿ ತಮ್ಮಣ್ಣ ಮೂಲ ಜೆಡಿಎಸ್ ನಾಯಕರ ಮೇಲೆ ಜಿದ್ದಿಗೆ ಬಿದ್ದದ್ದು ಚೆಲುವರಾಯಸ್ವಾಮಿಗೆ ಸುತರಾಂ ಇಷ್ಟವಾಗಲಿಲ್ಲ, ಯಾವಾಗ ತಮ್ಮಣ್ಣನ ಈ ಕಾಯಕಗಳಿಗೆ ದೊಡ್ಡಗೌಡರ ಸಮ್ಮತಿಯೂ ಇದೆ ಅನ್ನೋದು ಗೊತ್ತಾಗಿ ಹೋಯ್ತೋ ಆಗಿನಿಂದ ಚೆಲುವರಾಯಸ್ವಾಮಿ, ಕುಮ್ಮಿಗೆ ಮತ್ತು ತಮ್ಮಣ್ಣನಿಗೆ ಟಾಂಗ್ ನೀಡುತ್ತಲೇ ಬಂದಿದ್ದಾರೆ. ಜಿಲ್ಲಾ ಪಂಚಾಯತ್ ಅಧ್ಯಕ್ಷಗಾದಿಯಲ್ಲದೆ ಇನ್ನೂ ಎರಡು ಬಾರಿ ಅಂತಹ ರುಚಿಯನ್ನು ತಮ್ಮಣ್ಣನಿಗೆ ತೋರಿಸಿರುವ ಚೆಲುವರಾಯಸ್ವಾಮಿ ಜಿಲ್ಲೆಯಲ್ಲೇ ತಾನೇ ಬಲಾಢ್ಯ ಅನ್ನೋದನ್ನು ಸಾಬೀತುಮಾಡಿದ್ದಾರೆ.

ಇತ್ತೀಚೆಗೆ ಮದ್ದೂರು ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಹುಮತವಿದ್ದರೂ, ತಮ್ಮಣ್ಣನ ಬೆಂಬಲಿಗರಿಗೆ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ತಪ್ಪಿಸಿದ ಚೆಲುವಣ್ಣ ಕಾಂಗ್ರೆಸ್ ಸದಸ್ಯರ ಸಹಾಯ ಪಡೆದು ತನ್ನ ಬೆಂಬಲಿಗನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದಾರೆ. ಅಲ್ಲದೆ ಕಾಂಗ್ರೆಸ್ ಸದಸ್ಯ ಬಿ.ಎಂ.ರಘು ಎಂಬಾತನನ್ನು ಉಪಾಧ್ಯಕ್ಷನಾಗುವಂತೆ ಮಾಡಿ ಡಿ.ಸಿ.ತಮ್ಮಣ್ಣನ ಗರ್ವಭಂಗ ಮಾಡಿದರು. ಇದಾದನಂತರ ಮದ್ದೂರು ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷದ ಸಹಕಾರ ಪಡೆದು ತನ್ನ ಬೆಂಬಲಿಗರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿ ಡಿ.ಸಿ.ತಮ್ಮಣ್ಣನಿಗೆ ಮುಟ್ಟಿನೋಡಿಕೊಳ್ಳುವಂತೆ ಹೊಡೆತ ಕೊಟ್ಟಿದ್ದಾರೆ. ತಮ್ಮ ಪಕ್ಷದ ಬಲಾಢ್ಯ ವಿರುವ ಮಂಡ್ಯದಲ್ಲೇ ಚೆಲುವರಾಯಸ್ವಾಮಿ ಬಂಡಾಯವೆದ್ದಿರುವುದು ನಿಜಕ್ಕೂ ಕುಮಾರಸ್ವಾಮಿಯನ್ನು ಕಂಗೆಡಿಸಿರುವಂತಿದೆ. ಮೇ 30ರಂದು ಮಂಡ್ಯದ ಗ್ರೀನ್‌ಪ್ಯಾಲೇಸ್‌ನಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಶ್ರೀಕಂಠೇಗೌಡನ ಪರ ಕುಮ್ಮಿ ಮಾಡಿದ ಭಾಷಣವೇ ಇದನ್ನು ಬಿಚ್ಚಿಡುತ್ತೆ.

ಚೆಲುವಣ್ಣನ ಬಂಗಲೆ 50 ಕೋಟಿಯಂತೆ


ಜೆಡಿಎಸ್‌ನಲ್ಲಿದ್ದುಕೊಂಡೇ ಚೆಲುವರಾಯಸ್ವಾಮಿ, ಜಮೀರ್ ಅಹಮದ್, ಮಾಗಡಿ ಬಾಲಕೃಷ್ಣ ಅಖಂಡ ಶ್ರೀನಿವಾಸಮೂರ್ತಿ ಮತ್ತು ಇಕ್ಬಾಲ್ ಅನ್ಸಾರಿ ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡುವುದಾಗಿ ಘೋಷಿಸಿರುವುದರಿಂದ ಕೆಂಡಮಂಡಲರಾಗಿರುವ ಕುಮಾರಸ್ವಾಮಿ ತನ್ನ ಭಾಷಣದುದ್ದಕ್ಕೂ ಹೆಸರೆತ್ತದೇ ಚೆಲುವಣ್ಣನನ್ನು ಜಾಡಿಸಿದ್ದು ಇಬ್ಬರ ನಡುವಿನ ಬಿರುಕು ತಲುಪಿರುವ ಪರಾಕಾಷ್ಠೆಯ ಪ್ರತೀಕದಂತಿತ್ತು.


'ಕೇವಲ 25 ಸಾವಿರ ಗುತ್ತಿಗೆ ಬಿಲ್‌ಗಾಗಿ ದೇವೇಗೌಡರ ಮನೆಬಾಗಿಲಿಗೆ ಬಂದು ಕೈಕಟ್ಟಿ ನಿಂತುಕೊಳ್ಳುತ್ತಿದ್ದ ವ್ಯಕ್ತಿಯೊಬ್ಬ ಇಂದು ಅವರನ್ನೇ ಪ್ರಶ್ನೆ ಮಾಡುವ ಮಟ್ಟಕ್ಕೆ ಬೆಳೆದಿದ್ದಾನೆ. ದೇವೇಗೌಡರ ಆಶೀರ್ವಾದದಿಂದ ಶಾಸಕನಾಗಿ, ಸಚಿವನಾಗಿ ಅಧಿಕಾರ ಅನುಭವಿಸಿ ಹಣ ಮಾಡಿಕೊಂಡು, ಈಗ ಅವರನ್ನೇ ದೂಷಿಸುತ್ತಿದ್ದಾನೆ. ಹಣ-ಅಧಿಕಾರ ಮತ್ತು ಗುತ್ತಿಗೆಗಾಗಿ ಕಾಂಗ್ರೆಸ್ ನಾಯಕರ ಮುಂದೆ ಹೋಗಿ ಹಲ್ಲು ಗಿಂಜಿಕೊಂಡು ನಿಲ್ಲುವ ಇವರಂತೆ ನಾನು ಎಂದಿಗೂ ಯಾರ ಮನೆ ಬಾಗಿಲಿಗೂ ಹೋಗಿಲ್ಲ, ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುತ್ತೇವೆಂದು ಡಿ.ಕೆ.ಶಿವಕುಮಾರ್ ಜೊತೆ ಕೈಜೋಡಿಸಿರುವ ಇವರು, ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗೆ ಮತ ಹಾಕುತ್ತೇವೆಂದು ಯಡಿಯೂರಪ್ಪನ ಜೊತೆ ಕೈಜೋಡಿಸಿದ್ದಾರೆ. ಹಣ-ಅಧಿಕಾರಕ್ಕಾಗಿ ಸ್ವಾಭಿಮಾನ ಬಿಟ್ಟು ಯಾರ ಜೊತೆಗಾದರೂ ಕೈಜೋಡಿಸುವ ಇವರಿಗೆಲ್ಲಾ ಅಧಿಕಾರ ಕೊಟ್ಟದ್ದೇ ತಪ್ಪಾಯಿತು. ಜಿಲ್ಲೆಯಲ್ಲಿ ಎಸ್.ಡಿ.ಜಯರಾಂ ನಂತರ ಪಕ್ಷ ಕಟ್ಟಿದ್ದೇನೆ ಎಂದು ಹೇಳುತ್ತಾರೆ. ಅವರೊಬ್ಬರೇ ಪಕ್ಷ ಕಟ್ಟಿ ಬೆಳೆಸಿದ್ರಾ? ನನ್ನ ಮತ್ತು ದೇವೇಗೌಡರ ಕಾಣಿಕೆ ಇಲ್ಲವಾ? ದೇವೇಗೌಡರಾಗಲೀ, ನಾನಾಗಲೀ ಒಬ್ಬ ಬಾಲಕನನ್ನೂ ಏಕವಚನದಲ್ಲಿ ಮಾತನಾಡಿಸುವುದಿಲ್ಲ, ಆದರೆ ಈತ ಏನ್ಲಾ ಬಡ್ಡೆತ್ತದೇ ಎಂದು ಮಾತನಾಡಿಸುತ್ತಾರೆ. ಕಳೆದ ಚುನಾವಣೆಯಲ್ಲಿ ಕೆ.ಟಿ.ಶ್ರೀಕಂಠೇಗೌಡರಿಂದ ತನ್ನ ಶಿಷ್ಯ ವಿ.ಕೆ.ಜಗದೀಶನಿಗೆ ಲಕ್ಷ ಲಕ್ಷ ಹಣ ಕೊಡಿಸಿದ್ದಲ್ಲದೆ, ವಿರೋಧ ಮಾಡಿದರೂ ಚೆಕ್ ಕೇಸ್ ಹಾಕಿಸಿರುವುದು ಸರಿಯೇ? ಇಂತಹವರಿಗೆ ರಾಜಕಾರಣದಲ್ಲಿ ಬೆಳೆಯಲು ಅವಕಾಶ ಕೊಟ್ಟು ಹಣ-ಆಸ್ತಿ ಮಾಡಿಕೊಳ್ಳುವಂತೆ ಮಾಡಿದ್ದೇ ತಪ್ಪಾ? ಈತ ಕಟ್ಟಿರುವ ಬಂಗಲೆಯ ಮೊತ್ತವೇ 50 ಕೋಟಿಯಷ್ಟಾಗುತ್ತದೆ. ಇದುವರೆಗೂ ನನಗೆ ಅಷ್ಟೊಂದು ದೊಡ್ಡ ಮೊತ್ತದ ಮನೆ ಕಟ್ಟಲು ಸಾಧ್ಯವಾಗಿಲ್ಲ, ಇದುವರೆಗೂ ತಾಳ್ಮೆಯಿಂದ ಈಗ ಸರಿಹೋಗುತ್ತಾರೆ, ಆಗ ಸರಿಹೋಗುತ್ತಾರೆ ಎಂದು ಕಾದಿದ್ದೇ ತಪ್ಪಾಯಿತು. ಭಗವಂತ ಅನ್ನುವನೊಬ್ಬ ಇದ್ದಾನೆ. ಮುಂದಿನ ತೀರ್ಮಾನವನ್ನು ಜನರಿಗೆ ಬಿಡುತ್ತೇನೆ' ಅಂತ ಉಸಿರು ಬಿಗಿಹಿಡಿದು ಒಂದೇಸಮನೆ ತಮ್ಮ ಸಿಟ್ಟನ್ನೆಲ್ಲ ಕುಮಾರಸ್ವಾಮಿ ಕಾರಿಕೊಳ್ಳುತ್ತಿದ್ದರೆ ಆ 25 ಸಾವಿರ ಗುತ್ತಿಗೆ ಗಿರಾಕಿ ಚೆಲುವರಾಯಸ್ವಾಮಿಯೇ ಅನ್ನೋ ಬಗ್ಗೆ ಯಾರಲ್ಲೂ ಅನುಮಾನ ಉಳಿದಿರಲಿಲ್ಲ, ಅಲ್ಲಿಗೆ ಕುಮಾರಸ್ವಾಮಿ ಹಾಗೂ ಚೆಲುವರಾಯಸ್ವಾಮಿ ದೋಸ್ತಿ ಖತಂ ಎಂಬ ಸಂದೇಶ ಸ್ಪಷ್ಟವಾಗಿಯೇ ರಾಜ್ಯ ರಾಜಕಾರಣಕ್ಕೆ ರವಾನೆಯಾಗಿದೆ. ಒಂದುವೇಳೆ ರಾಜ್ಯಸಭೆ ಚುನಾವಣೆಯಲ್ಲಿ ಚೆಲುವಣ್ಣ ಅಂಡ್ ಟೀಂ ಕಾಂಗ್ರೆಸ್ ಅಭ್ಯರ್ಥಿಗೆ ಮತಹಾಕಿದರೆ ಅವರೆಲ್ಲರನ್ನೂ ಉಚ್ಚಾಟಿಸಲು ವೇದಿಕೆ ಸಿದ್ಧವಾಗಿರೋದನ್ನೂ ಕುಮಾರಸ್ವಾಮಿ ಪರೋಕ್ಷವಾಗಿ ಹೊರಹಾಕಿದ್ದಾರೆ.


ಹಾಗೇನಾದರು ಆದಲ್ಲಿ ಅದು ಜೆಡಿಎಸ್ ಪಾರ್ಟಿಯನ್ನು ಹೊಸ ಕವಲು ಹಾದಿಗೆ ತಂದು ನಿಲ್ಲಿಸುವುದರಲ್ಲಿ ಯಾವ ಅನುಮಾನವೂ ಇಲ್ಲ.

● ವರದಿಗಾರ

ಮೂವರಿಗೂ 'ಭಿನ್ನ'ವೇ ಗೂಟ!







ಜೂನ್ 9ಕ್ಕೆ ನಡೆಯಲಿರುವ ದಕ್ಷಿಣ ಪದವೀಧರ ಕ್ಷೇತ್ರದ ಎಂಎಲ್‌ಸಿ ಎಲೆಕ್ಷನ್ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಈ ಮೂರೂ ಪಕ್ಷಗಳಲ್ಲಿ ಸೋಲುಗೆಲುವಿನ ತಮ್ಮದೇ ಗುಣಾಕಾರ-ಭಾಗಾಕಾರ ನಡೆಯುತ್ತಿದ್ದರೂ ಮೂವರಿಗೂ ಆಂತರಿಕ ಭಿನ್ನಮತವೇ ದೊಡ್ಡ ತಲೆನೋವಿನ ಸಂಗತಿಯಾಗಿದೆ. ಮಂಡ್ಯ ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳನ್ನು ಒಗ್ಗೂಡಿರುವ 1,15,000ಕ್ಕೂ ಹೆಚ್ಚು ಮತದಾರರಿರುವ ಇಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಭಾರತೀಯ ವೈದ್ಯಕೀಯ ಮಂಡಳಿ ಸದಸ್ಯ ಡಾ.ಎಚ್.ಎನ್.ರವೀಂದ್ರರಿಗೆ ಆರಂಭದಲ್ಲೇ ಭಿನ್ನಮತದ ಬಿಸಿತಟ್ಟಿತ್ತು. ರವೀಂದ್ರ ಬದಲು ಕಳೆದ ಬಾರಿ ಸೋತಿದ್ದ ಲಕ್ಷ್ಮಣ್‌ಗೆ ಟಿಕೆಟ್ ಕೊಟ್ಟಿದ್ದರೆ ಫಲಿತಾಂಶ ಕಾಂಗ್ರೆಸ್ ಪರವಾಗಿರುತ್ತಿತ್ತು ಎನ್ನುವ ಮಾತಿನ ನಡುವೆಯೂ ಸಿಎಂ ಸಿದ್ದರಾಮಯ್ಯ ಸಚಿವರಾದ ಮಹದೇವಪ್ಪ ಮಹದೇವಪ್ರಸಾದ್, ಶ್ರೀನಿವಾಸ್ ಪ್ರಸಾದ್ ಮೊದಲಾದವರು ಕಾಂಗ್ರೆಸ್ ಪಕ್ಷದ ಮಾನ ಉಳಿಸುವ ಭಾಗವಾಗಿ ರವೀಂದ್ರರನ್ನು ಗೆಲ್ಲಿಸಿಕೊಳ್ಳಲು ಹೊರಟಿದ್ದಾರೆ. ರವೀಂದ್ರ ಸೋತರೆ ಸಿಎಂ ಸಿದ್ದರಾಮಯ್ಯನವರಿಗೆ ಮುಖಭಂಗವಾಗುತ್ತೆ ಅನ್ನೋದೇ ಅವರೆಲ್ಲರ ಆತಂಕಕ್ಕೆ ಕಾರಣ.

ಇನ್ನು ಬಿಜೆಪಿ ಪಕ್ಷ 3 ಬಾರಿ ಇದೇ ಕ್ಷೇತ್ರದಿಂದ ಗೆದ್ದಿದ್ದ ಗೋ.ಮಧುಸೂದನ್‌ಗೆ ಕೈಕೊಟ್ಟು ಮೈಲಾಕ್ ಮಾಜಿ ಅಧ್ಯಕ್ಷ ಮೈ.ವಿ.ರವಿಶಂಕರನನ್ನು ಕಣಕ್ಕಿಳಿಸಿದೆ. ಟಿಕೆಟ್ ತಪ್ಪಿದ ಸಿಟ್ಟಿಗೆ ಗೋ.ಮಧುಸೂದನ್ ಉಲ್ಟಾ ಹೊಡೆದರೆ ಬಿಜೆಪಿಗೆ ದೊಡ್ಡ ಲುಕ್ಸಾನು. ಇದನ್ನು ತಡೆಗಟ್ಟಲೆಂದೇ ಖುದ್ದು ಯಡ್ಡಿ ಇಲ್ಲಿ ಬೀಡುಬಿಟ್ಟು ಮಂಡ್ಯ, ಮೈಸೂರಿನಲ್ಲಿ ಪ್ರಚಾರ ಸಭೆ ನಡೆಸುತ್ತಿದ್ದಾನೆ. ಈಗಾಗಲೇ ಕಾಂಗ್ರೆಸ್ ಟಿಕೆಟ್ ವಂಚಿತ, ಮಲ್ಲಿಕಾರ್ಜುನ ಖರ್ಗೆ ಬೆಂಬಲಿಗ ಯಮದೂರು ಸಿದ್ದರಾಜು ಹಾಗೂ ಜೆಡಿಎಸ್ ಟಿಕೆಟ್ ವಂಚಿತ, ಚೆಲುವರಾಯಸ್ವಾಮಿ ಬೆಂಬಲಿಗ ವಿ.ಕೆ.ಜಗದೀಶ್ ಇಬ್ಬರನ್ನೂ ಯಡ್ಡಿ ಬಿಜೆಪಿ ಬುಟ್ಟಿಗೆ ಹಾಕಿಕೊಂಡು ಗೋ.ಮಧುಸೂದನ್ ಬಂಡಾಯದಿಂದ ಆಗಬಹುದಾದ ಡ್ಯಾಮೇಜ್ ಕಂಟ್ರೋಲ್ ಮಾಡಲು ಸಜ್ಜಾಗಿದ್ದಾನೆ.

ಜೆಡಿಎಸ್ ಪಕ್ಷದ ಬಗ್ಗೆ ಹೇಳುವುದೇ ಬೇಡ. ತನೆಹೊತ್ತ ಕೆ.ಟಿ.ಶ್ರೀಕಂಠೇಗೌಡನಿಗೆ ನಾಗಮಂಗಲದ ಚೆಲುವಣ್ಣನ ಬಂಡಾಯವೇ ಭಾರಿ ತಲೆನೋವಾಗಿ ಪರಿಣಮಿಸಲಿದೆ. 2004ರಲ್ಲಿ ಬಿಜೆಪಿಯ ಗೋ.ಮಧುಸೂದನ್‌ರನ್ನು ಒಂದು ಬಾರಿ ಸೋಲಿಸಿದ್ದ ಶ್ರೀಕಂಠೇಗೌಡ ಆಮೇಲೆ ಅದೇ ಮಧುಸೂದನ್ ಮುಂದೆ ಮುಗ್ಗರಿಸಿದ್ದ. ಆದರೂ ಕಳೆದ 6 ವರ್ಷಗಳಿಂದ ಕ್ಷೇತ್ರದ ಪದವೀಧರ ಮತದಾರರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಶ್ರೀಕಂಠೇಗೌಡ ಈ ಬಾರಿ ಗೆಲ್ಲುವ ಚಾನ್ಸು ಹೆಚ್ಚಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳಿಗೆ ಹೋಲಿಸಿದರೆ ಶ್ರೀಕಂಠೇಗೌಡ ಎಲ್ಲರಿಗೂ ಸಿಗುವ ಆಸಾಮಿ ಅನ್ನೋ ಅಭಿಪ್ರಾಯವಿತ್ತು, ಆದರೆ ಕುಮ್ಮಿ-ಚೆಲ್ವಿ ವಿರಸಕ್ಕೆ ಪಾಪ ಶ್ರೀಕಂಠೇಗೌಡರು ಬಡವಾದರೆ ಅಚ್ಚರಿಪಡುವಂತದ್ದೇನೂ ಇಲ್ಲ.

ಇನ್ನು ಕಣದಲ್ಲಿರುವ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಹಾಲಹಳ್ಳಿ ಮಂಚೇಗೌಡ, ಹಿರಿಯ ಸಾಹಿತಿ ಕೆ.ಎಸ್.ಭಗವಾನ್, ವಾಟಾಳ್ ನಾಗರಾಜ್‌ರಂತವರಿಂದ ಯಾವ ಪಕ್ಷಕ್ಕೂ ಡ್ಯಾಮೇಜ್ ಆಗದು. ಪ್ರಸ್ತ ವಾತಾವರಣದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮಧ್ಯೆ ಜಿದ್ದಾಜಿದ್ದಿನ ಕುಸ್ತಿ ನಡೆಯುತ್ತಿರುವಂತೆ ಮೇಲ್ನೋಟಕ್ಕೆ ಕಂಡುಬಂದರೂ ಆಡಳಿತಾರೂಢ ಕಾಂಗ್ರೆಸ್ ಪಕ್ಷವೂ ಸರ್ವಸನ್ನದ್ಧವಾಗೇ ಅಖಾಡಕ್ಕೆ ಧುಮುಕಿದೆ. ಅಂತೂಇಂತೂ ಎದುರಾಳಿ ಪಾರ್ಟಿಯವರನ್ನು ಸೋಲಿಸುವುದಕ್ಕಿಂತ ತಮ್ಮ ಪಕ್ಷದೊಳಗಿನ ನಾಯಕರ ಮುನಿಸು ಗೆದ್ದವರೇ ಈ ಸಲ ವಿಜಯದುಂದುಭಿ ಬಾರಿಸಲಿದ್ದಾರೆ. ಅದು ಯಾವ ಪಾರ್ಟಿ ಸಾಧ್ಯ ಮಾಡಿಕೊಳ್ಳುತ್ತೋ ಕಾದುನೋಡಬೇಕು.





ಮಿನಿಸ್ಟರ್ ಚಾರ್ವಾಕ



'ನಾನ್ಯಾವತ್ತೂ ದೇವರ ಪೂಜೆ ಮಾಡಿಲ್ಲ, ಮಾಡುವುದೂ ಇಲ್ಲ. ಹಾಗೇನಾದರೂ ಪೂಜಿಸುವುದಿದ್ದರೆ ಅದು ಬಸವಣ್ಣನವರನ್ನು ಮಾತ್ರ. ಹಸಿದವರಿಗೆ ಅನ್ನ ಮತ್ತು ಕಾಯಕವೇ ಕೈಲಾಸವೆಂಬ ನೀತಿಮಾರ್ಗವನ್ನು ತೋರಿಸಿಕೊಟ್ಟ ಬಸವಣ್ಣನವರೇ ನಿಜವಾದ ದೇವರು. ಕಾಣದ ದೇವರುಗಳಿಗಾಗಿ ಇಲ್ಲದ ಸರ್ಕಸ್ ಮಾಡುವ ಬದಲು ದೀನದಲಿತರ ಹಸಿವು ನೋವಲ್ಲಿ ದೇವರನ್ನು ಕಾಣುವುದೇ ನಿಜವಾದ ಭಕ್ತಿ ಮತ್ತು ಧರ್ಮ.....!

..... ನಾನು ಏನೇ ಮಾತಾಡಿದರೂ ಅದಕ್ಕೆ ವಿವಾದದ ಪಟ್ಟಕಟ್ಟುತ್ತಿದ್ದಾರೆ. ಇದ್ಯಾವುದಕ್ಕೂ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ, ನನ್ನ ಆತ್ಮಸಾಕ್ಷಿಗೆ ಯಾವುದು ನ್ಯಾಯ ಅನ್ನಿಸುತ್ತದೋ ಅದನ್ನು ಧೈರ್ಯವಾಗಿ ಜಗತ್ತಿನೆದುರು ಬಿಚ್ಚಿಡುತ್ತೇನೆ. ಅದರ ವಿರುದ್ಧ ಏನೇ ಟೀಕೆ, ಬೆದರಿಕೆಗಳು ಬಂದರೂ ನಾನದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ!'

ಹೆಚ್ಚೇನಿಲ್ಲ, ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯ ಖಾಸಗಿ ಶಾಲೆಗಳ ವಿರುದ್ಧ ಕಿಡಿಕಾರಿದ ರೀತಿಗೆ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಎಚ್ಚರಿಕೆ ನೀಡಿ ವಾರವಿನ್ನೂ ಕಳೆದಿಲ್ಲ. ಆಗಲೇ ಪರಮೇಶ್ವರ್‌ಗೆ ಬರೆಯಿಟ್ಟಂತೆ ಆಂಜನೇಯ ನೀಡಿದ ಮತ್ತೊಂದು ಹೇಳಿಕೆಯಿದು. ನಾನ್ಯಾವತ್ತೂ ದೇವರ ಪೂಜೆ ಮಾಡಿಲ್ಲ, ಮಾಡುವುದೂ ಇಲ್ಲ ಎಂಬ ಸಮಾಜ ಕಲ್ಯಾಣ ಸಚಿವರ ಹೇಳಿಕೆಯನ್ನೂ ಮೀಡಿಯಾಗಳು once again ವಿವಾದವೆಂಬಂತೆ ಬಿಂಬಿಸಿರಬಹುದು. ಮಡಿವಂತರಿಗಿದು ಮೈಲಿಗೆಯೆಂಬಂತೆ ಕಂಡಿರಬಹುದು. ಬಹುತೇಕ ಪತ್ರಿಕೆಗಳು ಮಾಧ್ಯಮಗಳನ್ನಾಕ್ರಮಿಸಿಕೊಂಡ ಪತ್ರಕರ್ತರ ವೇಷದ ಹುಟ್ಟಾ ಆರೆಸ್ಸೆಸ್, ಸಂಘ ಪರಿವಾರದ ಕಟ್ಟಾಳುಗಳಿಗೂ ಮನುವಾದಿ ಮನಸ್ಥಿತಿಯ ಮೇಲ್ಜಾತಿ ಭಾಗ್ಯವಂತರಿಗೆಲ್ಲ ಆಂಜನೇಯರ ಈ ಹೇಳಿಕೆ ಉದ್ಧಟತನವೆನಿಸಬಹುದು.

ಆದರೆ ಪತ್ರಿಕೆಗಳನ್ನೇ ಓದದ ಕೂಲಿನಾಲಿಗಳಿಗೆ? ಒಪ್ಪೊತ್ತು ಊಟಕ್ಕೂ ಹೆಣಗಾಡಬೇಕಾದ ಜನಸಾಮಾನ್ಯರಿಗೆ? ನಾಡಿನ ಅಸಂಖ್ಯಾತ ರೈತಾಪಿ, ದೀನ, ದಲಿತ ಸಮೂಹಕ್ಕೆ.....?

ಕಾನ್ವೆಂಟ್ ಲಾಬಿಗೆ ಬರೆ

ಆಂಜನೇಯರ ಫೈರ್ ಬ್ರಾಂಡ್ ಭಾಷಣಗಳು, ಸಂಪ್ರದಾಯಸ್ಥ ಮನಸ್ಥಿತಿಗಳ ಮೇಲೆ ಅವುಗಳ ಪರಿಣಾಮ ಮತ್ತು ಮೀಡಿಯಾಗಳ ಮನುವಾದಿಗಳು ಅವುಗಳನ್ನು ಬಿಂಬಿಸುತ್ತಿರುವ ರೀತಿಯ ವಿರುದ್ಧ ನಾಡಿನ ಜನಪರ ಸಂಘಟನೆಗಳು, ಸಾಮಾಜಿಕ ಚಿಂತಕರು ವಿಚಾರವಾದಿ ವಲಯದಲ್ಲಿ ಏನೆಲ್ಲ ಚರ್ಚೆ, ಪ್ರತಿಕ್ರಿಯೆಗಳಾಗಬೇಕಿತ್ತೋ ಅದಾಗುತ್ತಿಲ್ಲ ಏಕೆ?

ದೇವರ ಕುರಿತಂತೆ ಆಂಜನೇಯ ಮೇಲ್ಕಂಡ ಹೇಳಿಕೆ ನೀಡಿದ್ದು ಮೇ 23 ರಂದು. ಮೊಳಕಾಲ್ಮೂರಿನ ಬಿ.ಜೆ. ಕೆರೆಯಲ್ಲಿ ಬಸವಭವನಕ್ಕೆ ಶಂಕುಸ್ಥಾಪನೆ ಮಾಡಿ ನೀಡಿದ ಹೇಳಿಕೆ ಒಂದು ಕೋನದಿಂದ ವೈದಿಕಶಾಹಿ ಪ್ರಾಯೋಜಿತ ಪೌರಾಣಿಕ ದೇವರುಗಳ ವಿರುದ್ಧವಾದರೂ ಮತ್ತೊಂದು ಕೋನದಿಂದ ಬಸವಣ್ಣನವರ ಸಾಮಾಜಿಕ ಕ್ರಾಂತಿಯನ್ನೂ ಶಿವಶರಣರ ವಿಚಾರಧಾರೆಯನ್ನೂ ಎತ್ತಿ ಹಿಡಿಯುತ್ತಿಲ್ಲವೆ?

ಖಾಸಗಿ ಕಾನ್ವೆಂಟ್ ಲಾಬಿಯ ವಿರುದ್ಧದ ಆಂಜನೇಯರ ಹೇಳಿಕೆ ಹುಟ್ಟು ಹಾಕಿದ ವಿವಾದವೇನು ಕಮ್ಮಿಯದ್ದೆ?

'ಇವತ್ತು ಖಾಸಗಿ ಶಾಲೆಗಳ ದುಡ್ಡಿನ ದಾಹಕ್ಕೆ ಬಲಿಯಾಗುತ್ತಿರುವವರೆಲ್ಲ ಕೆಳಜಾತಿ ಬಡವರ ಮಕ್ಕಳೇ. ಅಲ್ಲಿ ಕಾಸಿದ್ದವರಿಗಷ್ಟೇ ಗೇಟಿನೊಳಗೆ ಪ್ರವೇಶ. ದುಡ್ಡಿಲ್ಲ ಅಂದ್ರೆ ಅಲ್ಲಿನ ವಾಚ್‌ಮನ್ ಕಾನ್ವೆಂಟಿನ ಒಳಗಿರಲಿ ಗೇಟಿನ ಹತ್ತಿರ ಕೂಡ ಬಿಟ್ಟುಕೊಳ್ಳುವುದಿಲ್ಲ. ಇಂಥ ಖಾಸಗಿ ಶಾಲೆಗಳ ದುಡ್ಡಿನ ದಾಹಕ್ಕೆ ಹೋಲಿಸಿದರೆ ವೇಶ್ಯಾವಾಟಿಕೆಗಳೇ ಸಾವಿರ ಪಾಲು ಮೇಲು. ಹೊಟ್ಟೆಗಿಲ್ಲದೆ ಮೈಮಾರಿಕೊಂಡು ಬದುಕುವ ನಮ್ಮಕ್ಕ ತಂಗಿಯರನ್ನೇ ಸಮಾಜ ವೇಶ್ಯೆಯರು ಅಂತ ಕೀಳಾಗಿ ಕಾಣುವುದಾದರೆ ಈ ಖಾಸಗಿ ಶಾಲೆಗಳು ಮಾಡುತ್ತಿರುವುದು ಇನ್ನೇನು? ಇಂಥ ಕಾನ್ವೆಂಟುಗಳ ವೇಶ್ಯಾವಾಟಿಕೆಗಳಿಗಿಂತಲೂ ಕೀಳು....!

ಆಂಜನೇಯರ ಈ ಹೇಳಿಕೆಯೇನಾದರ ಘಾಸಿಗೊಳಿಸಿದ್ದರೆ ಅದು ಧನದಾಹಿ ಕಾನ್ವೆಂಟ್ ಮಾಲೀಕರ ಮಾತ್ರ. ಆದರೆ ಮೀಡಿಯಾಗಳಲ್ಲದು ಇಡೀ ಸಮಾಜಕ್ಕೆ ಅವಮಾನವಾದಂತೆ, ಓರ್ವ ಸಮಾಜ ಕಲ್ಯಾಣ ಮಂತ್ರಿಯಾ ಆಂಜನೇಯ ಹಾಗಂದಿದ್ದೇ ಮಹಾಪರಾಧವೆಂಬಂ ಬಿಂಬಿತವಾಯ್ತು. ಖಾಸಗಿ ಶಾಲಾ ಮಾಲೀಕರ ಸಂ ಆಂಜನೇಯ ವಿರುದ್ಧ ಕ್ರಮ ಕೈಗೊಳ್ಳುವಂ ಮುಖ್ಯಮಂತ್ರಿಗಳಿಗೆ ಬರೆದ ಪತ್ರವನ್ನು ಆಂಜನೇಯ ಹೇಳಿಕೆಗಿಂತಲೂ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಪತ್ರಿಕೆಗಳ ಪ್ರಕಟಿಸಿದವು. ಪರಿಣಾಮವಾಗಿ ಗೃಹ ಸಚಿವ ಪರಮೇಶ್ವ 'ಆಂಜನೇಯರ ಇಂಥ ಹೇಳಿಕೆಗಳಿಂದಾಗಿ ಪಕ್ಷಕ್ಕೆ ಕೆ ಹೆಸರು ಬರುತ್ತದೆ. ಅವರು ಹದ್ದುಬಸ್ತಿನಲ್ಲಿದ ಮಾತಾಡಬೇಕು. ನನಗೆ ಅನೇಕ ಖಾಸಗಿ ಶಾಲಾ ಮುಖ್ಯಸ್ಥ ಫೋನ್ ಮಾಡಿ ಆಂಜನೇಯರ ವಿರುದ್ಧ ದೂರುತ್ತಿದ್ದಾ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರೆಲ್ಲರ ಕೆಟ್ಟವರಲ್ಲ...!' ಎಂದು ಹೇಳಿದ್ದನ್ನೇ ಮತ್ತಷ್ಟು ಪ್ರಾಮುಖ್ ನೀಡಿ ಪತ್ರಿಕೆಗಳು ಪ್ರಕಟಿಸಿದವು.

ಜನಸಾಮಾನ್ಯರ ದನಿ

ಇದು ಪುರೋಹಿತಶಾಹಿ ಮೀಡಿಯಾ ನಡೆಸಿ ಕುಚೋದ್ಯದ ಫಲ. ಆಂಜನೇಯರ ಹೇಳಿಕೆಗಿಂತಲೂ ಅದ ಖಂಡಿಸಿದ, ಟೀಕಿಸಿದ ಹೇಳಿಕೆಗಳಿಗೆ ಕೊಟ್ಟ ವಿಪರೀ ಪ್ರಚಾರವೇ ಆಂಜನೇಯರ ಪಾಲಿಗೆ ಪಾಸಿಟಿವ್ ಆ ಪರಿಣಮಿಸಿತು. 'ಖಾಸಗಿ ಶಿಕ್ಷಣ ಸಂಸ್ಥೆಗಳ ವೇಶ್ಯಾವಾಟಿಕೆಗಿಂತಲೂ ಕೀಳೆಂಬ ಆಂಜನೇಯ ಹೇಳಿಕೆಯಲ್ಲಿ ತಪ್ಪೇನಿದೆ? ಅವರು ಕಟುವಾದ ಪ ಬಳಸಿರಬಹುದು. ಆದರೆ ಅವರು ಹೇಳಿರುವುದ ಸರಿಯಾಗೇ ಇದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷ ನೀಡುವುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಳ್ಳಬೇ ಹೊರತು ದುಡ್ಡು ಬಾಚುವುದೊಂದೇ ಅವುಗ ಧರ್ಮವಾಗಕೂಡದು. ಆಗ ವ್ಯಭಿಚಾರಕ್ಕೂ ಖಾಸಗಿ ಶಿಕ್ಷ ಲಾಬಿಗೂ ವ್ಯತ್ಯಾಸವುಳಿಯುವುದಿಲ್ಲ.'

ಇದು ಕನ್ನಡ ಸಂಸ್ಕೃತಿ ಸಚಿವೆ ಉಮಾಶ್ರೀ ಆಂಜನೇಯರನ್ನು ಬೆಂಬಲಿಸಿ ಮೇ 24ರ ಮಂಗಳವಾ ಬೆಂಗಳೂರಿನಲ್ಲಿ ನೀಡಿದ ಹೇಳಿಕೆ. ಅಲ್ಲಿಗೆ ಆಂಜನೇಯ

ಖಾಸಗಿ ಸುಲಿಗೆ ಯಾವ ವ್ಯಭಿಚಾರಕ್ಕೆ ಕಮ್ಮಿ?

"ಕುಣಿಗಲ್‌ನಂತಹ ಗ್ರಾಮೀಣ ಪ್ರದೇಶದಲ್ಲೇ ಖಾಸಗಿ ಶಿಕ್ಷಣ ಸಂಸ್ಥೆಗಳ ಸುಲಿಗೆ ಯಾವ ಮಟ್ಟಕ್ಕಿದೆಯೆಂದರೆ, ಯುಕೆಜಿ-ಎಲ್‌ಕೆಜಿಯಲ್ಲಿ ಮಗುವೊಂದನ್ನು ಓದಿಸಬೇಕೆಂದರೆ ವರ್ಷಕ್ಕೆ ಕಮ್ಮಿ ಎಂದರೂ 1.5 ರಿಂದ 2 ಲಕ್ಷ ಎತ್ತಿಡಲೇ ಬೇಕು. ಯಾವ ವ್ಯಭಿಚಾರಕ್ಕಿಂತಲೂ ಇದು ಕಮ್ಮಿಯೇನಲ್ಲ.

ಮಂತ್ರಿ ಆಂಜನೇಯ ಜನಸಾಮಾನ್ಯರ ಆಕ್ರೋಶವನ್ನು ಜನಸಾಮಾನ್ಯರ ಭಾಷೆಯಲ್ಲೇ ವ್ಯಕ್ತಪಡಿಸಿದ್ದಾರಷ್ಟೇ...."

-ಸಿದ್ದರಾಮ ಚೈತನ್ಯ ಸ್ವಾಮೀಜಿ, ಅರೆ ಶಂಕರಮಠ, ಕುಣಿಗಲ್

ಮೊದಲು ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣವಾಗಲಿ

"ಆಂಜನೇಯ ಕಾನ್ವೆಂಟ್ ಸುಲಿಗೆಯನ್ನು ವೈಶ್ಯಾವಾಟಿಕೆಗೆ ಹೋಲಿಸಿದ್ದನ್ನು ಯಾರಾದರೂ ತಪ್ಪು ಎನ್ನುವುದಾದರೆ ಅದು ವಿಷಯದ ಅಡ್ಡದಾರಿಯಾಗುತ್ತದೆ. ಮೊದಲು ಮಾತೃಭಾಷೆಯಲ್ಲಿ ಶಿಕ್ಷಣ ತರಬೇಕು. ಕನಿಷ್ಠ ಎಸ್‌ಎಸ್‌ಎಲ್‌ಸಿಯವರೆಗಿನ ಶಿಕ್ಷಣವನ್ನು ಸರ್ಕಾರ ರಾಷ್ಟ್ರೀಕರಣಗೊಳಿಸಬೇಕು. ಅದು ಮೋದಿ ಮಾಡಬೇಕಾದ ಕೆಲಸ. ನಾವೆಲ್ಲ ಆಂಜನೇಯರ ಹೇಳಿಕೆ ಕುರಿತಂತೆ ಚರ್ಚಿಸುವುದೇ ಮೂರ್ಖತನ."

- ಚಂದ್ರಶೇಖರ ಕಂಬಾರ, ಜ್ಞಾನಪೀಠ ಪುರಸ್ಕೃತರು



ಆಂಜನೇಯರ ಹಾಡಿ ವಾಸ್ತವ



ನಾಟಕೆ ಕುರಿತ ಹೇಳಿಕೆಗೆ ಬೇರೆಯದೇ ಅರ್ಥ ತಾಗಿತ್ತು, ಕೇವಲ ಬೆಂಗಳೂರಷ್ಟೇ ಅಲ್ಲ, ರಾಜ್ಯದ ಲ್ಲೆ, ಪುಟ ತಾಲ್ಲೂಕಲ್ಲೂ ಅಲ್ಲಿನ ಖಾಸಗಿ ಶಾಲೆಗಳ ದರೋಡೆಯ ವಿರುದ್ಧ ಜನಸಾಮಾನ್ಯರಿಗೆ ವಿಪರೀತ ತವಿದೆ. ರಾಜ್ಯಾದ್ಯಂತ ಖಾಸಗಿ ಶಾಲಾ ಮಾಫಿಯಾದ ವರ್ಷಾಂಪುಟ ಶೋಷಕರು ಪುಟಿಭಟಿಸುತ್ತಲೇ ಇದ್ದಾರೆ. ವಾಟಿಕೆಯಾದರೂ ಅವುಗಳ ಖಮಾಯಿಗೊಂದು ರಿಕ ನಿಯತ್ತಿರುತ್ತೆ, ಆದರೆ ಕಾನ್ವೆಂಟುಗಳದ್ದು ಇಂಥ ದೇ ನೈತಿಕತೆ, ವ್ಯಾಪಾರ, ವ್ಯವಹಾರವನ್ನು ಮೀರಿದ ಾರ.

ಾಗೊಮ್ಮೆ ಮಠಮಾನ್ಯಗಳು ನಡೆಸುವ ಶಾಲೆಗಳಲ್ಲಿ ನ್ನು ನೈತಿಕತೆಯಿದ್ದಿದ್ದೇ ಆಗಿದ್ದಲ್ಲಿ ಅವರೇಕೆ




ಬಸವಣ್ಣ


ಪೆರಿಯಾರ್


...ವಿದ್ಯಾರ್ಥಿಗಳ ನಡುವೆ ಕೂತು ಮಂತ್ರಿಯ ಊಟ



ೇಯರ ಹೇಳಿಕೆಗೆ ತಲೆಕೆಡಿಸಿಕೊಳ್ಳಬೇಕು? ಅಷ್ಟಕ್ಕೂ ರ ಸರ್ಕಾರವೆಂದು ಹೇಳಿಕೊಳ್ಳುವ ಕಾಂಗ್ರೆಸ್‌ನ ಗೃಹ ಾಗಿ ಪರಮೇಶ್ವರ್ ತನಗೆ ಯಾರೋ ದೂರವಾಣಿ ಲಕ ಬೇಸರಿಸಿದರೆಂದು ಆಂಜನೇಯರನ್ನೇಕೆ ಬೇಕು?

ಮಗಳ ಮದುವೆ

ಲ್ಲಿ ಎಂಥವರಿಗೂ ಸ್ಪಷ್ಟವಾಗುವ ಒಂದು ಯೆಂದರೆ ಪರಮೇಶ್ವರ್ ಮೂಲತಃ ಇದೇ ೇಷನ್ ಲಾಬಿಯಿಂದ ಬಂದವರು!

ಲ್ಲಿ ವಿಷಾದಕರ ಅಂಶವೆಂದರೆ ಕನ್ನಡ ಪರ, ದಲಿತ, ಾರ್ಮಿಕ ಸಂಘಟನೆಗಳು ಆಂಜನೇಯರ ಬೆಂಬಲಕ್ಕೆ ಡಿಸದೇ ಹೋಗಿದ್ದು ವಿಚಾರವಾದಿ, ಜಿಕ ಹೋರಾಟಗಾರರನೇಕರು ೇಯರ ಕಾಳಜಿಗೆ ಕೈಗೂಡಿಸದೇ ದ್ದು. ಇದರ ಅಡ್ಡ ಪರಿಣಾಮವೋ ತೆ. ಆಂಜನೇಯ ಅಂದರೇನೇ , ಬಾಯಿಗೆ ಬಂದಂತೆ ಮಾತಾಡುವ ಲಂಗುಲಗಾಮಿಲ್ಲದ ನಾಲಿಗೆ ಂತೆ ಮಡಿವಂತರ ಗುಂಪು ಿತ್ತಿದೆ. ಅಷ್ಟಕ್ಕೂ ಆಂಜನೇಯ ಈ ನೀಡಿದ ಹೇಳಿಕೆಗಳು, ಮಾಡಿದ ಗಳ ವಿವಾದಾಸ್ಪದ ಅಂಶಗಳಾದರೂ ದ್ದು? ನಿಜಕ್ಕೂ ಅದರಿಂದ ಕಾಂಗ್ರೆಸ್ ವರ್ಚಸ್ಸಿಗೆ ಧಕ್ಕೆಯೇ...?

ಂಜನೇಯ ಮೊದಲ ಬಾರಿಗೆ ಸುದ್ದಿ ದ್ದು ತನ್ನ ಮಗಳು ಅನುಪಮಾರ ವಿವಾಹದ ಮೂಲಕ. 2014 ರ ರ್ 19 ರಂದು ಹೊಳಲ್ಕೆರೆಯ ಕಾಲೇಜು ಮೈದಾನದಲ್ಲಿ ನಡೆದ ೂಹಿಕ ವಿವಾಹ ಸಮಾರಂಭದಲ್ಲಿ ಯುತ, ಮುಸ್ಲಿಂ, ಬೇಡ, ಕುರುಬ ವಧೂವರರ ಜೊತೆಗೇ ದಲಿತ ಸಮೂಹದ ಜೋಡಿಗಳೂ ಇದ್ದರು. ಅವರೆಲ್ಲರ ಜೊತೆಗೇ ಸಮಾಜ ಕಲ್ಯಾಣ ಮಂತ್ರಿ ಆಂಜನೇಯರ ಮಗಳ ಮದುವೆಯೂ ನಿರಾಡಂಬರವಾಗಿ ನಡೆಯಿತು. ಇದೊಂದು ಗಿಮಿಕ್ ಎಂದು ಕೆಲವರು ಮೂಗು ಮುರಿದರಾದರೂ, ಗಿಮಿಕ್‌ಗಾಗಿ ಬಡಬಗ್ಗರ ಜತೆ ಸಾಮೂಹಿಕ ವಿವಾಹದಲ್ಲಿ ತನ್ನ ಮಗಳ ಮದುವೆ ಮಾಡಿದ ಮತ್ತೊಬ್ಬ ರಾಜಕಾರಣಿಯಿರಬೇಕಲ್ಲ!





ಇದಾಗಿ ಒಂದೇ ತಿಂಗಳಿಗೆ ಹೊಸ ವರ್ಷಾಚರಣೆ ಮತ್ತು ಆಂಜನೇಯರ ಹುಟ್ಟುಹಬ್ಬ ಸೇರಿದಂತೆ ವಿಶಿಷ್ಟ ಕಾರ್ಯಕ್ರಮವೊಂದು ನಡೆದದ್ದು ಚಾಮರಾಜ ನಗರದ ದಟ್ಟ ಕಾಡಿನ ಕೆರೆದಿಂಬ ಎಂಬ ಸೋಲಿಗರ ಹಾಡಿಯಲ್ಲಿ. ಬುಡಕಟ್ಟು ಸೋಲಿಗರ ಜೊತೆ ರಾತ್ರಿ ಒಟ್ಟಿದ ಬೆಂಕಿಯ ಪಕ್ಕ ಕೂತು ತಂಬೂರಿ, ತಮಟೆ ವಾದ್ಯಗಳೊಂದಿಗೆ ಸೋಲಿಗರ ಕುಣಿತಕ್ಕೆ ಹೆಜ್ಜೆ ಹಾಕುತ್ತಿದ್ದ ಆಂಜನೇಯರ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೇಗವಾಗಿ ಹರಿದಾಡಿದವು. ಈ ಹಿಂದೆ ಆಗಿಹೋದ ಯಾವೊಬ್ಬ ಸಮಾಜ ಕಲ್ಯಾಣ ಮಂತ್ರಿಯೂ ಮಾಡದ ವೈಶಿಷ್ಟ್ಯವೊಂದಕ್ಕೆ ಆಂಜನೇಯ ಕಾರಣರಾದರು.

ಹಾಸ್ಟೆಲ್ ವಾಸ್ತವ್ಯ

ಇದಾದ ಕೆಲವೇ ದಿನಕ್ಕೆ ಶುರುವಾದದ್ದು ಆಂಜನೇಯರ ಹಾಸ್ಟೆಲ್ ವಾಸ್ತವ್ಯ ಅಭಿಯಾನ. ಮೈಸೂರು, ಕೋಲಾರ, ಮಂಗಳೂರುಗಳೆನ್ನದೆ ಆಂಜನೇಯ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ನುಗ್ಗಲಾರಂಭಿಸಿದ್ದರು. ಯಾವುದೇ ಮುನ್ಸೂಚನೆಯಿಲ್ಲದೆ ದಲಿತ, ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಹೋಗಿ ಅಲ್ಲಿನ ವಿದ್ಯಾರ್ಥಿಗಳ ಜೊತೆ ಕೂತು ಊಟ ಮಾಡುವ ಸಮಾಜ ಕಲ್ಯಾಣ ಮಂತ್ರಿಯ ಕಾಳಜಿಗೆ ಕರ್ನಾಟಕದ ಹಾಸ್ಟೆಲ್‌ಗಳ ಸಮೂಹವೇ ದಂಗಾಗಿಹೋಯಿತು. ಹಲವಾರು ಹಾಸ್ಟೆಲುಗಳು ಹದಕ್ಕೆ



ಬಂದವು. ಕಳಪೆ ಊಟ, ಕೊಳಕು ಅಡುಗೆ, ಹಾಸಿಗೆ ದಿಂಬುಗಳೆಲ್ಲ ಬದಲಾದವು.

ದಲಿತ ಎಂದರೆ ಎಲ್ಲಾ ಜಾತಿಯ ಬಡವ. ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಷ್ಟೇ ದಲಿತರೆಂದಲ್ಲ. ಎಲ್ಲಾ ಜಾತಿಯ ಬಡವರ ಪಾಡು ದಲಿತರಿಗಿಂತ ಭಿನ್ನವೇನಲ್ಲ ಎಂದು ಆಂಜನೇಯ ನೀಡಿದ ಹೇಳಿಕೆಯೇ ಮೇಲಿನ ಎಲ್ಲಾ ಕಾರ್ಯಾಚರಣೆಗಳಿಗೊಂದು ತಾರ್ಕಿಕ ನೆಲೆಗಟ್ಟನ್ನು ನೀಡುತ್ತಿತ್ತು, ಬೆನ್ನಲ್ಲೇ ಬೆಳಗಾವಿಯ ಮುರಾರ್ಜಿ ದೇಸಾಯಿ ವಸತಿಶಾಲೆಯಲ್ಲಿ ರಾತ್ರಿ ಕಳೆದು ಆಂಜನೇಯ ಸುದ್ದಿಯಾದರು. ಮೂಢನಂಬಿಕೆಗಳ ವಿರುದ್ಧ ಎಲ್ಲೆಂದರಲ್ಲಿ ಕೊಡುತ್ತಿದ್ದ ಹೇಳಿಕೆಗಳು, ಜಾತಿವ್ಯವಸ್ಥೆಯ ವಿರುದ್ಧ ಕಿಡಿ ಕಾರುತ್ತಿದ್ದ ರೀತಿ, ಸಾಮಾಜಿಕ ನ್ಯಾಯದ ಪರವಾಗಿ ಇಲಾಖೆಯ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳು ಮತ್ತು ಇವುಗಳ ಜಾರಿಗಾಗಿ ತಾನೇ ಖುದ್ದಾಗಿ ನಡೆಸಿದ ಕಾರ್ಯಾಚರಣೆಗಳು ಆಂಜನೇಯರ ಬಗ್ಗೆ ಬೇರೆಯದೇ ಅಭಿಪ್ರಾಯವೊಂದಕ್ಕೆ ಕಾರಣವಾದವು.

ಹಿಂದೆ ಬಿಜೆಪಿ ಸರ್ಕಾರವಿದ್ದಾಗ ಸಮಾಜ ಕಲ್ಯಾಣ ಮಂತ್ರಿಯಾಗಿದ್ದದ್ದು ಆನೇಕಲ್ ನಾರಾಯಣಸ್ವಾಮಿ. ಬಡ ಹಾಸ್ಟೆಲ್ ವಿದ್ಯಾರ್ಥಿಗಳ ಪಾಲಿನ ಹಾಸಿಗೆ ದಿಂಬುಗಳಿಂದ ಹಿಡಿದು ಊಟದ ಅಕ್ಕಿಬೇಳೆಯನ್ನೂ ಬಿಡದೇ ದೋಚಿದ್ದು ಮತ್ತು ಪರಿಶಿಷ್ಟರ ಪಾಲಿನ ಬಹುತೇಕ ಯೋಜನೆಗಳಿಗೆಲ್ಲ ಕಮಿಷನ್ ಹೊಡೆದು ಹಗರಣಗಳ ಸರದಾರನಾದ ನಾರಾಯಣಸ್ವಾಮಿಗೆ ಹೋಲಿಸಿದರೆ ಆಂಜನೇಯ ನಿಜಕ್ಕೂ ಜನಸಾಮಾನ್ಯರ ಮಂತ್ರಿಯೇ. ಮಾಧ್ಯಮಗಳ ಮನುವಾದಿಗಳ ಪಾಲಿಗೆ ಏನೆಲ್ಲ ವಿವಾದದಂತೆ, ಅತಿರೇಕದಂತೆ ಕಾಣುತ್ತೋ ಅದೆಲ್ಲವೂ ಜನಸಾಮಾನ್ಯರ ನೋವು ಆಕ್ರೋಶದ ಪ್ರತಿಧ್ವನಿಯಲ್ಲವೆ?

ನಾನು ಯಾವ ದೇವರನ್ನೂ ಪೂಜಿಸುವುದಿಲ್ಲ, ಬಸವಣ್ಣನ ಹೊರತಾಗಿ ಎಂಬ ಆಂಜನೇಯರ ಹೇಳಿಕೆಯಿರಲಿ. ಖಾಸಗಿ ಕಾನ್ವೆಂಟ್ ಲಾಬಿಯ ಧನದಾಹವನ್ನು ವೇಶ್ಯಾವಾಟಿಕೆಗೆ ಹೋಲಿಸಿದ್ದಿರಲಿ ಅಥವಾ ಮೂಢನಂಬಿಕೆಗಳ ವಿರುದ್ಧದ ಟೀಕೆಗಳಿರಲಿ ಅದರಲ್ಲಿ ಹೊಸದೇನಿದೆ. ಈ ಹಿಂದೆ ಪೆರಿಯಾರ್, ಅಂಬೇಡ್ಕರ್, ಬಸವಣ್ಣ ಮುಂತಾದ ಸಮಾಜ ಸುಧಾರಕರು ಹೇಳಿದ್ದನ್ನೇ ಆಂಜನೇಯ ತನ್ನ ಒರಟು ಶೈಲಿಯಲ್ಲಿ ಹೇಲುತ್ತಿಲ್ಲವೆ?

ಮೌಢ್ಯದ ವಿರುದ್ಧ ಮೊದಲು ಧನಿಯೆತ್ತಿದ್ದು ಚಾರ್ವಾಕರು. ಆಗಲೂ ಮಡಿವಂತರಿದ್ದರು. ಚಾರ್ವಾಕರನ್ನು ತಲೆಕೆಟ್ಟವರೆಂದರು. ಅದನ್ನೇ ಬುದ್ಧ ಮುಂದುವರಿಸಿದ. ಬಸವಣ್ಣ, ಶಿವಶರಣರು, ಪೆರಿಯಾರ್, ಜ್ಯೋತಿಬಾಫುಲೆ, ಅಂಬೇಡ್ಕರ್. ನಂತರದ ವಿಚಾರವಾದಿಗಳು, ಕಮ್ಯೂನಿಷ್ಟರು, ಅಂಬೇಡ್ಕರು, ಲೋಹಿಯಾವಾದಿಗಳು, ಪ್ರಗತಿಪರರೆಲ್ಲ ಹೇಳಿದ್ದಕ್ಕಿಂತ ಭಿನ್ನವಾದ ಏನನ್ನು ತಾನೇ ಆಂಜನೇಯ ಹೇಳುತ್ತಿದ್ದಾರೆ?

ಹಾಗೆ ನೋಡಿದರೆ ಸಿದ್ದು ಸಂಪುಟದ ಬೇರೆಲ್ಲ ಮಂತ್ರಿಗಳಿಗಿಂತಲೂ ಆಂಜನೇಯ ಮತ್ತು ಸತೀಶ್ ಜಾರಕಿಹೊಳಿ ಸಾಮಾಜಿಕವಾಗಿ ಮಾಡುತ್ತಿರುವ ಸದ್ದಿಗೆ ಮೀಡಿಯಾಗಳು ಪ್ರಚಾರ ಕೊಡದಿರಬಹುದು. ಆದರೆ ಜನಸಾಮಾನ್ಯರಲ್ಲಿ, ಅದರಲ್ಲೂ ದಲಿತರು, ಹಿಂದುಳಿದ ಸಮುದಾಯಗಳಲ್ಲಿ ಅವುಗಳ ಪರಿಣಾಮವೇ ಬೇರೆಯಿದೆ. ಜಾರಕಿಹೊಳಿಯದ್ದು ಕೊಂಚ ಆಧ್ಯಾತ್ಮಿಕ ವೈಚಾರಿಕ, ಶಿಸ್ತುಬದ್ಧ ದಾಟಿಯಾದರೆ ಆಂಜನೇಯ ಸ್ಟ್ರೀಟ್ ಫೈಟರ್. ಮೀಡಿಯಾ ಮನುವಾದಿಗಳಿಗಿದು ಸಹಜವಾಗೇ ಅರಗಿಸಿಕೊಳ್ಳಲಾಗುತ್ತಿಲ್ಲ, ಆಗಲೂಬಾರದು.

ಜನಸಾಮಾನ್ಯರ ಕಣ್ಣಲ್ಲಿ ಆಂಜನೇಯ ನಿಜಕ್ಕೂ ಮಿನಿಸ್ಟರ್ ಚಾರ್ವಾಕರೇ!

ಯಾರದೇ ಅಂದುಕೊಳ್ಳಲಿ ನಾನು ಮಾತ್ರ ನನ್ನನ್ನಿಸಿದ್ದನ್ನು ಹೇಳಿಯೇ ತೀರುತ್ತೇನೆನ್ನುವ ಆಂಜನೇಯರ ಎದೆಗಾರಿಕೆಗೆ ನಾಡಿನ ಪ್ರಜ್ಞಾವಂತರ ಮೌನ ಸಮ್ಮತಿಯಂತೂ ಇದ್ದೇ ಇದೆ.

● ರಾ. ಸೋಮನಾಥ್





ಬುದ್ಧಿವಂತರಾಗಲು ಕೀಮೋಥೆರಪಿ ತಗೊಳ್ಳಿ



ನನ್ನ ಶರೀರವೆಂಬ ಶರೀರವು 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ಪರಿವರ್ತನೆಯಾಗಿದೆಯೇನೋ ಎಂಬ ಅನುಮಾನ ಬರುತ್ತಿದೆ. ಏಕೆಂದರೆ ಮನುಷ್ಯ ಎಂದಾದರೂ ಒಂದು ದಿವಸ ಶಿವನ ಪಾದ ಸೇರಲೇಬೇಕು. ಹುಟ್ಟು ಆಕಸ್ಮಿಕ ಸಾವು ಖಚಿತ. ಹುಟ್ಟುಸಾವಿನ ನಡುವೆ ಪರೋಪಕಾರ ಮಾಡುವ ಘನಉದ್ದೇಶದಿಂದ ನನ್ನ ಶರೀರವು ಹಲವು ರೋಗಗಳಿಗೆ ಆವಾಸಸ್ಥಾನ ಒದಗಿಸಿರಬಹುದು ಎಂಬ ಶಂಕೆ ಭಾಸವಾಗುತ್ತಿದೆ.

ಕೆಲವು ವರ್ಷಗಳ ಹಿಂದೆ ಹೀಗಾಯಿತು. ಯಾವುದೋ ಸಮಾರಂಭಕ್ಕೆ ಹೋಗಿ ಹಿಂತಿರುಗುವಾಗ ಎದೆಯಲ್ಲಿ ನೋವು ಕಾಣಿಸಿಕೊಂಡಿತು. ಹೃದಯತಜ್ಞರ ಬಳಿಹೋದೆ. ಯಾವುಯಾವುದೋ ಪರೀಕ್ಷೆ ಮಾಡಿದ ಅವರು 'ಹೃದಯದ ಒಂದು ಕವಾಟ ಬಂದ್ ಆಗಿದೆ. ಸ್ಟಂಟ್ ಹಾಕಬೇಕು' ಎಂದರು. ಅದೇನೋ ಅದನ್ನೂ ಹಾಕಿದರು. ಹಣವನ್ನೂ ಕಿತ್ತರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಸಂತೋಷವಾಗಿ ಅದನ್ನು ನೀಡಿದೆ ಅಂತ ಅಲ್ಲ, ಮನಸ್ಸಿಗೆ ಕಸಿವಿಸಿ ಆಯಿತು ನಿಜ. ಅದಕ್ಕೂ ಮಿಗಿಲಾಗಿ ನೋವಾಗಿದ್ದು ಅಂದರೆ 'ಸಿಗರೇಟು ಸೇದಿದ್ದರಿಂದ, ಮದ್ಯ ಸೇವನೆ ಮಾಡಿದ್ದರಿಂದ ಹೀಗೆ ಆಗಿದೆ. ನೀವು ಕಡ್ಡಾಯವಾಗಿ ಬಿಡಬೇಕು' ಎಂದು ಹೇಳಿದ ಮಾತು. ಅವುಗಳ ಸ್ನೇಹ ಬೆಳೆಸಿ ಅರ್ಧ ಶತಮಾನ ಆಗುತ್ತಾ ಬಂದಿತ್ತು. ಸುಖದುಃಖ, ನೋವುನಲಿವುಗಳಲ್ಲಿ ನನ್ನ ಒಡನಾಡಿಯಾಗಿದ್ದವು. ನಾನು ಹೇಳಿಕೇಳಿ ಮೇಷ್ಟ್ರರಾಗಿದ್ದೋನು. ತರಗತಿಗಳಲ್ಲಿ ಕರ್ತವ್ಯ ನಿರ್ವಹಿಸಿ ಬಂದತಕ್ಷಣ ಕುರ್ಚಿಯಲ್ಲಿ ಕುಳಿತು ಸಿಗರೇಟು ಹಚ್ಚಿ ಒಂದು ದಮ್ ಎಳೆದರೆ ಪಾಠ ಮಾಡಿದ ಆಯಾಸ ಎಲ್ಲ ಪರಿಹಾರವಾಗ್ತಿತ್ತು, ಆಹ್ಲಾದಕರ ಭಾವನೆ ಉಂಟಾಗುತ್ತಿತ್ತು. ಸಂತೋಷ ಆದಾಗ ಸಿಗರೇಟ್‌ನ ಒಂದು ದಮ್ಮು ವೇಗವರ್ಧಕದಂತೆ ಕಾರ್ಯ ಎಸಗಿ ಅದು ಇಮ್ಮಡಿಯಾಗುವಂತೆ ಮಾಡುತ್ತಿತ್ತು, ಕಷ್ಟ ಬಂದಾಗ ಸಿಗರೇಟಿನ ಅದೇ ಒಂದು ದಮ್ಮು ದುಃಖವನ್ನು ಮರೆಯಲು ಸಹಾಯ ಮಾಡುತ್ತಿತ್ತು. ವೈದ್ಯರ ದೃಷ್ಟಿಯಲ್ಲಿ ಕೇಡುಗಳೆಂದು ದೂಷಿಸಲ್ಪಡುವ ಇವು ನನ್ನ ಸ್ನೇಹವಲಯ ಪ್ರವೇಶಿಸಿದ ನಂತರ ನೀಡಿದ ಸುಖಸಂತೋಷ ಅಲಕ್ಷ್ಯಕ್ಕೆ ನಿಲುಕುವಂತಹದ್ದಲ್ಲ, ಇಷ್ಟು ದೀರ್ಘ ಸಂತೃಪ್ತಿಪಡಿಸಿದ ಅದನ್ನು ಹೃದಯದ ಕವಾಟವೊಂದು ಮುಚ್ಚಲು ಕಾರಣವಾಯ್ತು ಅಂತ ದೂಷಿಸುವುದು ವಿಶ್ವಾಸದ್ರೋಹ ಎನಿಸಿತು. ವೈದ್ಯರ ಸಲಹೆಯನ್ನು ಧಿಕ್ಕರಿಸಿ ಸ್ನೇಹವನ್ನು ಮುಂದುವರೆಸಿದೆ.

ಒಂದೆರಡು ಮೂರು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ನಾಲಿಗೆ ಮಂದ ಆದ ಹಾಗೆ ಆಯಿತು. ಮಾತುಗಳು ತೊದಲುತ್ತಿದ್ದವು. ಬಲಗಾಲು ಎಳೆದು ಹಾಕುವಂತಾಗುತ್ತಿತ್ತು. ನರಗಳ ಡಾಕ್ಟರನ್ನು ಕಂಡೆ. 'ಪಾರ್ಶ್ವವಾಯು ಹೊಡೆದಿದೆ' ಅಂದ್ರು.

ಈ ವೈದ್ಯರುಗಳೆಲ್ಲ ವಿಘ್ನ ಸಂತೋಷಿಗಳಿರಬೇಕು. ಮನುಷ್ಯನಿಗೆ ಸಂತೋಷ ನೀಡುವ ವಸ್ತುಗಳನ್ನು ಬಳಸಬಾರದು ಎಂದು ಹೇಳುವುದೇ ಅವರ ಕುಲಕಸುಬು ಇರಬೇಕು. ಅವರೂ 'ಸಿಗರೇಟು, ಮದ್ಯ ಮುಟ್ಟಲೇಬಾರದು' ಅಂತ ಕಡ್ಡಾಯ ಹಾಕಿದರು. ಅವರೇನಾದರೂ ಹೇಳಲಿ. ನಾನು ಅವುಗಳ ಅಪ್ಪುಗೆಯಲ್ಲೇ ಸುಖ ನೆಮ್ಮದಿ ಕಾಣುತ್ತಿದ್ದೆ.

ಇವೆರಡಕ್ಕೆ ಮಾತ್ರ ಅಲ್ಲ, ನನ್ನೀ ದೇಹವು ಕ್ಯಾನ್ಸರ್ ರೋಗಕ್ಕೂ ವಾಸಸ್ಥಾನ ಒದಗಿಸಿರುವುದು ಇತ್ತೀಚೆಗೆ ತಿಳಿಯಿತು. ಕಾರಣ ಮಾತ್ರ ಅದೇ ಸಿಗರೇಟು ಮದ್ಯ ಅಂದ್ರು. ಕೀಮೋಥೆರಪಿ ಮಾಡಬೇಕು ಅಂದ್ರು. ಒಪ್ಪಿದೆ. ಥೆರಪಿ ಪ್ರಾರಂಭಿಸಿದರು. ದಟ್ಟವಾಗಿದ್ದ ತಲೆಗೂದಲು ಉದುರಿ ಬೋಳು ತಲೆ ಆಗಲು ಹವಣಿಸಿತು. ತಲೆಗೆ ಕೂದಲೇ ಭೂಷಣ ಎನ್ನುವುದು ಸಾಮಾನ್ಯವಾಗಿ ಕೇಳಿಬರುವ ಮಾತು. ನೀಳಕೇಶಿಗಳನ್ನು ಕಂಡು 'ಇವಳ ಕೂದಲು ಎಷ್ಟು ಉದ್ದ ಇದೆ' ಎಂದು ಕರುಬುವವರನ್ನು ನೀವೂ ಕಂಡಿರಬಹುದು. ಅರವತ್ತು ಎಪ್ಪತ್ತರ ದಶಕದಲ್ಲಿ ಹಿಂದಿ ಸಿನಿಮಾ ತಾರೆ ಸಾಧನಾ ಅನ್ನುವವರು ಇದ್ದರು. ಅವರು ಎಲ್ಲಾ ಸಿನಿಮಾಗಳಲ್ಲೂ ತಮ್ಮ ನೀಟಾಗಿ ಕತ್ತರಿಸಿದ ಮುಂಗೂದಲನ್ನು ಹಣೆಯ ಮೇಲೆ ಬಿಟ್ಟುಕೊಳ್ಳುತ್ತಿದ್ದರು. ಅದು 'ಸಾಧನಾ ಕಟ್' ಎಂದೇ ಪ್ರಸಿದ್ಧಿ ಆಯಿತು. ಅಂದಿನ ಅನೇಕ ಯುವತಿಯರು ಸಾಧನಾ ಕಟ್ಟಿಗರಾಗಿ ಫ್ಯಾಷನ್

ಅಣಕ



• ಎಚ್.ಎಲ್.ಕೇಶವಮೂರ್ತಿ

ಲೋಕದ ಕಣ್ಮಣಿಗಳಾಗಿದ್ದರು. ಇದು ಮಹಿ ಲೋಕಕ್ಕಾಯಿತು. ಪುರುಷರಿಗೆ ಮಾದರಿಯಾಗಿದ್ದ ಸಿನಿ ನಟ ಎಂದರೆ ಯುಲ್ ಬ್ರೈನರ್. ಅದೇ ಸಮಯದ ಅವರ ಇಂಗ್ಲಿಷ್ ಸಿನಿಮಾಗಳು ಭರ್ಜರಿಯಾಗಿ ಓಡುತ್ತಿದ್ದ ಅವರು ಎಲ್ಲಾ ಸಿನಿಮಾಗಳಲ್ಲೂ ತಮ್ಮ ತಲೆಯನ್ನು ನು ಬೋಳಿಸಿಕೊಳ್ಳುತ್ತಿದ್ದರು. ಇದರಿಂದ ಸ್ಫೂರ್ತಿಗೊಂಡ ಪುರು ಫ್ಯಾಷನ್ ಪ್ರಿಯರು ತಮ್ಮ ತಲೆಯನ್ನು ನುಣ್ ಬೋಳಿಸಿಕೊಂಡರು. ಕೂದಲಿಲ್ಲದ ತಲೆಯೇ ಫ್ಯಾಷ ಆಯಿತು! ಈ ಫ್ಯಾಷನ್ನು ಪುರುಷರಿಗೆ ಮಾತ್ರ ಮೀಸಲಾಗಿತ್ತ ಅಥವಾ ಮಹಿಳೆಯರೂ ಇದಕ್ಕೆ ಮರುಳಾಗಿದ್ದರೋ ಎಂ ಸಂಶಯ ಬರಬಹುದು. ತಿರುಪತಿಗೆ ಹೋಗಿ ತಲೆಮು ಅರ್ಪಿಸಿ ಬಂದ ಮಹಿಳೆಯರು ಬೀಚಿಯವರ ಕಣ್ ಹೇಗೆ ಕಾಣಿಸುತ್ತಿದ್ದರು ಎಂಬುದನ್ನು ತಿಳಿಸಿದರೆ ಸಂಶಯ ಪರಿಹಾರ ಆಗಬಹುದು. 'ಕುಟುಂಬ ನಿಯಂತ್ರಣ ಸಹಕಾರಿಯಾದ ವೇಷ' ಅನ್ನುತ್ತಾರೆ ಅವರು. ಹೀಗಾ 'ಸ್ತ್ರೀಯರು ಯುಲ್ ಬ್ರೈನರ್ ಕಟ್'ನಿಂದ ದೂರದ ಇದ್ದಿರಬೇಕು. ಬೋಳು ತಲೆಯ ಮಹಿಳೆ ಈ ರೀ ಬೀಚಿಯವರ ಕಣ್ಣಿಗೆ ಬಿದ್ದರೆ ಬೋಳು ತಲೆಯ ಪುರು ಹೇಗೆ ಅವರ ಕಣ್ಣಿಗೆ ಗೋಚರಿಸಿರಬಹುದು? ಅವರ ಇದನ್ನು ಪ್ರಸ್ತಾಪಿಸಿದಂತಿಲ್ಲ. ಪ್ರಾಯಶಃ ಅವರೂ 'ಯುಲ್ ಬ್ರೈನರ್‌ಕಟ್' ಪ್ರಿಯರೇ ಇರಬಹುದು.

ತಲೆಗೆ ಕೂದಲೇ ಭೂಷಣ ಎಂಬುದು ಸಾಮಾ ತಿಳಿವಳಿಕೆಯೇ ಆದರೂ ಬೋಳುತಲೆಗೂ ಬೆಲೆ ಇದ ಬೋಳುತಲೆ ಬುದ್ಧಿವಂತಿಕೆಯ ಲಕ್ಷಣ ಅಂತೇ! ಇದ ಸತ್ಯವೇ ಆದರೆ ದಡ್ಡರನ್ನೂ ಬುದ್ಧಿವಂತರನ್ನಾ ಮಾಡಬಹುದು. ಕೀಮೋಥೆರಪಿ ಕೊಡಿಸಿದರಾಯಿತು ಬೋಳು ತಲೆ ಸಿದ್ಧ!


ತಲೆಗೆ ಕೂದಲೇ ಭೂಷಣ
ಎನ್ನುವುದು ಸಾಮಾನ್ಯ ತಿಳಿವಳಿಕೆ
ಆದರೆ
ಬುದ್ಧಿವಂತ ಜನರಿಗೆ
ಬೋಳುತಲೆಯೇ ಭೂಷಣ
ದಡ್ಡರು ಬುದ್ಧಿವಂತರಾಗಲು
ಕೀಮೋ ಥೆರಪಿಯೇ ಮದ್ದು!

● ಎಚ್ಚೆಲ್

ದಾವಣಗೆರೆಯಲ್ಲಿ ಮಾತಿನ ಮಲ್ಲರು

ಥುತ್ತೇರಿ

• ಯಾಹೂ



ಬರೋಬ್ಬರಿ ಅರ್ಧ ಕರ್ನಾಟಕ ಭೀಕರ ಬರಗಾಲಕ್ಕೆ ಸಿಕ್ಕಿ ತತ್ತರಿಸುತ್ತಿದೆ. ಕುಡಿಯಲು ನೀರಿಲ್ಲ, ಗ್ರಾಮೀಣ ಭಾಗದಲ್ಲಿ ಉದ್ಯೋಗ ಖಾತ್ರಿಗೆ ನೀಡುವ ಕೆಲಸಗಳನ್ನು ಜೆಸಿಬಿ ಯಂತ್ರಗಳು ನಿರ್ವಹಿಸುತ್ತಿರುವುದರಿಂದ ಜನ ಗುಳೆ ಹೋಗುತ್ತಿದ್ದಾರೆ. ಆದರೇನು, ಗುಳೇ ಹೋಗುವ ಜನರನ್ನೇ ಹಿಡಿದು ಬಿಜೆಪಿಗಳು ಸಮಾವೇಶವನ್ನು ದಾವಣಗೆರೆಯಲ್ಲಿ ಮಾಡೇಬಿಟ್ಟರು. ಈ ಬಿಜೆಪಿಗಳು ಮಾಡಿದ್ದು ಮೋಳವಾದರೂ ಹೇಳಿಕೊಳ್ಳುವುದು ಮಾರುದ್ದ. ಮಾತೇ ಅವರ ಬಂಡವಾಳ. ಈ ಬಂಡವಾಳವೂ ಅವಕಾಶವಾದಿ ರಾಜಕಾರಣದ ಆತ್ಮದ್ರೋಹದ ಕೆಲಸಕ್ಕಾಗಿ. ಇವರ ಲೀಡರಾದ ಮೋದಿ ಮಾತಿನಮಲ್ಲ. ಈ ಮಲ್ಲ ಒಮ್ಮೆ ಎಡಗೈ ಎತ್ತುತ್ತಾನೆ. ಒಮ್ಮೆ ಬಲಗೈ ಎತ್ತುತ್ತಾನೆ. ನಂತರ ಎರಡೂ ಕೈಗಳನ್ನು ಶವದ ಮೇಲೆ ಹೂ ಚೆಲ್ಲಿದಂತೆ ಚಿಮ್ಮುತ್ತಾನೆ. ಇಂತವರನ್ನು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಮಾತಿನ ಮಲ್ಲ ಎನ್ನುತ್ತಾರಂತಲ್ಲಾ, ಥೂತ್ತೇರಿ!

* * *

ದಾವಣಗೆರೆಯಲ್ಲಿ ಸೇರಿಕೊಂಡ ಮಾತಿನ ಮಲ್ಲರ ಜಾತ್ರೆ ಆಶ್ಚರ್ಯವಾದುದೇನಲ್ಲ. ಈ ದೇಶಕ್ಕೆ ಪರಕೀಯರು ದಾಳಿ ಮಾಡುತ್ತಿದ್ದಾಗ ದೇವಸ್ಥಾನಗಳಲ್ಲಿ ಕುಳಿತು ಹಾರ್ಮೋನಿಯಂ, ಮೃದಂಗ ತಾಳದೊಂದಿಗೆ ಭಜನೆ ಹಾಡುತ್ತಿದ್ದ ಈ ಜನ ನಂತರ ದೇವಸ್ಥಾನದಲ್ಲೇ ಇದ್ದ ಪಾಕಶಾಲೆಯಲ್ಲಿ ಕೈ ಸಡಿಲ ಬಿಟ್ಟು ಬಾರಿಸಿ ಗಡದ್ದಾಗಿ ನಿದ್ದೆ ಹೋದವರು. ಆ ದೇಶಭಕ್ತರೇ ಇಂದು ಬಿಜೆಪಿ ಎಂಬ ಭೋಜನಪಾರ್ಟಿ ಮಾಡಿಕೊಂಡು ಇಡೀ ದೇಶವನ್ನೇ ಬಾಳೆಎಲೆ ಮಾಡಿಕೊಂಡಿದ್ದಾರೆ. ಆ ಕಾರಣಕ್ಕಾಗಿ ಇವರಿಗೆ ಕಳಸಾ ಬಂಡೂರಿ ಜನ ಕಾಣಲಿಲ್ಲ, ಗುಳೆ ಹೊರಟವರು ಕಾಣಲಿಲ್ಲ, ಆದರೇನು, ಮಾತಿನಮಲ್ಲನ ದೇಶಾಡಳಿತದಲ್ಲಿ ತಲೆ ಕೆಡಿಸಿಕೊಳ್ಳುವಂತಹದ್ದೇನೂ ಇಲ್ಲ, ಬಂಗಾರ ತೂಗಿದಂತೆ ಮಿತವಾಗಿ ಮಾತನಾಡುತ್ತಿದ್ದ ಮನಮೋಹನ್ ಸಿಂಗ್‌ನ ಕಾರ್ಯಕ್ರಮಗಳೇ ಬುನಾದಿಯಾಗಿದ್ದು, ಅವುಗಳನ್ನೇ ಮುಂದುವರಿಸುತ್ತಿರುವ ಮೋದಿ ಕಾಂಗ್ರೆಸ್ ತಮ್ಮನ್ನು ಎಲ್ಲಿಂದಲೋ ಬಂದವರೆಂದು ದೂರುತ್ತಿವೆ ಎಂದಿದ್ದಾರಲ್ಲಾ, ಥೂತ್ತೇರಿ!!


* * *

ಇತ್ತ ಮೋದಿ ಪಕ್ಷ ಕುಳಿತ ಯಡಿಯೂರಪ್ಪನವರು ಇನ್ನೇನು ಮುಖ್ಯಮಂತ್ರಿಯಾಗಿ ಪ್ರಮಾಣವಚನವೊಂದು ಬಾಕಿ ಇದೆ ಎನ್ನುವಂತೆ ಮಾತನಾಡುತ್ತಿರಬೇಕಾದರೆ ಅತ್ತ ಅನಂತ ಮುಖವಾಡಗಳ ಹಲವಾರು ಜನ ಯಡಿಯೂರಪ್ಪನ ಎಂಟ್ರಿ ಬಗ್ಗೆ ಶಾನೆ ಬೇಜಾರಾಗಿದ್ದಾರಂತಲ್ಲಾ, ಕಾರಣವಿಷ್ಟೆ: ಸಿಟ್ಟಿನ ಕೈಗೆ ಬುದ್ಧಿ ಕೊಡುವ ಈ ಯಡಿಯೂರಪ್ಪ ಬಿಜೆಪಿಯಿಂದ ಸಿಡಿದು ಕೆಜೆಪಿ ಮಾಡಿಕೊಂಡವರು. ಆಗ ಕೈಹಿಡಿದವರಿಗೆ ಸಹಾಯ ಮಾಡಲು ಹಾತೊರೆಯುತ್ತಿರುವವರು. ಇದನ್ನರಿತ ಬಿಜೆಪಿಗಳು "ಯಡಿಯೂರಪ್ಪ ಬಂದು ಹಾಗೆ ಮಾಡುವುದಾದರೆ ನಮ್ಮಗಳ ಗತಿಯೇನು. ಆಕಸ್ಮಾತ್ ಬಿಜೆಪಿ ಪವರಿಗೆ ಬಂದರೆ ಶಕ್ತಿ ಸ್ವರೂಪಿಣಿಯಾಗಿ ಶೋಭ ಕಂಗೊಳಿಸುತ್ತಾರೆ. ಕೆಜೆಪಿಗಳು ಟಿಕೆಟ್ ಪಡೆದು ಗೆದ್ದುಬಂದರೆ ಮತ್ತೆ ನಾವು ಕಾಲಾಳುಗಳಾಗಬೇಕಾಗುತ್ತದೆ. ಯಾವುದಕ್ಕೂ ನಮ್ಮ ಉತ್ಸಾಹಕ್ಕೆ ಒಂದು ನಿಯಂತ್ರಣವಿರಬೇಕು" ಎಂದು ಚಿಂತಿಸುತ್ತಿದ್ದಾರಂತಲ್ಲಾ, ಅವರೆಲ್ಲಾ ದಾವಣಗೆರೆ ಸಮಾವೇಶದ ನಂತರ ತಮ್ಮ ಉತ್ಸಾಹಗಳಿಗೆ ಒಂದು ಮಿತಿ ಹಾಕಿಕೊಂಡಿದ್ದಾರಂತಲ್ಲಾ, ಆದ್ದರಿಂದ ಈ ಬಿಜೆಪಿಗೆ ಯಡಿಯೂರಪ್ಪ ಅಧ್ಯಕ್ಷನಾದಾಗ ಕಂಡುಬಂದ ಉತ್ಸಾಹ ಈಗ ಇಲ್ಲವಂತಲ್ಲಾ, ಥೂತ್ತೇರಿ!!

* * *

ಪಾರ್ಟಿಯೊಳಗಿನ ಬಂಡಾಯದ ಬಿಸಿಯಿಂದ ತಲೆರೋಸಿಹೋಗಿರುವ ಕುಮಾರಣ್ಣ ಮತ್ತೆ ಭಿಜೆಪಿ [illegible] ಅಂಗಲಾಚಿ "ಏನಾದರೂ ಮಾಡಿ, ಕಷ್ಟದಲ್ಲಿದ್ದೇನೆ" ಎನ್ನುತ್ತಿದ್ದಾರಲ್ಲಾ, ಮೊದಲಿಂದಲೂ ಆರು ದೋಸೆ ಕೊಟ್ಟರೆ ಅತ್ತೆ ಕಡೆ, ಮೂರು ದೋಸೆ ಕೊಟ್ಟರೆ ಸೊಸೆ ಕಡೆ ಎಂಬಂಥ ರಾಜಕಾರಣ ಮಾಡಿಕೊಂಡು ಬಂದಿರುವ ದಳದವರು ತಮ್ಮ ಯಾವುದೇ ಕಾರ್ಯಾಚರಣೆಗೆ ಮುನ್ನ ಪಾರ್ಟಿ ಮುಖಂಡರನ್ನು ಕೂರಿಸಿಕೊಂಡು ಮಾತನಾಡಿದವರಲ್ಲ, ಅವರ ಅಭಿಪ್ರಾಯ ಕೇಳಿದವರಲ್ಲ, ಆದ್ದರಿಂದ ನಿಷ್ಠಾವಂತರ ಅಪನಂಬಿಕೆಗೆ ತುತ್ತಾದವರು. ಆದರೀಗ ಶುದ್ಧ ಅಪನಂಬಿಕೆಗೂ ಯೋಗ್ಯರಲ್ಲದ ಬಿಜೆಪಿ ಜನರ ಜೊತೆ ಹೊರಟಿರುವ ಕುಮಾರಣ್ಣ ಇತಿಹಾಸವನ್ನು ಇಷ್ಟು ಬೇಗ ಮರೆತಂತಿದೆ. ಮಂಡ್ಯದ ಲೋಕಸಭಾ ಚುನಾವಣೆಯಲ್ಲಿ, ತಮ್ಮ ಕಡುವೈರಿಗಳೆಂದು ಪರಿಗಣಿಸಿ ಹೋರಾಡಿದ ಬಿಜೆಪಿ ಲೀಡರ್ ಯಡಿಯೂರಪ್ಪನನ್ನು ಆಲಂಗಿಸಿಕೊಂಡು ಚುನಾವಣೆ ಎದುರಿಸಿದ ಫಲವಾಗಿ ಪುಟ್ಟರಾಜ ಸೋತು ರಮ್ಯ ಗೆದ್ದಳು. ಪ್ರಾದೇಶಿಕ ಪಾರ್ಟಿ ಎಂದು ಒತ್ತಿ ಹೇಳುತ್ತಲೇ ರಾಷ್ಟ್ರೀಯ ಅಧ್ಯಕ್ಷರನ್ನು ಪಡೆದಿರುವ ದಳದ ರಾಷ್ಟ್ರೀಯ ನಾಯಕರೇ ಬಿಜೆಪಿ ಕಡೆ ಹೊರಟರೆ, ದಳದ ಸೆಕ್ಯುಲರ್‌ಗಳು ಅಲ್ಲಿ ಉಳಿಯುವುದು ನಿಜವೇ, ಥೂತ್ತೇರಿ!! ●

ಅದಮ್ಯ ಚೇತನದ ದೇಜಗೌ



ದೇ. ಜವರೇಗೌಡರು ತುಂಬು ಜೀವನ ನಡೆಸಿ ನಿರ್ಗಮಿಸಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆಯಲ್ಲಿ ಆಡು ಕಾಯುತ್ತಿದ್ದ ಪುಟಾಣಿ ಹುಡುಗ. ಅಕಸ್ಮಾತ್ ಸ್ಕೂಲಿಗೆ ಸೇರಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ, ಒಂದು ಯುಗವನ್ನೇ ನಡೆಸಿದ್ದು ಈಗ ಇತಿಹಾಸ. ಮೈಸೂರು ವಿಶ್ವವಿದ್ಯಾನಿಲಯವನ್ನು ವ್ಯವಸ್ಥಿತವಾಗಿ ಕಟ್ಟಿದ ವಿಷಯದಲ್ಲವರು ಕುವೆಂಪುರವರ ಮುಂದುವರಿಕೆ. ಕುವೆಂಪು ಸಲಹೆಯಂತೆ ವಿ.ವಿ.ಯ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದವರು. ಅಂದಿನ ಪ್ರತಿಭಾವಂತ ವಿದ್ವಾಂಸರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆರಂಭಿಸಿದ ಜ್ಞಾನ ಶಾಖೆಗಳು ಪ್ರಖ್ಯಾತಿ ಪಡೆದವು. ಈ ಪೈಕಿ ಜಾನಪದ ವಿಭಾಗದಲ್ಲಿ ಜಿಶಂಪ, ಹ.ಕ. ರಾಜೇಗೌಡರು ಇತ್ಯಾದಿ ಪ್ರತಿಭಾವಂತರು ತಮ್ಮ ಆಯಸ್ಸನ್ನೇ ಜಾನಪದಕ್ಕಾಗಿ ಮೀಸಲಿಟ್ಟರು. ಜಲವರ್ಣ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿಯವರಿಂದ ಜಾನಪದ ವಸ್ತು ಸಂಗ್ರಹಾಲಯವನ್ನೇ ಸ್ಥಾಪಿಸಿದರು. ಅಲ್ಲದೆ ಜ್ಞಾನ ಗಂಗೋತ್ರಿ ಆವರಣದ ಕಟ್ಟಡಗಳೆಲ್ಲಾ ದೇಜಗೌ ನಿರ್ಮಿಸಿದ ಭವನಗಳೇ.

ಅವರು ಕುಲಪತಿಯಾಗಿದ್ದ ಸಮಯದಲ್ಲಿ ಮೈಸೂರು ವಿ.ವಿ. ಈ ನಾಡಿನ ಗಮನ ಸೆಳೆದಿತ್ತು. ಕನ್ನಡದ ಈ ಕಟ್ಟಾಳು ಎಲ್ಲರ ಪ್ರೀತಿಗೌರವಕ್ಕೆ ಪಾತ್ರರಾಗಿದ್ದರು. ಆ ನಂತರ ಕೆಟ್ಟುಹೋಗುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತನ್ನು ಸರಿಮಾಡಲು ಹಂಪಾನ ವಿರುದ್ಧ ಚುನಾವಣೆಗೆ ನಿಂತುಸೋತರು. ಇನ್ನು ಸಾಹಿತ್ಯದ ವಿಷಯಕ್ಕೆ ಬಂದರೆ ವಿಪರೀತ ಬರೆದಂತೆ ಕಾಣಿಸುತ್ತಾರೆ. ಅವರ ಬರವಣಿಗೆ ಕೂಡ ಕುವೆಂಪು ಓದಿನಿಂದಲೇ ರೂಪುಗೊಂಡಂತೆ ಕಾಣುತ್ತದೆ. ಕುವೆಂಪುರವರನ್ನು ಗರ್ಭಗುಡಿಯಲ್ಲಿ ಸ್ಥಾಪಿಸಿಕೊಂಡು ಅದೆಷ್ಟು ಆರಾಧನಾಭಾವ ಬೆಳೆಸಿಕೊಂಡಿದ್ದರೆಂದರೆ, ಕುವೆಂಪು ತೀರಿಕೊಂಡಾಗ ಕುವೆಂಪು ವನದಲ್ಲೇ ಅವರ ಸಮಾಧಿ ಮಾಡಿಕೊಂಡು ರಾಘವೇಂದ್ರಮಠದಂತೆ ಮಾಡಲು ಆಲೋಚಿಸಿದ್ದರು. ಆದರೆ ತೇಜಸ್ವಿಯವರ ಮುಂದಾಲೋಚನೆ ಫಲವಾಗಿ ಕುವೆಂಪು ಕುಪ್ಪಳ್ಳಿಯಲ್ಲಿ ನೆಲೆಸುವಂತಾಯ್ತು. ಆಕಸ್ಮಾತ್ ತೇಜಸ್ವಿ ಮನಸ್ಸು ಮಾಡದಿದ್ದರೆ ಒಂದು ಪ್ರತಿಭಟನೆ ಮೂಲಕ ಕುವೆಂಪುರವರನ್ನು ರಕ್ಷಿಸಿಕೊಳ್ಳುವ ಶಕ್ತಿ ದೇಜಗೌರಿಗಿತ್ತು, ಈ ನಾಡಿನ ಎಲ್ಲರ ವಿಶ್ವಾಸ ಗಳಿಸಿದ್ದ ದೇಜಗೌ ಸಾಹಿತ್ಯಲೋಕದ ದೇವೇಗೌಡರಂತೆ ಕಾಣಿಸಿಕೊಳ್ಳತೊಡಗಿ ಎಲ್ಲರಿಗೂ ಅಚ್ಚರಿ ಮೂಡಿಸಿದರು. ಮಗನನ್ನು ಕುಲಪತಿ ಮಾಡಲು ಅವರು ಮಾಡಿದ ರಾಜಕಾರಣ ಮತ್ತು ಮಗನ ಮೇಲೆ ಭ್ರಷ್ಟತೆ ಆಪಾದನೆ ಬಂದು ಬೀದಿಯಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದಾಗ ಈ ನಾಡಿನ ಪ್ರಜ್ಞಾವಂತರ ಕನಿಕರಕ್ಕೆ ತುತ್ತಾದರು.

ಆದರೂ ಕನ್ನಡನಾಡು ಅವರನ್ನು ತುಂಬಾ ಗೌರವದಿಂದ ನಡೆಸಿಕೊಂಡಿದೆ, ನಾಡಿನಲ್ಲಿರುವ ಎಲ್ಲ ಪ್ರತಿಷ್ಠಿತ ಪ್ರಶಸ್ತಿಗಳನ್ನ ಕೊಟ್ಟಿದೆ, ಕುವೆಂಪುರವರ ವಿಶ್ವಮಾನವ ತತ್ವವನ್ನು ಪ್ರತಿಪಾದಿಸುತ್ತಲೇ ವಿಶ್ವಮಾನವರಾಗಲು ಸಾಧ್ಯವಾಗದ ದೇಜಗೌರವರ ಸಣ್ಣಪುಟ್ಟ ದೋಷಗಳು ಏನೇ ಇರಲಿ, ಜ್ಞಾನಗಂಗೋತ್ರಿಗೆ ಅವರ ಕೊಡುಗೆ ಅನನ್ಯವಾದುದು. ಬದುಕಿನ ಕಟ್ಟಕಡೆವರೆಗೂ ಕ್ರಿಯಾಶೀಲವಾಗಿದ್ದು ನಡೆದಾಡಲು ಶಕ್ತಿ ಇಲ್ಲದಿದ್ದರೂ ಸಭೆ ಸಮಾರಂಭಕ್ಕೆ ಬರುತ್ತಿದ್ದುದು ಅವರ ಅದಮ್ಯ ಚೈತನ್ಯಕ್ಕೆ ಸಾಕ್ಷಿಯಾಗಿತ್ತು.

● ಬಿ.ಚಂ.

ಹುಳಿ ಮಾವು



...ಂಕೇಶರು ಒಮ್ಮೆ ತಾವು ಬಾಲ್ಯದಲ್ಲಿ ತಿಂದಿದ್ದ
...ನ ಹಣ್ಣಿನ ಮರವೊಂದನ್ನು ನೆನಪಿಸಿಕೊಂಡು ತಮ್ಮೂರಿಗೆ
...ಗಿ ಆ ಮರವಿದ್ದವರ ಮನೆಯಿಂದ ಹಣ್ಣು
...ಕೊಂಡು ಬರಲು ಹೇಳಿದ್ದರು. ಅವರ ಆಜ್ಞೆಯಂತೆ
...ಕೊಣಗಾವಲ್ಲಿಗೆ ಹೋಗಿ ಯಾರೂ ಇಲ್ಲದ ಮನೆಯ
...ಡಿ ಮಂಚದ ಮೇಲೆ ಮಲಗಿದ್ದ ವಯೋವೃದ್ಧರನ್ನು
...ದೆ. ಲಂಕೇಶ್ ನನ್ನನ್ನು ಕಳುಹಿಸಿದ ವಿಷಯ ವೃದ್ಧರಿಗೆ
...ತೆ. ನಿದ್ರೆಯ ಮಂಪರಿನಲ್ಲೇ ಆ ವೃದ್ಧರು "ಆ ಮರ
...ಬಿದ್ಹೋಯ್ತು" ಎಂದು ಕಣ್ಮುಚ್ಚಿದರು.

...ನು ಬರಿಗೈಲಿ ಬರಲಾಗದೆ, ಮುದುವಲದ ಜೇನ್
...ಕೆಯ ಮನೆಯಿಂದ ಹದೆಹಾಕಿದ್ದ ಹಣ್ಣುಗಳನ್ನು
... ಲಂಕೇಶ್‌ರಿಗೆ ಕೊಟ್ಟೆ. ಅವರು ತಮ್ಮ ಸಂಜೆ
...ರರೊಂದಿಗೆ ಹಂಚಿಕೊಂಡು ತಿಂದರು. ಆ
...ರುದಲ್ಲವರು ಮಾವನ್ನು ತೀರ ಹಚ್ಚಿಕೊಂಡಿದ್ದರು.
... ಅವರ ಬದುಕಿನ ವೃತ್ತಾಂತದ ಮಜಲಿಗೆ ವಾಟೆ,
...ಂದೆಲ್ಲಾ ಕರೆದು ಹುಳಿಮಾವು ಎಂದು ಹೆಸರಿಟ್ಟಿದ್ದರು.

...ಾಲ್ಯದಲ್ಲಿ ತಿಂದ ಹಣ್ಣಿನ ಸ್ವಾದ ವಯಸ್ಸಾದ ನಂತರವೂ
...ಲ್ಲುಳಿದು ಕಾಡಿಸುವುದು ಅಚ್ಚರಿಯ ಸಂಗತಿ.
...ಯಷ್ಟೇ ಅಲ್ಲ, ಎಲ್ಲ ಇಂದ್ರಿಯಗಳಿಗೂ ಇಂತಹ
...ಚನೀಯ ನೆನಪುಗಳಿರುತ್ತವೆ. ಹಾಗೆಂದು ಮತ್ತೆ
...ಲು ಹೋದಾಗ ಕಾಲವೇ ಕೈಕೊಟ್ಟಿರುತ್ತದೆ.

...ಮ್ಮೂರ ಕೆರೆ ಹಿಂದಿನ ಹಳೆ ಮರವೊಂದರ ಹಣ್ಣಿನ
...ಇದುವರೆಗೆ ಯಾವ ಹಣ್ಣಿನಿಂದಲೂ ಸಿಕ್ಕಿಲ್ಲ. ಯಾವ
...ತ್ಮರು ನೆಟ್ಟು ಹೋದರೋ ಏನೊ. ರಸ್ತೆಬದಿಯ
...ಮರಗಳ ಹಣ್ಣಿನ ರುಚಿ ಕೂಡ ತೋಟದಲ್ಲಿ ಬೆಳೆದ
...ಂತಲೂ ರುಚಿಯಾಗಿವೆ. ಆದರೆ ಚತುಷ್ಪಥ ರಸ್ತೆಗಳು
... ಈ ಮರಗಳೂ ಉರುಳುತ್ತಿವೆ. ದೇಶದ ಪ್ರಗತಿಗಾಗಿ
...ನ್ನ ಸಹಿಸಿಕೊಳ್ಳಬೇಕಂತೆ. ಜನಗಳಂತೂ ಯಾವುದರ
...ೂ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ, ಎಲ್ಲರಿಗೂ
...ದ್ದು ನಮಗೂ ಆಗುತ್ತೆ ಬಿಡಿ ಎಂದುಕೊಂಡು
...ನ್ನೆಲ್ಲಾ ಭಕ್ತಿಯಿಂದ ಸ್ವೀಕರಿಸುವಂತೆ ಕಾಣುತ್ತಿದ್ದಾರೆ.

...ತಿವರ್ಷದಂತೆ ಈ ವರ್ಷವೂ ಮಾವಿನ ಫಸಲು
...ಟ್ಟೆಗೆ ಬಂದಾಗಿದೆ. ಅವುಗಳ ಬಣ್ಣ ನೋಡಿ ಬೆರಗಾದ
... ಹಿಂದುಮುಂದು ಯೋಚಿಸದೆ ಕೊಂಡು
...ತ್ತಿದ್ದಾರೆ. ಎಳೆಕಾಯಿಯನ್ನೇ ಕಿತ್ತು ಕಾರ್ಬೈಡ್
...ಕಲ್ಲಲ್ಲಿ ಹಣ್ಣು ಮಾಡಿರುವುದರಿಂದ, ಬಣ್ಣ ಬಂದಿದೆ
...ದ ಕೊಂಡು ತಿಂದವರಿಗೆ ಹುಳಿಯೂ ಅಲ್ಲದ
... ರುಚಿಯಿಂದ ಮುಖ ಕಿವುಚಿದಂತಾಗುತ್ತದೆ. ಮೋಸ
...ದ ಗ್ರಾಹಕ ಮತ್ತದೇ ಅಂಗಡಿಗೆ ಹೋಗುವುದಿಲ್ಲ,
...ದವನಿಗೂ ಕೂಡ ಅದೇ ಗಿರಾಕಿಯ ಅಗತ್ಯವಿಲ್ಲ,
...ಾಗಿ ಹಣ್ಣು ಮಾಡಿ ಗಿರಾಕಿಗೆ ಮೋಸ ಮಾಡಿದ
...ದುದ್ದು ಮಾಡಿಕೊಂಡಾಗಿದೆ.

...ಲ್ಲ ಹಣ್ಣುಗಳನ್ನೂ ಹಾಳು ಮಾಡಿದವರು
...ನಹಣ್ಣಿನ ಸ್ವಾದವನ್ನೂ ಹಾಳುಮಾಡಿದ್ದಾರೆ. ಆದ್ದರಿಂದ
...ವಾಗಿ ಬೆಳೆದ ರೈತನನ್ನು ಹುಡುಕುತ್ತ ಹೊರಟೆ.
...ಾನು ಬೆಳೆದ ಮಾವಿನ ಬಗ್ಗೆ ವಿವರಿಸತೊಡಗಿದ.
...ು ನೋಡಿ ರೈತ ಸಂಭ್ರಮ ಪಡುವಂತಿಲ್ಲ ಸಾರ್.
...ದೆ ಹಲವಾರು ಗಂಡಾಂತರಗಳಿವೆ. ಹೂವನ್ನು ಹುಳ
... ಮಾಡದಂತೆ ಔಷಧಿ ಹೊಡೆಯಬೇಕು. ಕಾಯಿ
...ಟ್ಟಿದ ನಂತರ ಇಬ್ಬನಿ ಬೀಳಬೇಕು. ಕೊರೆಬಿದ್ದಷ್ಟು
...ಗೆ ಒಳ್ಳೆಯದು. ಈ ನಡುವೆ ಬಿರುಗಾಳಿಯ ಅಡ್ಡ
...ೊಂದು ಜಡಿದರೆ ಮುಗಿದೇಹೋಯ್ತು. ಅಲ್ಲದೆ
...ಲ್ಲು ಮಳೆಯಾಗದಂತೆ ದೇವರನ್ನು ಬೇಡಿಕೊಳ್ಳಬೇಕು.
...ತ್ ಆಣಿಕಲ್ಲು ಮಳೆ ಬಿದ್ದರೆ ಕತೆ ಮುಗಿದಂತೆಯೆ.
...ಗಲೇ ಖಾಲಿ ಮರಕ್ಕೆ ಔಷಧಿ ಹೊಡೆದಿದ್ದೇನೆ.
...ಚ್ಚು ಮರಕ್ಕೆ ಹೊಡೆದಾಗಿದೆ. ಹೆಬ್ಬೆರಳು ಗಾತ್ರ
...ಯಾದಾಗ ಸಿಂಪಡಿಸಲಾಗಿದೆ. ಇದಾದನಂತರ
...ವರಣದಿಂದ ಸೃಷ್ಟಿಯಾಗುವ ಹುಳುಗಳು ಡಬ್ಬಿಗೆ
...ಬೀಳುವಂತೆ ಮಾಡಬೇಕು. ಈ ಎಲ್ಲದರಿಂದ
...ಾದ ನಂತರ ಮಾವಿನ ಫಸಲು ನಿಂತು ನೋಡುವಂತೆ
...ತ್ತದೆ" ಎಂದು ರೈತಮಿತ್ರ ಒಂದೇ ಉಸುರಿಗೆ
...ತಿದ್ದ.

...ಗ ಯಾರೋ ಹಣ್ಣಿನ ವ್ಯಾಪಾರಿಗಳು ಉರ್ದು
...ಾಡಿಕೊಂಡು ತೋಟದ ಬಳಿಗೆ ಬಂದರು. ನನ್ನ
...ೋಡಿ ನಮಗಿಂತ ಮೊದಲೇ ಯಾರೋ ಸಾಬ
...ದ್ದಾನೆಂದು ತಿಳಿದ ಅವರು ಆತಂಕದಿಂದಲೇ ಮರದ
... ಬಂದರು. ಅನಂತರ ನಾನು ಹಣ್ಣಿನ ಸಗಟು
...ರಿಯಲ್ಲ, ಚಿಲ್ಲರೆ ವ್ಯಾಪಾರಿ, ಒಳ್ಳೆ ಹಣ್ಣು ತಿನ್ನಲೆಂದು
...ದುದನ್ನು ಹುಡುಕಿಕೊಂಡು ಬಂದವನೆಂದು ತಿಳಿದು
...ಾದರು. ರೈತನೂ ಅವರನ್ನೇನು ಉತ್ಸಾಹದಿಂದ
...ಾದಿಕೊಳ್ಳದೆ ವ್ಯಾಪಾರದ ಬಗೆಮುಖದಲ್ಲೇ ಸ್ವಾಗತಿಸಿದ.

...ಯಾವ ಹಣ್ಣು ಬೆಳೆದಿದ್ದಿರಿ ಗೌಡ್ರೆ?"

"ಮಲ್ಲಿಕ ಹಾಕಿದ್ದಿನಿ."

"ಅಯ್ಯೋ, ನಿಮ್ಮ ದಡ್ಡತನಕ್ಕೆ ಏನೇಳದು ಗೌಡ್ರೆ. ಮಲ್ಲಿಕ ಉಪ್ಪಿನ ಕಾಯ್ಗೆ ಹಾಕೋದು ಗೊತ್ತೆ. ಕೆಜಿಗೆ 5 ರೂಪಾಯಿ ಮೇಲೆ ಹೋಗಲ್ಲ, ಅದು ಸರಕಾರದ್ದು ಹಣ್ಣು ಯಾಕೆ ಹಾಕಿದ್ರಿ? ರೈತ ಯಾವಾಗ್ಲು ಸರಕಾರದ್ದು ಮಾತು ಕೇಳಬಾರ್ದು. ನೀವು ಸುಮ್ಮೆ ಹೋಗಿ ಕೃಷ್ಣಗಿರಿಯಿಂದ ಆಲ್ಫಾನ್ಸೋ ತಂದು ಹಾಕಿದ್ರೆ ಸಾಂಗ್ಲಿಯಿಂದ ಪೂನಾದವರಿಗೂ ನಿಮ್ಮ ಹಣ್ಣು ಹೋಗ್ತಿತ್ತು, ಅಲ್ಲಿ ರೇಟು ನಿಮ್ಗೆ ಸಾಲದಿಲ್ಲ ಅಂದ್ರೆ ಬಾಂಬೆಗೆ ಹೋಗ್ತಿತ್ತು. ಒಂದು ಕೆಜಿಗೆ ಮುನ್ನೂರು ಆಗದು. 5 ರೂಪಾಯಿ ಎಲ್ಲಿ 300 ಎಲ್ಲಿ ನೀವೇ ಲೆಕ್ಕ ಹಾಕಿ."

"!?"

"ನೀವು ತೋಟ ಮಾಡಕ್ಕೆ ಮುನ್ನ ನಮ್ಮ ಕೇಳಬೇಕಿತ್ತು ಗೌಡ್ರೆ. ಇಷ್ಟೊವತ್ತಿಗೆ ನೀವು ಲಕ್ಷಾಧಪತಿ ಆಗ್ತಿದ್ರಿ. ಅಲ್ಲ, ಕೋಟಿದು ಪತಿ ಅನ್ನಳಿ. ತೋಟದ್ದು ಮನೆ, ಮನೆ ಮುಂದೆ ಟ್ರ್ಯಾಕ್ಟರು, ಟಿಲ್ಲರು, ನಿಮ್ದು ಮಗಂದು ಬೈಕು, ನಿಮ್ದು ಕಾರು ನಿಂತಿರದು."

"!?"

"ತಮಾಷ್ಗೆ ಅಲ್ಲಾ, ಗೊಬ್ಬರಕ್ಕೆ ಸೀಮೆ ಹಸು, ಮಟನ್‌ಗೆ ಕುರಿ, ನಾಟಕೋಳಿ... ಎಷ್ಟು ಜನ ಬಂದ್ರು ನಿಭಾಯ್ಸೊ ಸುಲ್ತಾನ್ ತರ ಇರತಿದ್ರಿ ಗೌಡ್ರೆ!"

"ಈಗ ಮಲ್ಲಿಕ ಹಾಕಿದ್ದಿನಿ. ಫಲ ಬಂದದೆ. ಅದರ ಬಗ್ಗೆ ಮಾತಾಡಿ."

"ಬಾದಾಮಿನಾರ ಹಾಕಿದ್ರೆ ನೀವು ಹಿಂಗಿರತಿರಲಿಲ್ಲ, ಅದೂ ಕೂಡ ಕೈ ಹಿಡಿತದೆ."

"ಬಾದಾಮಿನೂ ಹತ್ತು ಗಿಡವೆ."

"ಪೂರ ಬಾದಾಮಿ ಹಾಕಕ್ಕೆ ಏನಾಗಿತ್ತು, ಅದು ಕೂಡ ಬಂಗಾರದ ರೇಟು" ಎಂದು ಬಾಯಿತಪ್ಪಿ ಅಂದವನಿಗೆ ಈಗ ಆ ಹಣ್ಣನ್ನು ಕೊಂಡುಕೊಳ್ಳಬೇಕೆಂಬುದು ಅರಿವಿಗೆ ಬಂತೇನೊ.

"ಬಾದಾಮಿನೂ ಕೂಡ ರಾಶಿರಾಶಿ ಬಂದಿದೆ. ಆದ್ರೂ ನಾವು ಕೊಳ್ಳಲೇಬೇಕು" ಎಂದವನು, ವ್ಯಾಪಾರ ಮುಗಿಸುವ ಹಂತಕ್ಕೆ ಬಂದವನಂತೆ ತನ್ನ ಜೊತೆ ಬಂದ ಇನ್ನಿಬ್ಬರೊಂದಿಗೆ ಉರ್ದುವಿನಲ್ಲಿ ಮಾತನಾಡಿಕೊಂಡು, "ನೋಡಿ ಗೌಡ್ರೆ, ನಿಮ್ಮ ಮಲ್ಲಿಕ ಮಾಡೋ ಲಾಸ್‌ನೆಲ್ಲ ಬೇರೆ ಹಣ್ಣಿಂದ ತುಂಬಿಕೋಬೇಕು. ನಿಮಗೂ ಲಾಸ್ ಆಗದುಬೇಡ. ಅಷ್ಟು ದೂರದಿಂದ ಬಂದಿರೊ ನಮಗೂ ಲಾಸ್ ಆಗದು ಬೇಡ."

"ನೀವೇ ಒಂದ್ಯಾಪಾರ ಹೇಳಿ."

"ಐದು ಸಾವಿರ ರೂಪಾಯಿಗೆ ಒಪ್ಕಳಿ. ದುಸರಾ ಮಾತಾಡದು ಬೇಡಿ. ನೀವು ಎಷ್ಟು ಒಳ್ಳೆಯವರು ಅಂತ ಎಲ್ಲಾರ್ಗೆ ಗೊತ್ತು."

"ಐದು ಸಾವಿರ ಅಂದ್ರೆ ಅವುಸ್ತಿ ಹೊಡದಿರೊ ದುಡ್ಡಾಗದಿಲವರ್ಲಿ?"

"ನಿಮ್ಗೆ ಲಾಸಾಗದೆ ಬೇಡಿ ಗೌಡ್ರೆ. ಮೂರು ವರ್ಷಕ್ಕೆ ಮುಗಿಸಿಬಿಡಿ. ಮುಂದಿನ ವರ್ಷದ್ದು ಲಾಸಾಗ್ಲಿ, ಲಾಭ ಬರ್ಲಿ, ಅದು ನಮ್ದು ಹಣೆಬರ, ಆಯ್ತಾ? ಈಗ ಹದಿನೈದು ಸಾವಿರ ರೂಪಾಯಿ ತಗಳಿ."

"ಬ್ಯಾರೆ ಏನಾರ ಮಾತಾಡಿ."

"ಹಣ್ಣೆಂದು ಯಾಪಾರೆ, ಬಂದಿ ಬೇರೆ ಮಾತಾಡಕ್ಕೆ ಆಗ್ತದ?" ಎಂದವನು ಮತ್ತೆ ತನ್ನ ಜೊತೆ ಬಂದವರೊಡನೆ ಉರ್ದುವಿನಲ್ಲಿ ಮಾತನಾಡಿ, "ಆಯ್ತು ಗೌಡ್ರೆ, ಏಕದಂ ಡಬಲ್‌ಗೆ ಕೇಳ್ಸಿ. ಕಡೆ ಮಾತು. ಹತ್ತು ಸಾವಿರ, ಮೂರು ವರ್ಷಕ್ಕೆ ಮೂವತ್ತು ಸಾವಿರ. ಏಣಿಸಿಗಂಡು ಬಿಡಿ. ಪಾಪ ನೀವು ಕಷ್ಟಪಟ್ಟದ್ದಿರಿ. ನಿಮ್ದು ಮಗ ಮಾತ್ರ ಒಳ್ಳೆ ಮಗ, ಅಷ್ಟು ಒಳ್ಳೆ ಮಗ ಇದ್ರೆ ನೀವು ಯಾತೂ ಹೆದರಂಗಿಲ್ಲ, ಬೈಕ್ ಮೇಲೆ ಬರ್ತ್ಯಾಯಿದ್ರೆ ರಾಜ ಬಂದಂಗೆ ಬರ್ತನೆ."

"ಹೊಗಳದಿರ್ಲಿ, ವ್ಯಾಪಾರ ಮುಗುಸ್ರಿ."

"ವ್ಯಾಪಾರದ್ದು ಕತೆ ಮುಗಿತಲ್ಲ, ಅದರ ಸುದ್ದಿ ಇನ್ನು ಬೇಡ."

"ನೋಡಿ ಸಾಹೇಬ್ರೆ, ನನ್ನ ತೋಟದಲ್ಲಿ ಅಂದಾಜು ನಾಲ್ಕೂವರೆ ಸಾವಿರ ಕೆಜಿ ಹಣ್ಣಿದೆ. ಇಲ್ಲಿ ಬಂದು ನಿಂತಿರೊ ಇವುರೇ ಐದು ಸಾವಿರ ರೂಪಾಯಿ ಹಣ್ಣು ಬೇಕು ಅಂದವುರೆ. ಒಬ್ಬ ಮಾರವಾಡಿಗೆ 10 ಸಾವಿರ ರೂಪಾಯಿ ಹಣ್ಣು ಬೇಕಂತೆ. ನಾನೇ ತಗಂಡೋಗಿ ಮನೆ ಬಾಗಿಲಿಗೆ ತಲುಪುಸ್ತಿನಿ. ಲಾಭದ ಜೊತೆಗೆ ದಾನ, ಧರ್ಮ ಮಾಡಿದ್ರೂ ಇನ್ನೂ ಹಣ್ಣು ಉಳಿತವೆ. ಆ ಉಳದವ ಬಂದು ಅಂಗೇ ಕಿತಗಂಡೋಗಿ. ದುಡ್ಡು ಕೊಡದು ಬೇಡ. ಪಾಪ ನೀವು ಮಕ್ಕಳೊಂದಿಗರು, ಮನೆವಳಗಡೆಗೆ ಹೆಂಡ್ತಿ ಸಾಕಬೇಕಾದೊರು ಅಲವಾ."

"ಹೋಗ್ಲಿ, ಸಪೋಟನಾರ ಕೊಡಿ."

"ಸಪೋಟನೂ ಅಷ್ಟೆ. ನಾನು ಮಾರಿ, ದಾನಧರ್ಮ ಮಾಡಿ ಉಳದವ ಬಂದು ಅಂಗೆ ಕಿತಗಂಡೋಗಿ."

"ಇದೇನು ಗೌಡ್ರೆ ಹಿಂಗೆ ಅವಮಾನ ಮಾಡ್ತಿರೀ?"

"ಮತ್ತೆ ಇನ್ನೇನ್ರಿ? ರೈತನ್ನ ಡೆಸ್‌ಪರೇಟ್ ಮಾಡ್ತಿರಿ. ವ್ಯಾಪಾರದ ಟೈಮಿಗೆ ಹೊಗಳತಿರಿ. ಆದಿರ್ಲಿ 50 ಸಾವಿರ ರೂಪಾಯಿ ಬೆಲೆಬಾಳೋ ಹಣ್ಣ 5 ಸಾವಿರಕ್ಕೆ ಕೇಳ್ತಿರಲ್ಲಾ? ನೀವು ಮನುಷ್ಯರೇನ್ರಿ? ನಿಮ್ಮಂಥವುರನ್ನ ತೋಟದೊಳಿಕೆ ಬುಟಗಂಡಿದ್ದೆ ತಪ್ಪು, ಇನ್ನ ಮ್ಯಾಲೆ ಈ ಕಡೆ ಬರಬ್ಯಾಡಿ. ಜಾಗ ಖಾಲಿ ಮಾಡಿ" ಎಂದ.

ಗೌಡರ ಕಠೋರ ಮಾತಿಗೆ ಅವಮಾನಿತರಂತಾದ ವ್ಯಾಪಾರಿಗಳು "ಅರೆ ಆರರೆ" ಎಂದು ಉರ್ದುವಿನಲ್ಲಿ ಮಾತನಾಡಿಕೊಂಡು ಹೊರಟರು.

ಈ ತೋಟವಿಲ್ಲದಿದ್ದರೆ ಇನ್ನೊಂದು ತೋಟ ಅವರಿಗಾಗಿ ಕಾಯುತ್ತಿತ್ತು, ಈ ವ್ಯಾಪಾರಿಗಳ ಚೌಕಾಸಿಗಿಂತ ಲಕ್ಷ ರೂಪಾಯಿ ಸಂಬಳ ಪಡೆಯುವ ಉಪನ್ಯಾಸಕರು ಹತ್ತು ರೂಪಾಯಿಗಾಗಿ ಗಂಟೆಗಟ್ಟಲೆ ಚೌಕಾಸಿ ಮಾಡಿದ್ದು ರೈತನನ್ನು ದಂಗು ಬಡಿಸಿದೆ. ಅವರಿಗೆ ಹೋಲಿಸಿದರೆ ಸಂಬಳದವರೆ ಸಣ್ಣ ಜನ ಎಂಬುದು ಸಾಬೀತಾಗಿದೆ. ನಾವು ತಿನ್ನುವ ತರಕಾರಿ, ದ್ರಾಕ್ಷಿ, ಬಾಳೆಹಣ್ಣು ಮಾವಿನ ಹಣ್ಣೆಲ್ಲಾ ವಿಷಯುಕ್ತವಾಗುತ್ತಿರುವಾಗ ಸೀಮೆಗೊಬ್ಬರ ಬಳಸದೆ, ಕ್ರಿಮಿನಾಶಕ ಬಳಸದೆ ಮನುಷ್ಯನ ಆರೋಗ್ಯವನ್ನ ಕಾಪಾಡುವ ಸಹಜ ಕೃಷಿ ರೈತರನ್ನು ಗ್ರಾಹಕರೇ ಗುರುತಿಸಿ ಪ್ರೋತ್ಸಾಹಿಸಬೇಕಿದೆ. ಆದರೆ ಅದಕ್ಕೆ ಸಹಜವಾದ ಮನಸ್ಸು ಬೇಕಷ್ಟೆ.


● ಬಿ. ಚಂದ್ರೇಗೌಡ

ಕೊಡಗು: ನಾಚಪ್ಪನ ಐಲುಪೈಲಾಟಗ

ಕೊಡಗು ಜಿಲ್ಲೆಯ ಕಾವೇರಿ ನದಿಯ ಹುಟ್ಟಿನ ಸಮೀಪದಲ್ಲಿರುವ ಭಾಗಮಂಡಲದ ಒತ್ತಿನಲ್ಲಿರುವ ಅಯ್ಯಂಗೇರಿ ಎಂಬ ಪ್ರದೇಶದಲ್ಲಿ ಮೀಸಲು ಅರಣ್ಯವೊಂದರಲ್ಲಿ ಒಂದು ಪುಟ್ಟ ಕಲ್ಲನ್ನು ನೆಟ್ಟು, "ಆ ಕಲ್ಲು ನೆಟ್ಟ ಜಾಗ ಟಿಪ್ಪು 1785ರಲ್ಲಿ ಕೊಡವರನ್ನು ನರಮೇಧ ಮಾಡಿದ ಜಾಗ. ಅಲ್ಲಿ ಅದಕ್ಕಾಗಿ ಸ್ಮಾರಕವನ್ನು ರಚಿಸಲಾಗಿದೆ" ಎಂದು ನಾಚಪ್ಪ ಹೇಳಿದ್ದರು. ಇದನ್ನು 'ದೇವಟ್ ಪರಂಬು' ಪ್ರದೇಶ ಎಂದು ಅವರು ಘೋಷಿಸಿದರು.

ಕೆಲವೇ ದಿನಗಳ ನಂತರ ಅಲ್ಲಿಂದ ಸುಮಾರು 6 ಕಿ.ಮೀ. ದೂರದಲ್ಲಿ ಒಂದು ಬೃಹದಾಕಾರದ ಕಲ್ಲು ಮತ್ತು ಆ ಕಲ್ಲಿಗೆ ಸುತ್ತಲೂ ರಕ್ಷಣೆಗಾಗಿ 5 ಕಂಬಗಳನ್ನು ನೆಟ್ಟು, "ಇದು ದೇವಟ್‌ಪರಂಬುನಲ್ಲಿ ಟಿಪ್ಪು ಕೊಡವ ಜನಾಂಗದವರನ್ನು ಕೊಂದಿರುವ ಜಾಗವಾಗಿದ್ದು, ಅದರ ಸ್ಮರಣೆಗೆ ಅಲ್ಲಿ ಸ್ಮಾರಕವನ್ನು ಮಾಡಲಾಗಿದೆ" ಎಂದು ಘೋಷಿಸಿದರು. ಆದರೆ ನಾಚಪ್ಪನ ನಕಲಿ ಕಲ್ಲುಗಳ ಅಸಲಿಯತ್ತು ಈಗ ಬಹಿರಂಗವಾಗಿದೆ. ಅದರ ಸುತ್ತ ವಿಸ್ತೃತವಾದ ವರದಿ ಇಲ್ಲಿದೆ.

ಕರ್ನಾಟಕದ ಜನತೆಗೆ ನೆನಪಿರುವ ಒಂದು ವಿಚಾರ ಕೆಲವು ವರ್ಷಗಳ ಹಿಂದೆ ಕೊಡಗು ಪ್ರತ್ಯೇಕ ರಾಜ್ಯಕ್ಕಾಗಿ ಕೊಡಗಿನಲ್ಲಿ ಎದ್ದ ಕೂಗು. ಹಿಂದೊಮ್ಮೆ ಅಂದರೆ ಏಕೀಕರಣಕ್ಕೆ ಮುನ್ನ ಕೊಡಗು 'ಸಿ' ಪ್ರಾಂತ್ಯವಾಗಿತ್ತು. ಆಗ ಆಡಳಿತ ನಡೆಸಿದವರು ಕೊಡಗನ್ನು ವಿಶಾಲ ಮೈಸೂರಿನಲ್ಲಿ ವಿಲೀನ ಮಾಡದಿದ್ದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡು ಕೊಡಗನ್ನು ಮೈಸೂರು ರಾಜ್ಯದಲ್ಲಿ 1956ರಲ್ಲಿ ವಿಲೀನಗೊಳಿಸಿದ್ದರು. ಮೈಸೂರು ಪ್ರಾಂತ್ಯದಲ್ಲಿಯೇ ಹೆಚ್ಚಿನ ಅಭಿವೃದ್ಧಿಯನ್ನು ಕಂಡಿದ್ದ ಜಿಲ್ಲೆ ಕೊಡಗು ಆಗಿತ್ತು, ಹಾಗಾಗಿ ರಾಜ್ಯವನ್ನು ಆಳುವವರು



ಎನ್.ಯು.ನಾಚಪ್ಪ

ಕೊಡಗಿನ ಅಭಿವೃದ್ಧಿ ಮತ್ತು ಜನಪರ ಕಾರ್ಯಕ್ರಮಗಳನ್ನು ಇಲ್ಲಿಗೆ ಹೆಚ್ಚಾಗಿ ಹಮ್ಮಿಕೊಂಡಿರಲಿಲ್ಲ, ನಿಧಾನವಾಗಿ ಕೊಡಗು ನಿರ್ಲಕ್ಷ್ಯಕ್ಕೆ ಒಳಗಾಗಿದೆ ಮತ್ತು ಕರ್ನಾಟಕ ರಾಜ್ಯ ತಾರತಮ್ಯವನ್ನು ತೋರುತ್ತಿದೆ ಎಂಬ ಮಾತುಗಳು ಕೇಳಿಬರಲಾರಂಭಿಸಿದವು. ಇದಕ್ಕೆ ಪ್ರಮುಖವಾಗಿದ್ದ ಕಾರಣ, ಕೊಡಗು ಜಿಲ್ಲೆಯ ರಸ್ತೆಯ ಸ್ಥಿತಿಗಳು. ಇಲ್ಲಿ ವಾಹನದ ಸಂಖ್ಯೆ ಹೆಚ್ಚಾಗಿದ್ದು ರಸ್ತೆ ಅಷ್ಟೊಂದು ಉತ್ತಮವಾಗಿ ಇಲ್ಲದಿದ್ದ ಕಾರಣ ಈ ಭಾವನೆ ಸಹಜವಾಗಿ ಇಲ್ಲಿಯ ಜನತೆಯಲ್ಲಿ ಮೂಡಿತ್ತು.

ಆಗ ಕೊಡಗಿನಲ್ಲಿ ಉದಯಿಸಿದ ಸಂಘಟನೆ 'ಲಿವಾಕ್' ಎಂಬುದಾಗಿತ್ತು, ಇದರ ಸಂಚಾಲಕ ಎನ್.ಯು.ನಾಚಪ್ಪ ಎಂಬ ವ್ಯಕ್ತಿಯಾಗಿದ್ದರು. ಎಲ್ಲಾ ಜನಾಂಗದ ಯುವಕರನ್ನು ಒಟ್ಟಿಗೆ ಕರೆದುಕೊಂಡು, ಕೊಡಗು ಪ್ರತ್ಯೇಕ ರಾಜ್ಯವಾಗಬೇಕು ಎಂಬ ಹೋರಾಟವನ್ನು ಅವರು 'ಲಿಬರೇಷನ್ ವಾರಿಯರ್ಸ್ ಆಫ್ ಕೊಡಗು' ಎಂಬ ಹೆಸರಿನಲ್ಲಿ ಆರಂಭಿಸಿದ್ದರು. ಆಗ ನಾಚಪ್ಪನಿಗೆ ಶ್ರೀಲಂಕಾದ ಟೈಗರ್ ಪ್ರಭಾಕರ್ ಮಾದರಿಯಾಗಿ ಇದ್ದರು. ಅವರ ಸಂಪರ್ಕವೂ ಇತ್ತು ಎಂದು ಹೇಳಲಾಗಿತ್ತು, ಕೊಡವರ ಹೋರಾಟ ಶ್ರೀಲಂಕಾದ ಬಂಡುಕೋರರ ಹೋರಾಟದ ಮಾದರಿಯಲ್ಲಿ ಇರಬೇಕು ಎಂಬ ಭಾವನೆ ನಾಚಪ್ಪನವರಲ್ಲಿ ಇತ್ತಾದರೂ ಅಂತಹ ಕೆಚ್ಚೆದೆಯವರು ಇಲ್ಲಿ ಯಾರೂ ಇರಲಿಲ್ಲ, ಆದರೂ ಭಯದ ವಾತಾವರಣವೊಂದನ್ನು ಸೃಷ್ಟಿಸಬೇಕು ಎಂಬ ಭಾವನೆಯಿಂದ ಅಶಾಂತಿ ಮತ್ತು ಅರಾಜಕತೆಯನ್ನು ಹುಟ್ಟು ಹಾಕಲು ಯತ್ನಿಸಿದ್ದರು. ಇದರ ಫಲವಾಗಿ ಕುಶಾಲನಗರದಲ್ಲಿ ಷಣ್ಮುಗಂ ಎಂಬವರ ಕೊಲೆ ಆಗಿತ್ತು, ಹಾಗೆಯೇ ನಾಚಪ್ಪ ಈ ಪ್ರಕರಣದಲ್ಲಿ 8ನೇ ಆರೋಪಿಯಾಗಿದ್ದರು. ಅವರು ಈ ಕೊಲೆಗೆ ಪ್ರೇರಕ ಶಕ್ತಿ ಎಂದು ಪ್ರಕರಣ ದಾಖಲಾಗಿತ್ತು.

ಗೋಣಿಕೊಪ್ಪಲಿನಲ್ಲಿ ಕಟ್ಟಡವೊಂದನ್ನು ತೆರವುಗೊಳಿಸುವ ಪ್ರಕರಣಕ್ಕೆ ಇಳಿದು, ಪೊಲೀಸರಿಂದ ಸೇವೆ ಮಾಡಿಸಿಕೊಂಡ ನಂತರ ಉಗ್ರ 'ಹೋರಾಟದಿಂದ ತಾನು ಏನೂ ಸಾಧನೆ ಮಾಡಲು ಸಾಧ್ಯವಿಲ್ಲ ಎಂಬ ಭಾವನೆ ನಾಚಪ್ಪನವರಲ್ಲಿ ಮೂಡಿತ್ತು, ಹಾಗಾಗಿ ತಮ್ಮ ಮೊದಲನೆಯ ಅಂಗಡಿ ಮಳಿಗೆಯಾದ 'ಲಿವಾಕ್'ಅನ್ನು ಮುಚ್ಚಿದರು ಮತ್ತು ಎರಡನೇಯ ಅಂಗಡಿ ಮಳಿಗೆಯಾಗಿ 'ಕೆ.ಆರ್.ಎಂ.ಎಂ' (ಕೊಡಗು ರಾಜ್ಯ ಮುಕ್ತಿ ಮೋರ್ಚಾ) ಎಂಬ ಸಂಘಟನೆಯನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ತನ್ನ ಉಗ್ರ ಸ್ವರೂಪವನ್ನು ಕೈಬಿಟ್ಟದ್ದೇನೆ; ತನ್ನದು ಇನ್ನೇನಿದ್ದರೂ ಗಾಂಧಿ ಮಾರ್ಗ. ಕಾರ್ಲ್‌ಮಾರ್ಕ್ಸ್ ವಾದ ಎಂದು ನಾಚಪ್ಪ ಹೇಳುತ್ತಾ, ದೇಶದಲ್ಲಿ ಸಣ್ಣ ರಾಜ್ಯಗಳ ಬೇಡಿಕೆಗಳನ್ನು ಮುಂದಿಟ್ಟ ಸಂಘಟನೆಗಳ ಜೊತೆಯಲ್ಲಿ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಆಗ ಅವರಿಗೆ ಜಾರ್ಖಂಡ್ ಮುಕ್ತಿ ಮೋರ್ಚಾ ಮಾದರಿಯಾಗಿತ್ತು.

ಅಲ್ಲಿಯವರೆಗೆ ಕೊಡಗಿನ ಎಲ್ಲಾ ಜನತೆಗಾಗಿ ಪ್ರತ್ಯೇಕ ಕೊಡಗು ರಾಜ್ಯ ಎಂದು ಹೇಳುತ್ತಿದ್ದವರು, ಅದನ್ನು ಕೈಬಿಟ್ಟು, ಕೊಡಗಿನ 18 ಮೂಲ ನಿವಾಸಿಗಳ ಏಳಿಗೆಗಾಗಿ ಹೋರಾಟ ಮತ್ತು ಅವರಿಗಾಗಿ ಪ್ರತ್ಯೇಕ ರಾಜ್ಯ ಎಂಬ ವಿಚಾರವನ್ನು ಮುಂದಿಟ್ಟರು. ದೆಹಲಿಗೆ ಹಲವು ಬಾರಿ ತೆರಳಿ, ಅಲ್ಲಿ ಕೇಂದ್ರದ ಪ್ರಮುಖರಿಗೆ ಮನವಿಯನ್ನು ಸಲ್ಲಿಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ, ಇನ್ನೇನು ಪ್ರತ್ಯೇಕ ರಾಜ್ಯವನ್ನು ನಾಚಪ್ಪನವರ ಕೈಗೆ ನೀಡುತ್ತಾರೆ ಎನ್ನುವ ಭಾವನೆಯನ್ನು ಹುಟ್ಟಿಸುವಲ್ಲಿ ನಾಚಪ್ಪ ಕೊಡಗಿನಲ್ಲಿ ಯಶಸ್ವಿಯಾಗಿದ್ದರು.


18 ಮೂಲನಿವಾಸಿಗಳ ಪರವಾಗಿ ಮಾತನಾಡುವ ಅಧಿಕಾರವನ್ನು ನಿಮಗೆ ನೀಡಿದವರು ಯಾರು ಎಂಬ ಪ್ರಶ್ನೆ ಎದ್ದಾಗ, ಅವರಿಗೆ ಸಾಕಷ್ಟು ಪ್ರತಿರೋಧ ಬಂದಿತ್ತು, ಎಲ್ಲಾ ಸಮುದಾಯಗಳು ಅವರನ್ನು ವಿರೋಧಿಸಿದವು. ಪ್ರತ್ಯೇಕತೆಯ ಕೂಗಿನ ವಿರುದ್ಧ ಕರ್ನಾಟಕ ರಾಜ್ಯದ ಎಲ್ಲಾ ಭಾಗಗಳಿಂದಲೂ ವಿರೋಧದ ಧ್ವನಿ ಕೇಳಿಬಂದಿತ್ತು.

ಕೊಡಗಿನಲ್ಲಿ ಒಂದು ರೀತಿಯ ಅಶಾಂತಿಯ ವಾತಾವರಣ ಕಂಡುಬಂದಿತ್ತು, ನಾಚಪ್ಪ ಕೂಡ ಈ ಪ್ರಯೋಗದಲ್ಲಿ ಸ್ವಲ್ಪಮಟ್ಟಿಗೆ ಪಳಗಿದ್ದ ಕಾರಣ, ಸರ್ವಾಧಿಕಾರಿಯ ರೀತಿಯಲ್ಲಿ ಸಂಘಟನೆಯನ್ನು ನಡೆಸಿಕೊಂಡು ಹೋಗುತ್ತಿದ್ದುದರಿಂದ ಅವರ ಸಂಘಟನೆಯ ಒಳಗೂ ಅವರ ವಿರುದ್ಧ ಅಪಸ್ವರದ ಧ್ವನಿ ಕೇಳಿಬಂದಿತ್ತು.

ಈ ಘಟ್ಟದಲ್ಲಿ ಕೊಡಗಿನಲ್ಲಿ 'ಪ್ರಜಾವೇದಿಕೆ' ಎಂಬ ಸಂಘಟನೆ ಜನ್ಮತಾಳಿ, ನಾಚಪ್ಪನವರ ಪ್ರತ್ಯೇಕತೆಯ ಕೂಗಿನ ವಿರುದ್ಧ ಪ್ರಬಲವಾಗಿ ಧ್ವನಿ ಎತ್ತಿತ್ತು, ಅದೇ ಸಂದರ್ಭದಲ್ಲಿ ವಿಧಾನಸಭೆಯ ಚುನಾವಣೆಯು ಎದುರಾದದ್ದರಿಂದ ರಾಜಕೀಯ ಪಕ್ಷಗಳು ಈ ಘಟನಾವಳಿಯಿಂದ ಚಿಂತಿತರಾಗಿದ್ದವು. ಕೊಡಗಿನ ಹೊರಗೂ ಪ್ರತ್ಯೇಕ ಕೊಡಗು ರಾಜ್ಯದ ಹೋರಾಟದ ಬಗ್ಗೆ ಸಾಕಷ್ಟು ಅಪಸ್ವರಗಳು ಕೇಳಿ ಬಂದಿದ್ದವು. ಕೊಡಗು ಪ್ರತ್ಯೇಕ ರಾಜ್ಯವಾಗಬೇಕು ಎಂದಾದಲ್ಲಿ ಕನ್ನಡನಾಡನ್ನು ಕೊಡಗಿನವರು ಬಿಟ್ಟು ಹೋಗಬೇಕು ಎಂಬ ಮಾತುಗಳು ಆಗ ಮೊಳಗಿತ್ತು, ಕೊಡಗಿನವರಿಗೆ ಕನ್ನಡನಾಡಿನಲ್ಲಿ ಪ್ರಾತಿನಿಧ್ಯ ಸಿಗುವುದಿಲ್ಲ ಮತ್ತು ಸಿಗಲೂಬಾರದು ಎಂಬ ಮಾತೂ ಕೇಳಿಬಂದಿದ್ದವು. ಇದು ಜಿಲ್ಲೆಯ ಹೊರಗಿರುವ ಕೊಡಗಿನವರಿಗೆ, ಅದರಲ್ಲಿಯೂ ವಿಶೇಷವಾಗಿ ಕೊಡವ ಜನಾಂಗದವರಿಗೆ ನುಂಗಲಾರದ ತುತ್ತಾಗಿತ್ತು, ನಾಚಪ್ಪ ತಮ್ಮ ಹೋರಾಟವನ್ನು ಕೈಬಿಡದಿದ್ದಲ್ಲಿ ತಾವು ಅತಂತ್ರ ಸ್ಥಿತಿಯಲ್ಲಿ ಇರಬೇಕಾಗುತ್ತದೆ ಎಂಬುದು ಹಲವರಿಗೆ ಮನವರಿಕೆಯಾಗಿತ್ತು, ಹಾಗಾಗಿ ಪ್ರತ್ಯೇಕತೆಯ ಹೋರಾಟವನ್ನು ಕೈಬಿಡಬೇಕೆಂಬ ಒತ್ತಡ ಕೊಡಗಿನ, ಹೊರಗಿರುವ ಕೊಡಗಿನ ಜನತೆಯಿಂದ ಬಂದಕಾರಣ ಅನಿವಾರ್ಯವಾಗಿ ನಾಚಪ್ಪ ತನ್ನ ಎರಡನೆಯ ಅಂಗಡಿ ಮಳಿಗೆಯನ್ನೂ ಮುಚ್ಚಬೇಕಾಯಿತು.

ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು

ಟಿಪ್ಪು ಯುದ್ಧ ಮಾಡಿದ ಪ್ರದೇಶ ಎಂದು ನಾಚಪ್ಪ ಮೊದಲು ನೆಟ್ಟ ಕಲ್ಲು



ಜನರನ್ನು ಮರಳಾಗಿಸುವ ಕಲೆಯನ್ನು ಕರಗತ ಮಾ... ನಾಚಪ್ಪನವರಿಗೆ ಈ ಮಾರ್ಗವನ್ನು ಬಿ... ಮಾರ್ಗವಿಲ್ಲದ ಕಾರಣ 'ಕೊಡವ ನ್ಯಾಷನ... (ಸಿ.ಎನ್.ಸಿ.) ಎಂಬ ಮೂರನೇ ಅಂಗಡಿ ... ಆರಂಭಿಸಬೇಕಾಯಿತು.


ಈ ಹಂತದಲ್ಲಿ ಅವರು ಪ್ರತ್ಯೇಕತೆಯ ... ಸಂಪೂರ್ಣವಾಗಿ ಕೈಬಿಟ್ಟಿದ್ದರು. ಆದರೆ ಕೊಡಗ... ಎಂಬ ಕೂಗನ್ನು ಅವರು ಮೊಳಗಿಸಿದರು. ಗೂ... ಮಾದರಿಯಲ್ಲಿಯೇ ಕೊಡಗಿಗೂ 'ಕೊಡ... ನೀಡಬೇಕು ಎಂಬುದು ಅವರ ಬೇಡಿಕೆಯಾ... ಅಡಿಯಲ್ಲಿ ಅವರು ಆಗಿಂದಾಗ್ಗೆ ಹಲವಾರು ... ಪ್ರಸ್ತಾಪಿಸುತ್ತಾ ಬಂದರು. ಕೊಡವರಿಗೆ ... ಕೊಡವರನ್ನು ಬುಡಕಟ್ಟು ಜನಾಂಗ ಎಂದು ಘೋ... ಎನ್ನುವುದು ಮಾತ್ರವಲ್ಲ, ಇತರರು ... ಎಂಬುದನ್ನು ನಾಚಪ್ಪ ಬೋಧಿಸಲು ಹೊರಟ... ಶಬ್ದಗಳು ಈಗ ಬಳಕೆಯಲ್ಲಿ ಇರುವಂತೆ ... ಹಿಂದೆ ಇದ್ದಂತೆ ಇರಬೇಕು" ಎನ್ನುವ ಮೂ... ಜನಾಂಗದವರ ಮೇಲೆ ತಮ್ಮತನವನ್ನು ಹೇರು... ಯತ್ನಿಸಿದರು. ಕೊಡಗಿನ ಮೂಲನಿವಾಸಿ ಜನಾಂಗದವರ ಹಕ್ಕನ್ನು ಕಸಿಯುವ ಯತ್ನವೂ ... ಹೊಸ ಹೊಸ ಶಬ್ದಗಳನ್ನು, ಕಾರ್ಯಕ್ರಮಗಳ... ತೇಲಿಬಿಟ್ಟರು.

ದೇವಟ್‌ಪರಂಬು ಎಂಬ... ಹೊಸ ಸಂಶೋಧನೆ

ಕರ್ನಾಟಕದಲ್ಲಿ ಟಿಪ್ಪು ಜನ್ಮ ದಿನಾಚರಣೆ ಆ... ಎಂದು ಕರ್ನಾಟಕ ರಾಜ್ಯ ಸರಕಾರ ಹೇಳುತ್ತಿದ್ದಂ... ಜಿಲ್ಲೆಯಲ್ಲಿ ಬಿಜೆಪಿ ಪಕ್ಷ, ಸಂಸದ ಪ್ರತಾಪ ಸಿಂಹ, ... ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜ... ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿದ್ದ... ಕೊಡಗಿನಲ್ಲಿ ಗಲಭೆಗೆ ಕಾರಣವಾಗಿತ್ತು, ಇದಕ... ಸಮಯದ ಹಿಂದೆ ನಾಚಪ್ಪ ಹೊಸ... ಕಾರ್ಯಕ್ರಮವನ್ನು ಜನರ ಮುಂದಿಟ್ಟದ್ದರು. ... ಜಿಲ್ಲೆಯ ಕಾವೇರಿ ನದಿಯ ಹುಟ್ಟಿನ ಸಮೀ... ಭಾಗಮಂಡಲದ ಒತ್ತಿನಲ್ಲಿರುವ ಅಯ್ಯಂಗೇ... ಪ್ರದೇಶದಲ್ಲಿ ಮೀಸಲು ಅರಣ್ಯವೊಂದರಲ್ಲಿ ಒ... ಕಲ್ಲನ್ನು ನೆಟ್ಟು, "ಆ ಕಲ್ಲು ನೆಟ್ಟ ಜಾಗ ಟಿಪ್ಪು ... ಕೊಡವರನ್ನು ನರಮೇಧ ಮಾಡಿದ ಜಾಗ. ಅಲ್... ಸ್ಮಾರಕವನ್ನು ರಚಿಸಲಾಗಿದೆ" ಎಂದು ಹೇಳಿದ್ದರು... 'ದೇವಟ್‌ಪರಂಬು' ಪ್ರದೇಶ ಎಂದು ... ಘೋಷಿಸಿದರು.

ಕೆಲವೇ ದಿನಗಳ ನಂತರ ಅಲ್ಲಿಂದ ಸು... ಕಿ.ಮೀ. ದೂರದಲ್ಲಿ ಒಂದು ಬೃಹದಾಕಾರದ ಕ... ಆ ಕಲ್ಲಿಗೆ ಸುತ್ತಲೂ ರಕ್ಷಣೆಗಾಗಿ 5 ಕಂಬಗಳ... "ಇದು ದೇವಟ್‌ಪರಂಬುನಲ್ಲಿ ಟಿಪ್ಪು ... ಜನಾಂಗದವರನ್ನು ಕೊಂದಿರುವ ಜಾಗವಾಗಿದ... ಸ್ಮರಣೆಗೆ ಅಲ್ಲಿ ಸ್ಮಾರಕವನ್ನು ಮಾಡಲಾಗಿದೆ" ... ಘೋಷಿಸಿದರು. ವಾಸ್ತವವಾಗಿ ಆ ಪ್ರದೇಶವು ... ಅರಣ್ಯ ಪ್ರದೇಶ. ಅಲ್ಲಿಗೆ ಲಾರಿಯಲ್ಲಿ ಈ ಕ... ಕೊಂಡೊಯ್ದು ಜೆಸಿಬಿಯಿಂದ ಕಲ್ಲುಗಳನ್ನು ಅ... ನೆಡಲಾಯಿತು. ಅರಣ್ಯ ಇಲಾಖೆ ಬಹಳ ಜಾಣ...

'ನನಗೆ ನನ್ನ ಜಾತಿಯ ಬಗ್ಗೆ ಯಾವುದೇ ಸಂಶಯವಿಲ್ಲ'




ಎ.ಕೆ.ಸುಬ್ಬಯ್ಯ

ಜನಗಣತಿಯ ಸಂದರ್ಭದಲ್ಲಿ ಪ್ರತಿಯೊಬ್ಬ ಕೊಡವನೂ ತನ್ನ ಹೆಸರಿನ ಜೊತೆಯಲ್ಲಿ 'ಕೊಡವ' ಎಂದು ಸೇರಿಸಬೇಕು ಎಂಬ ಫರ್ಮಾನನ್ನು ನಾಚಪ್ಪ ಹೊರಡಿಸಿದ್ದರು. ಕೊಡವ ಜನಾಂಗದವರು ಪ್ರತ್ಯೇಕ ಎನ್ನುವುದರ ಜೊತೆಗೆ ಕೊಡವ ಜನಾಂಗದವರ ಸಂಖ್ಯೆ ಎಷ್ಟು ಇದೆ ಎಂಬುದನ್ನು ಅರಿತುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ತಾನು ಈ ಬಗ್ಗೆ ಒತ್ತಾಯಿಸುತ್ತಿದ್ದೇನೆ ಎಂಬ ಹೇಳಿಕೆಯನ್ನು ನಾಚಪ್ಪ ನೀಡಿದ್ದರು. ಅವರು ತಮ್ಮ ಹೆಸರನ್ನು ನಾಚಪ್ಪ ಕೊಡವ ಎಂದು ಹೇಳಲು ಆರಂಭಿಸಿದ್ದರು.

ಕೊಡಗು ಜಿಲ್ಲೆಯಲ್ಲಿ ಇಂತಹ ವಿಕೃತಿಗಳ ಬಗ್ಗೆ ಪ್ರತಿಕ್ರಿಯಿಸುವವರು ಮತ್ತು ಧ್ವನಿ ಎತ್ತುವವರು ಕರ್ನಾಟಕದ ಸಾಕ್ಷಿಪ್ರಜ್ಞೆಯಂತಿರುವ ಎ.ಕೆ.ಸುಬ್ಬಯ್ಯ ಮಾತ್ರ. ನಾಚಪ್ಪನವರ ಈ ಹೇಳಿಕೆಯ ಬಗ್ಗೆ ವ್ಯಂಗ್ಯವಾಡಿದ ಸುಬ್ಬಯ್ಯನವರು "ನನಗೆ ತನ್ನ ಜಾತಿಯ ಬಗ್ಗೆ ಯಾವುದೇ ಸಂಶಯವಿಲ್ಲ. ಹಾಗಾಗಿ ಜನಗಣತಿಯ ವೇಳೆ ನನ್ನ ಹೆಸರನ್ನು ಎ.ಕೆ. ಸುಬ್ಬಯ್ಯ ಎಂದು ಮಾತ್ರ ದಾಖಲಿಸುತ್ತೇನೆ. ಸಂಶಯ ಇರುವವರು ಕೊಡವ ಎಂದು ಹಾಕಿಕೊಳ್ಳುತ್ತಾರೆ" ಎಂದು ಲೇವಡಿಮಾಡಿದ್ದರು.

ಅರಾಜಕತೆ ಸೃಷ್ಟಿಸುವ ಉದ್ದೇಶ: ವಿದ್ಯಾ...



ಕೆ. ಆರ್. ವಿದ್ಯಾಧ...

ಭಾಗಮಂಡಲ ಮತ್ತು ತಲಕಾವೇರಿ ಪ್ರದೇಶಗಳು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಪ್ರಾಬಲ್ಯವುಳ್ಳ ಕ್ಷೇತ್ರ. ಕೊಡಗಿನಿಂದ ತಮಿಳುನಾಡಿನವರೆಗೆ ಈ ಕ್ಷೇತ್ರದ ಮಹತ್ವ ಹಬ್ಬಿದೆ. ಈ ಭಾಗದ ಮಣ್ಣಿನ ಮಹತ್ವಕ್ಕೆ ಕಾವೇರಿ ನದಿಯ ನೀರು ಕಾರಣವಾಗಿದ್ದು, ಚೋಳರಿಂದ ಹಿಡಿದು, ಟಿಪ್ಪುವಿನವರೆಗೆ ಕಾವೇರಿ ನದಿಯ ಬಗ್ಗೆ ಎಲ್ಲರಿಗೂ ವಿಶೇಷ ಆಸಕ್ತಿ ಇತ್ತು, ಆ ಕಾರಣಕ್ಕಾಗಿ ಇಲ್ಲಿ ತಮ್ಮ ಪ್ರಾಬಲ್ಯವನ್ನು ಮೆರೆಯಲು ಪ್ರಯತ್ನಿಸುತ್ತಿದ್ದರು. ಭಾಗಮಂಡಲ ಮತ್ತು ತಲಕಾವೇರಿ ಭಾಗದಲ್ಲಿ ತಮ್ಮ ಸಾಂಸ್ಕೃತಿಕ ಅಧಿಪತ್ಯವನ್ನು ಹೇರಲು ಬೇರೆ ಬೇರೆ ರಾಜರು, ಜನಾಂಗದವರು, ಜಾತಿಯವರು ಪ್ರಯತ್ನಿಸಿ ಅದನ್ನು ಹತೋಟಿಗೆ ತೆಗೆದುಕೊಳ್ಳಲು ಯತ್ನಿಸಿದರು. ಇದರ ಒಂದು ಭಾಗವೇ ಇತ್ತೀಚೆಗೆ ಬ್ರಹ್ಮಗಿರಿಗೆ ಪ್ರವೇಶ ನಿಷೇಧ ಮತ್ತು ದೇವಟ್‌ಪರಂಬು ಪ್ರಕರಣವಾಗಿದೆ ಎನ್ನುವುದು ಕೆ. ಆರ್. ವಿದ್ಯಾಧರರವರ ಅಭಿಪ್ರಾಯ.

"ತಲಕಾವೇರಿ ಭಾಗದಲ್ಲಿ ಜಾತಿಗೆ ಸಂಬಂಧಪಟ್ಟಂತೆ ಹಲವಾರು ಘಟನೆಗಳು ನಡೆಯುತ್ತಿರುತ್ತವೆ. ಜಾತಿಯ ಮೇಲಾಟಕ್ಕಾಗಿ ಇಲ್ಲಿ ಯತ್ನಗಳು ನಡೆಯುತ್ತಿರುತ್ತವೆ. ಇದರ ಒಂದು ಅಯ್ಯಂಗೇರಿಯ ಒಂದು ಭಾಗವನ್ನು ದೇವಟ್‌ಪರಂಬು ಎಂದು ಹೇಳಿಕೊಂಡು, ಸ್ಮಾರಕದ ಕಲ್ಲು ಸ್ಥಾಪಿಸಿರುವ... ಇದು ಆ ಭಾಗದಲ್ಲಿ ಅಧಿಪತ್ಯ ಸ್ಥಾಪಿಸುವುದರ ಯತ್ನ" ಎನ್ನುವುದು ವಿದ್ಯಾಧರ ಅವರ ವಿಶ್ಲೇಷಣೆಯಾಗಿದ...

"ನಾಚಪ್ಪ ಕೊಡಗಿನ ಮುಗ್ಧ ಕೊಡವ ಜನಾಂಗದವರ ದಿಕ್ಕು ತಪ್ಪಿಸುತ್ತಿದ್ದಾರೆ. ನಾಚಪ್ಪನವರಿಗೆ ಮಾವೋ... ಮತ್ತು ನಕ್ಸಲ್‌ವಾದಿ ಸಂಘಟನೆಗಳ ಸಂಪರ್ಕವಿದೆ. ನಕ್ಸಲ್‌ವಾದದ ಬೆಂಬಲದಿಂದ ದೇಶವನ್ನು ಅಸ್ತವ್ಯಸ್ತಗೊಳ... ಅವರ ಮೂಲ ಉದ್ದೇಶವಾಗಿದೆ ಎಂಬುದನ್ನು ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ। ... ವಿಜಯ್ ಪೂಣಚ್ಚ ಅವರು ತಮ್ಮ ಕೃತಿಯಾದ 'ಕಾನ್‌ಫ್ಲಿಕ್ಟಿಂಗ್ ಐಡೆಂಟಿಟೀಸ್ ಆಫ್ ಕರ್ನಾಟಕ'ದಲ್ಲಿ ವಿವರಿ... ಎನ್ನುತ್ತಾರೆ ವಿದ್ಯಾಧರ.

...ಾಚಪ್ಪನ ವರ್ಷಕ್ಕೊಂದು ಹೊಸ ಯೋಜನೆ

...ಸಿ.ಎನ್.ಸಿ ಸಂಘಟನೆ ಆರಂಭಗೊಂಡ ನಂತರ ನಾಚಪ್ಪ ವರ್ಷಕ್ಕೊಂದು ಹೊಸ ಯೋಜನೆಯನ್ನು ತೇಲಿಬಿಡುತ್ತಿದ್ದರು. ...ಡಗಿನಲ್ಲಿ ಹಿಂದೆ 45 ನಾಡುಗಳು ಇದ್ದವು ಹಾಗೂ ಅವುಗಳ ಪ್ರತಿನಿಧಿಗಳೂ ಇದ್ದರು. ಹಾಗಾಗಿ 45 ನಾಡುಗಳಿಗೆ ...ಬಂಧಪಟ್ಟಂತೆ 'ಕೊಡವ ಪಾರ್ಲಿಮೆಂಟ್' ಸ್ಥಾಪಿಸಿದ್ದೇನೆ" ಎಂದು ನಾಚಪ್ಪ ಆರಂಭದಲ್ಲಿ ಹೇಳಿದರು. ಕೊಡವ ...ರ್ಲಿಮೆಂಟಿನ ಮಳೆಗಾಲದ ಅಧಿವೇಶನ ಮತ್ತು ಚಳಿಗಾಲದ ಅಧಿವೇಶನ ಎಂಬುದನ್ನು ಪ್ರಕಟಿಸುತ್ತಾ, ತಮ್ಮಲ್ಲಿ 45 ...ರ್ಲಿಮೆಂಟೇರಿಯನ್ಸ್ ಇದ್ದಾರೆ ಎಂದು ಹೇಳುತ್ತಿದ್ದರು. ನಾಚಪ್ಪ ಏನೋ ಮಾಡುತ್ತಿದ್ದಾನೆ, ಇದೆಲ್ಲ ತಮಗೆ ಸಂಬಂಧಪಡದ ...ರ ಎಂದುಕೊಂಡ ಕೊಡಗಿನ ಜನತೆ ಪಾರ್ಲಿಮೆಂಟಿನ ವಿಚಾರ ಗಂಭೀರವಾದದ್ದಲ್ಲ ಎಂದು ಸುಮ್ಮನಿದ್ದರು.

ಇದಾದನಂತರ "ಕೊಡವ ಜನಾಂಗವನ್ನು ಗುಡ್ಡಗಾಡು ಜನಾಂಗ ಎಂದು ಪರಿಗಣಿಸಬೇಕು ಮತ್ತು ಬುಡಕಟ್ಟು ...ರಿಗೆ ನೀಡುವ ಸೌಲಭ್ಯವನ್ನು ತಮಗೂ ನೀಡಬೇಕು" ಎಂಬ ಬೇಡಿಕೆಯನ್ನು ನಾಚಪ್ಪ ಮತ್ತೊಂದು ಹಂತದಲ್ಲಿ ...ಟ್ಟರು. ಕೊಡಗಿನಲ್ಲಿ ಮೂಲನಿವಾಸಿಗಳಾಗಿರುವ ಬುಡಕಟ್ಟು ಜನಾಂಗದವರು ಅತ್ಯಂತ ಹೀನಾಯಸ್ಥಿತಿಯಲ್ಲಿದ್ದರೂ ...ರ ಸೌಲಭ್ಯ ತಮಗೆ ಬೇಕು ಎಂದು ಉತ್ತಮ ಜೀವನ ಪದ್ಧತಿಯನ್ನು ಸಾಗಿಸುತ್ತಿರುವ ಕೊಡವ ಜನಾಂಗದ ...ವಾಗಿ ನಾಚಪ್ಪ ಕೇಳುತ್ತಿದ್ದನ್ನು ಹುಚ್ಚೋದ್ಯಮಯವಾಗಿತ್ತು.

ಇದಾದನಂತರ ಕೊಡಗು ಜಿಲ್ಲೆಯ 'ತಡಿಯಂಡಮೋಳ್' ಬೆಟ್ಟದಲ್ಲಿ 'ಕೊಡವ ಕುಂದ್' ಎಂಬ ಒಂದು ಹೊಸ ...ರ್ಯಕ್ರಮವನ್ನು ರೂಪಿಸಿದರು. ಮೀಸಲು ಅರಣ್ಯಕ್ಕೆ ಬೇಲಿ ಹಾಕಿ, ಅದು ಕೊಡವರಿಗೆ ಸಂಬಂಧಪಟ್ಟ ಪ್ರದೇಶ ...ದು ಹೇಳಿಕೊಂಡು, ಅಲ್ಲಿ ಕೊಡವರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು ...ದು ನಾಚಪ್ಪ ಹೊರಟರು. ಆದರೆ ಅಲ್ಲಿಯ ಸ್ಥಳೀಯರಿಂದ ಪ್ರತಿರೋಧ ಬಂದ ಕಾರಣ ಮತ್ತು ಅರಣ್ಯ ...ಲಾಖೆಯವರು ಬೇಲಿಯನ್ನು ತೆರವುಗೊಳಿಸಿದ ಕಾರಣ ಆ ಕಾರ್ಯಕ್ರಮವನ್ನು ನಾಚಪ್ಪ ಕೈಬಿಡಬೇಕಾಯಿತು.

...ಒಂದೆರಡು ವರ್ಷಗಳ ಹಿಂದೆ "ಕಾಫಿ ವ್ಯಾಪಾರವನ್ನು ದಾವೂದ್ ಇಬ್ರಾಹಿಂ ನಿಯಂತ್ರಿಸುತ್ತಿದ್ದಾರೆ. ಹಾಗಾಗಿ ...ಡಗಿನ ಕಾಫಿಗೆ ಉತ್ತಮ ಮಾರುಕಟ್ಟೆ ಸಿಗುತ್ತಿಲ್ಲ. ಆತನ ಕಪಿಮುಷ್ಟಿಯಿಂದ ಕಾಫಿ ವ್ಯಾಪಾರವನ್ನು ಮುಕ್ತಗೊಳಿಸಬೇಕಾದರೆ, ...ವರು ಕಾಫಿ ವ್ಯಾಪಾರ ಮಾಡಬೇಕು" ಎಂಬ ಒಂದು ಹೊಸ ಯೋಜನೆಯನ್ನು ಪ್ರಸ್ತಾಪಿಸಿದರು. ಇಂತಹ ...ಪ್ಪನ ಪಲುಪೈಲಾಟಗಳಲ್ಲಿ 'ದೇವಟ್‌ಪರಂಬು' ಯೋಚನೆ ಮತ್ತೊಂದು ಹುಚ್ಚಾಟವಲ್ಲದೆ ಮತ್ತಿನ್ನೇನಲ್ಲ.


ಮೋಸಕ್ಕೆ ಪಿಗ್ಗಿ ಬಿದ್ದ ಜಿಲ್ಲಾ ಬಿಜೆಪಿ ನಾಯಕರು ಆ ಪ್ರದೇಶವನ್ನು ರಾಷ್ಟ್ರೀಯ ಸ್ಮಾರಕವಾಗಿಸಲು ಕೇಂದ್ರ ಸರಕಾರದ ಮೇಲೆ ಒತ್ತಡ ತರುತ್ತೇವೆ ಎಂದು ಘೋಷಿಸಿದರು.


ಇದಕ್ಕೆ ಪೂರಕವಾಗಿ "ದೇವಟ್‌ಪರಂಬು ಪ್ರದೇಶವನ್ನು ಜಲಿಯನ್ ವಾಲಾಬಾಗ್ ಮಟ್ಟದಲ್ಲಿ ಪರಿಗಣಿಸಬೇಕು ಮತ್ತು ಅದಕ್ಕೆ ವಿಶ್ವಮಾನ್ಯತೆಯನ್ನು ನೀಡಬೇಕು. ಹೋಲೋಕಾಸ್ಟ್ ಮ್ಯೂಸಿಯಂ ಸ್ಥಾಪಿಸಬೇಕು" ಎಂಬ ಹೊಸ ಬೇಡಿಕೆಯನ್ನು ನಾಚಪ್ಪ ಮುಂದಿಟ್ಟರು. ಇಂತಹ ಶಬ್ದಗಳನ್ನು ಕೇಳದಿರುವ ಕೊಡಗಿನ ಕೊಡವರು ಮತ್ತು ಇತರರು ನಾಚಪ್ಪ ಏನೋ ಮುಖ್ಯವಾದ ಮಾತುಗಳನ್ನು ಆಡುತ್ತಿದ್ದಾರೆ ಎಂದು ಭಾವಿಸಲಾರಂಭಿಸಿದರು. ಅಷ್ಟರಮಟ್ಟಿಗೆ ಜನರನ್ನು ಮರಳು ಮಾಡುವ ಶಕ್ತಿ ನಾಚಪ್ಪ ಮತ್ತು ಕಾರ್ಯಪ್ಪನವರಲ್ಲಿ ಇದೆ. ನಾಚಪ್ಪನ ಈ ದಂಧೆಯಿಂದ ಕಾರ್ಯಪ್ಪನ ಪುಸ್ತಕ ವಹಿವಾಟಿನ ದಂಧೆಯೂ ಮುಂದುವರೆಯಿತು.


ಈ ಮಧ್ಯೆ "ಫ್ರೆಂಚರು ಟಿಪ್ಪುವಿಗೆ ಕೊಡಗಿನ ಯುದ್ಧದ ಸಂದರ್ಭದಲ್ಲಿ ಬೆಂಬಲವನ್ನು ಕೊಟ್ಟಿದ್ದರು. ಫ್ರೆಂಚರ ನೆರವಿನಿಂದ ಟಿಪ್ಪು ಕೊಡವರ ಮಾರಣಹೋಮವನ್ನು ಮಾಡಿದ. ಆದ್ದರಿಂದ ಫ್ರೆಂಚರು ಕೊಡವ ಜನಾಂಗದವರ ಕ್ಷಮೆಯನ್ನು ಯಾಚಿಸಬೇಕು. ಇಲ್ಲದಿದ್ದರೆ ಫ್ರೆಂಚ್ ರಾಜತಾಂತ್ರಿಕ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಗುವುದು" ಎಂಬ ಹೇಳಿಕೆಯನ್ನು ನಾಚಪ್ಪ

ಎಡೆಯನ್ನು ಇಟ್ಟು ತ್ಯಾಗ ಮಾಡಿದ ಹಿರಿಯರನ್ನು ಗೌರವಿಸುತ್ತಿದ್ದೇವೆ ಎಂದು ಹೇಳಿಕೊಂಡರು. ಆದರೆ ಈ ಸಂಪೂರ್ಣ ಘಟನೆಯ ಬಗ್ಗೆ ವಿಶ್ಲೇಷಣೆ ಮಾಡಿ, ಅದನ್ನು ಖಂಡಿಸಿದವರು ವಿ.ಕೆ.ಸುಬ್ಬಯ್ಯ. "ದೇವಟ್‌ಪರಂಬು ಎಂಬ ಪ್ರದೇಶ ಇಲ್ಲ, ಟಿಪ್ಪು ಅಲ್ಲಿ ಕಾಳಗ ಮಾಡಿದ ಎನ್ನುವುದು ಸುಳ್ಳು. ಕೊಡವರನ್ನು ಟಿಪ್ಪು ಕೊಂದಿದ್ದಾನೆ ಎನ್ನುವುದು ಮತ್ತಷ್ಟು ಸುಳ್ಳು" ಎಂದು ಆಧಾರಸಹಿತ ಸುಬ್ಬಯ್ಯನವರು ಸಾರ್ವಜನಿಕರ ಮುಂದೆ ಇಟ್ಟರು. "ಟಿಪ್ಪು ಕೊಡವರನ್ನು ಕೊಂದಿದ್ದಾನೆ ಎನ್ನುವುದು ಎಂದಿಗೂ ಸರಿಯಲ್ಲ, ಯುದ್ಧದ ಸಂದರ್ಭದಲ್ಲಿ ಒಬ್ಬ ರಾಜ ತನ್ನ ವಿರುದ್ಧ ದಂಗೆ ಎದ್ದ ದಂಗೆಕೋರರನ್ನು ಕೊಲ್ಲುತ್ತಾನೆ ವಿನಃ, ಜಾತಿ, ಧರ್ಮ ನೋಡಿಕೊಂಡು ಯುದ್ಧ ಮಾಡುವುದಿಲ್ಲ" ಎಂದು ಹೇಳಿದರು. "ನಾಚಪ್ಪ ಇದನ್ನು ಸ್ಮಾರಕ ಎಂದು ಹೇಳುತ್ತಾರೆ. ಆದರೆ ಅದು ಯಾರ ಸ್ಮಾರಕ?" ಎಂದು ಪ್ರಶ್ನಿಸಿದ ಸುಬ್ಬಯ್ಯ "ಅದು ಸ್ಮಾರಕವಾದರೆ ಅದು ಟಿಪ್ಪುವಿನದಾಗಬೇಕು. ಯುದ್ಧದಲ್ಲಿ ಮಡಿದವರದ್ದಾದರೆ ಅದು ಸಮಾಧಿಯಾಗುತ್ತದೆ" ಎಂದು ಕಿವಿಮಾತು ಹೇಳಿದರು.

"ಕೊಡವರು ಬಿಜೆಪಿಯತ್ತ ವಾಲಿದ್ದಾರೆ. ಆದರೆ ಅವರು ಕೋಮುವಾದಿಗಳಲ್ಲ, ಬಿಜೆಪಿಗೆ ಕೊಡವರನ್ನು ಕಾಯಂ ಕೋಮುವಾದಿಗಳನ್ನಾಗಿಸಿಕೊಂಡು, ಬಿಜೆಪಿಯ ಕಾಯಂ ಮತದಾರನ್ನಾಗಿಸುವ ಷಡ್ಯಂತ್ರ ಇದು" ಎಂದು ಸುಬ್ಬಯ್ಯ ವಿಶ್ಲೇಷಿಸಿದರು. ಇದಾದ ಕೆಲವೇ ದಿನಗಳಲ್ಲಿ ನಾಚಪ್ಪ ಮತ್ತು ಸಂಗಡಿಗರು ನೆಟ್ಟ ಕಂಬಗಳು ಕೆಡವಲ್ಪಟ್ಟವು.









...ಗಳನ್ನೆಲ್ಲಾ ನೆಡುವವರೆಗೂ ಅರಣ್ಯ ಕಾಯುವ ಕೆಲಸವನ್ನು ...ಕಡೆ ಮಾಡಿ, ಆನಂತರ ತಮಗೇನೋ ದೊಡ್ಡ ...ಹಿತಿ ಲಭಿಸಿದೆ, ಅದರ ಆಧಾರದಲ್ಲಿ ತಾವು ಬಂದಿದ್ದೇವೆ ...ವಂತೆ ವರ್ತಿಸಿ, ಮೀಸಲು ಅರಣ್ಯಕ್ಕೆ ಅಕ್ರಮ ಪ್ರವೇಶದ ...ನ್ನು ಸುಮಾರು 21 ಜನರ ಮೇಲೆ ದಾಖಲಿಸಿದರು. ...ರೆ ಈ ವರದಿ ಬರೆಯುವವರೆಗೂ ಸುಮಾರು 6 ...ಗಳು ಕಳೆದಿದ್ದರೂ, ಯಾರನ್ನೂ ಬಂಧಿಸಿಲ್ಲ. ...ಪಾರೋಪಣ ಪಟ್ಟಿಯೂ ಸಲ್ಲಿಕೆಯಾಗಿಲ್ಲ. ...ಮತಿಗಾಗಿ ಕಾಯುತ್ತಿದ್ದೇವೆ ಎಂದು ಅರಣ್ಯ ಇಲಾಖೆ ...ತ್ತಿದೆ.

ಕೊಡಗು ಜಿಲ್ಲೆಯಲ್ಲಿ ಪ್ರಮುಖವಾದ ಎರಡು ...ಂಗವೆಂದರೆ ಕೊಡವ ಮತ್ತು ಅರೆಭಾಷೆ ಗೌಡರು. ...ಬ್ಬರ ನಡುವೆ ಸಾಧಾರಣವಾಗಿ ಪೈಪೋಟಿ ಇರುತ್ತದೆ. ...ಪ್ಪ ಕಲ್ಲು ನೆಟ್ಟ ಕೂಡಲೇ ಕೆಲವು ಅರೆಭಾಷೆ ಗೌಡರು ...ಪ್ಪು ಅರೆಭಾಷೆ ಗೌಡರನ್ನೂ ಯುದ್ಧದಲ್ಲಿ ಕೊಂದಿದ್ದಾನೆ. ...ಗಿ ತಮ್ಮ ಜನಾಂಗದವರ ಸ್ಮಾರಕವು ಅಲ್ಲಿ ...ಬೇಕು" ಎಂಬ ಬೇಡಿಕೆಯನ್ನು ಮುಂದಿಡುವ ...ಲಕ ಕೊಡವ - ಗೌಡ ಸಂಘರ್ಷಕ್ಕೆ ಕಾರಣರಾದರು. ...ಪ್ಪ ಹೇಳಿದ್ದ ಸುಳ್ಳನ್ನು ಸತ್ಯವಾಗಿಸಲು ಗೌಡ ...ಂಗದವರು ಹೊರಟರು.

...ತಾನು ನೆಟ್ಟ ಕಲ್ಲಿಗೆ ಮತ್ತಷ್ಟು ಸಿಗಬೇಕು ಮತ್ತು ತನ್ನ



ಈ ಹೊಸ ದಂಧೆಗೆ ಅಡಚಣೆ ಬರಬಾರದು ಎಂದು ಹೇಳಿಕೊಂಡು ನಾಚಪ್ಪ ಒಂದು ಕಾಲದಲ್ಲಿ ತನ್ನ ಕಟ್ಟಾ ವಿರೋಧಿಯಾಗಿದ್ದ ಮತ್ತೊಬ್ಬ ಸೋಗಲಾಡಿ, ಸಮಾಜದಲ್ಲಿ ವಿಷಬೀಜವನ್ನು ಬಿತ್ತುವುದರಲ್ಲಿ ನಿಸ್ಸೀಮನಾದ ಅಡ್ಡಂಡ ಕಾರ್ಯಪ್ಪನ ಸಹಕಾರದೊಂದಿಗೆ ಜಿಲ್ಲೆಯ ಬಿಜೆಪಿಯವರು ಅಲ್ಲಿಗೆ ಬರುವಂತೆ ಮಾಡಿದರು. ಅಡ್ಡಂಡ ಕಾರ್ಯಪ್ಪ ಒಬ್ಬ ರಂಗಭೂಮಿ ಕಲಾವಿದ. ರಂಗವೇದಿಕೆಯಲ್ಲಿ ತನ್ನ ನಟನಾ ನೈಪುಣ್ಯವನ್ನು ಪ್ರದರ್ಶಿಸುವ ಬದಲು, ನಿಜಜೀವನದಲ್ಲಿ ನಾಟಕಗಳನ್ನು ಆಡಿ, ಜನರನ್ನು ಮರಳು ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿರುವ ವ್ಯಕ್ತಿ. ಟಿಪ್ಪು ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಸಾಕಷ್ಟು ವಿಷಕಾರಿದ್ದ ಈ ಕಾರ್ಯಪ್ಪ, ಅದರ ಬೆನ್ನಿಗೆ 'ಟಿಪ್ಪು ಮತ್ತು ಕೊಡವರು' ಎಂಬ ಕೃತಿಯನ್ನು ರಚಿಸಿ, ಚಿದಾನಂದ ಮೂರ್ತಿಯವರ ಸುಳ್ಳುಗಳನ್ನೇ ಭಟ್ಟಿ ಇಳಿಸಿ, ಅದಕ್ಕೆ ಮತ್ತಷ್ಟು ಸುಳ್ಳುಗಳನ್ನು ಜೋಡಿಸಿ, ಕೊಡವ ಜನಾಂಗದಲ್ಲಿ ಟಿಪ್ಪುವಿನ ಬಗ್ಗೆ ಒಂದು ರೀತಿಯ ಅಸಹ್ಯ ಹುಟ್ಟುವಂತೆ ಮಾಡಲು ಪ್ರಯತ್ನಿಸಿದ ವ್ಯಕ್ತಿ. ಅದೇನೇ ಇರಲಿ, ನಾಚಪ್ಪನ

ನೀಡಿದರು. ಈ ಹೇಳಿಕೆ ಬಂದಾಗ ಕೊಡಗಿನ ಜನತೆ ನಾಚಪ್ಪನವರ ಬೌದ್ಧಿಕ ಸ್ವಾಸ್ಥ್ಯತೆಯ ಬಗ್ಗೆ ಸಂಶಯದಿಂದ ನೋಡಲಾರಂಭಿಸಿದರು. 200 ವರ್ಷಗಳ ಹಿಂದೆ ಆಗಿನ ಫ್ರೆಂಚರು ಟಿಪ್ಪುವಿಗೆ ಬ್ರಿಟಿಷರನ್ನು ಸದೆಬಡಿಯಲು ಸಹಕಾರ ನೀಡಿದರು ಎನ್ನುವ ಕಾರಣಕ್ಕೆ ಈಗ ಫ್ರೆಂಚ್ ಸರಕಾರ ಕೊಡವರ ಕ್ಷಮೆಯನ್ನು ಯಾಚಿಸಬೇಕು ಎಂಬ ಬೇಡಿಕೆಯನ್ನು ಇಟ್ಟರೆ, ತಾನು ನಗೆಪಾಟಲಿಗೆ ಈಡಾಗುತ್ತೇನೆ ಮತ್ತು ಕೊಡವ ಜನಾಂಗದ ಮಾನ ಹರಾಜು ಹಾಕಿದಂತಾಗುತ್ತದೆ ಎಂದು ನಾಚಪ್ಪನಿಗೆ ಅನಿಸಲಿಲ್ಲವೋ ಅಥವ ಇಂತಹದ್ದನ್ನೆಲ್ಲಾ ಮಾಡಿ ಕೊಡವರ ಮೆಚ್ಚುಗೆಯನ್ನು ಗಳಿಸಬಹುದು ಎಂದು ಭಾವಿಸಿದರೋ ತಿಳಿಯದು.

ಕೆಡವಿದ ಸ್ಮಾರಕದ (?) ಕಲ್ಲುಗಳು

ನಾಚಪ್ಪ ಮತ್ತು ಸಂಗಡಿಗರು ಕೆಲವು ಕಲ್ಲುಗಳನ್ನು ನೆಟ್ಟು, ಅದನ್ನು ಸ್ಮಾರಕ ಎಂದು ಘೋಷಿಸಿದ ನಂತರ ಜಿಲ್ಲೆಯ ಕೆಲವು ಕೊಡವ ಸಮಾಜದವರು ಅಲ್ಲಿಗೆ ತೆರಳಿ,

ಜೆ.ಸಿ.ಬಿ. ಯಂತ್ರದ ಮೂಲಕ ಆ ಕಂಬಗಳನ್ನು ಕೆಡವಲಾಗಿತ್ತು. ನಾಚಪ್ಪನವರಿಗೆ ಇದೊಂದು ಆಘಾತಕಾರಿ ವಿಚಾರವಾಗಿತ್ತು. ಇಲ್ಲಿಯತನಕ ತನ್ನ ಯಾವುದೇ ಆಟಾಟೋಪವನ್ನು ಯಾರೂ ವಿರೋಧಿಸಿದೇ ಇದ್ದಾಗ ಈಗ ಇಂತಹ ಒಂದು ಘೋರ ವಿಚಾರ ನಡೆದದ್ದು ಅವರಿಗೆ ಸಹಿಸಲಾರದ ವಿಚಾರವಾಯಿತು. ಆದ್ದರಿಂದ ನಾಚಪ್ಪ ಮತ್ತು ಜಿಲ್ಲೆಯ ಕೆಲವು ಕೊಡವ ಸಮಾಜಗಳು ಆಕಾಶವೇ ಕಳಚಿ ತಮ್ಮ ಮೇಲೆ ಬಿದ್ದಂತೆ ಪ್ರತಿಕ್ರಿಯಿಸಿದವು.

ಕಲ್ಲು ನೆಟ್ಟಾಗ ತಣ್ಣಗಿದ್ದ ಅರಣ್ಯ ಮತ್ತು ಪೊಲೀಸ್ ಇಲಾಖೆ, ಕಲ್ಲು ಕೆಡವಲ್ಪಟ್ಟಾಗ ಮಾತ್ರ ಅತ್ಯಂತ ಹುರುಪಿನಿಂದ ಕಾರ್ಯ ನಿರ್ವಹಿಸಿದವು. ಕಲ್ಲನ್ನು ನೆಟ್ಟದ್ದು ಕೊಡವ ಜನಾಂಗದವರಾದ ಕಾರಣ, ಕೆಡವಿದ್ದು ಗೌಡ ಜನಾಂಗದವರು ಎಂಬ ತೀರ್ಮಾನಕ್ಕೆ ಬಂದ ಪೊಲೀಸರು, ಅವರ ವಿರುದ್ಧ ಗುಮಾನಿ ವ್ಯಕ್ತಪಡಿಸಿ, ಕೆಲವರನ್ನು ವಿಚಾರಣೆಗೆ ಕರೆಸುವ ಪ್ರಕ್ರಿಯೆಯಲ್ಲಿ ತೊಡಗಿದರು. ಪೊಲೀಸ್ ಇಲಾಖೆ ಪ್ರಕರಣವನ್ನು ದಾಖಲಿಸುವಾಗ ಪೂಜಾ ಸ್ಥಳದಲ್ಲಿ ಹಾನಿ ಮಾಡಲಾಗಿದೆ ಎಂದು ದಾಖಲಿಸಿ, ಜಾಮೀನುರಹಿತ ಪ್ರಕರಣವನ್ನಾಗಿಸಿದರು. ಅಕ್ರಮವಾಗಿ ಕಲ್ಲು ನೆಟ್ಟಿದ್ದನ್ನು ಪೊಲೀಸರು ಸಕ್ರಮಗೊಳಿಸಲು ಪೂಜಾ ಸ್ಥಳದಲ್ಲಿ ಹಾನಿ ಮಾಡಿದ್ದಾರೆ ಎಂದು ಹೇಳಿದರು. ಅಂದರೆ ಕೊಡಗಿನ ಪೊಲೀಸ್ ಇಲಾಖೆ ಮತ್ತು ಅರಣ್ಯ ಇಲಾಖೆ ಇಲ್ಲಿನ ಕೊಡವ ಜನಾಂಗದ ಗುಲಾಮರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದು ಇದರಿಂದ ಖಚಿತವಾಯಿತು.

ಬಿಜೆಪಿ ಅಭ್ಯರ್ಥಿಯ ಬದಲಾವಣೆಯ ತಂತ್ರಗಾರಿಕೆ

ದೇವಟ್‌ಪರಂಬು ಎಂಬ ಪ್ರದೇಶವನ್ನು ಗುರುತಿಸಿದ್ದು ಟಿಪ್ಪು ಜನ್ಮದಿನಾಚರಣೆಯನ್ನು ವಿರೋಧಿಸಿದ್ದು ಎಲ್ಲವನ್ನೂ ಗಮನಿಸಿದರೆ, ಇದರ ಹಿನ್ನೆಲೆಯಲ್ಲಿ ಗಾಢವಾದ ಷಡ್ಯಂತ್ರವಿದೆ ಎಂಬುದು ದೃಷ್ಟವಾಗುತ್ತದೆ. ವಿರಾಜಪೇಟೆ ವಿಧಾನಸಭಾ ಕ್ಷೇತ್ರ ಕೊಡವ ಜನಾಂಗದ ಪ್ರಾಬಲ್ಯ ಇರುವ ಕ್ಷೇತ್ರ. ಮಡಿಕೇರಿ ಕ್ಷೇತ್ರವು ಗೌಡ ಪ್ರಾಬಲ್ಯದ ಕ್ಷೇತ್ರ. ಆದರೆ ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಗೌಡ ಜನಾಂಗಕ್ಕೆ ಸೇರಿದವರು. ಮಡಿಕೇರಿಯ ಅಪ್ಪಚ್ಚು ರಂಜನ್ ಕೊಡವ ಜನಾಂಗಕ್ಕೆ ಸೇರಿದವರು. ಮಡಿಕೇರಿಯಲ್ಲಿ ಅಪ್ಪಚ್ಚು ರಂಜನ್ ಬಗ್ಗೆ ಯಾವುದೇ ರೀತಿಯ ಅಸಮಾಧಾನ ಇಲ್ಲ. ಆದರೆ ವಿರಾಜಪೇಟೆಯ ಶಾಸಕ ಕೆ.ಜಿ. ಬೋಪಯ್ಯನವರ ಬಗ್ಗೆ ಬಿಜೆಪಿಯ ಕೊಡವರಲ್ಲಿ ಅಸಮಾಧಾನ ಇದೆ. ಹೇಗಾದರೂ [illegible] ಮುಂದಿನ ಚುನಾವಣೆಯ ವೇಳೆಗೆ ಅವರನ್ನು

⇨ 19

ಚೆಡ್ಡಿ ವಿರೋಧಿಯಾಗಿದ್ದ ನಾಚಪ್ಪನ ಬಿಜೆಪಿ ನಂಟು


ನಾಚಪ್ಪ ಆರಂಭದಲ್ಲಿ ಕಟ್ಟರ್ ಬಿಜೆಪಿ ಮತ್ತು ಆರೆಸ್ಸೆಸ್ ವಿರೋಧಿಯಾಗಿದ್ದರು. ಈಗ ಅವರ ಎಲ್ಲಾ ಕಾರ್ಯಕ್ರಮಗಳು ಬಿಜೆಪಿಯ ಸಹಕಾರದಿಂದಲೇ ನಡೆಯುತ್ತಿವೆ. ಚೆಡ್ಡಿಗಳು ನಾಚಪ್ಪನನ್ನು ಹೈಜಾಕ್ ಮಾಡಿದ್ದಾರೋ ಅಥವಾ ನಾಚಪ್ಪ ಚೆಡ್ಡಿಗಳನ್ನೇ ಹೈಜಾಕ್ ಮಾಡಿದ್ದಾರೋ ಯಾರಿಗೂ ತಿಳಿಯದು.

ವಿಚಿತ್ರವೆಂದರೆ ತುಂಬಾ ಹಿಂದೆ ನಾಚಪ್ಪನ ಎಲ್ಲಾ ಕಾರ್ಯಕ್ರಮಗಳನ್ನು ಸ್ಥಳೀಯ ಕಾಂಗ್ರೆಸ್ ಬೆಂಬಲಿಸುತ್ತಿತ್ತು. ಮಾಜಿ ಸಚಿವ ಎಂ.ಎಂ. ನಾಣಯ್ಯ ಚುನಾವಣೆಗೆ ಸ್ಪರ್ಧಿಸಿದಾಗ ಅವರ ಚುನಾವಣಾ ಕಚೇರಿಯನ್ನು ಉದ್ಘಾಟಿಸಿದವರು ಇದೇ ನಾಚಪ್ಪ. ಆಗೆಲ್ಲ ನಾಚಪ್ಪ ಬಿಜೆಪಿ ಮತ್ತು ಸಂಘ ಪರಿವಾರವನ್ನು [illegible] ಎಂದು ವಿರೋಧಿಸುತ್ತಿದ್ದರು. ಅದೇರೀತಿ ಕೊಡವ ಸಮಾಜಗಳನ್ನು, ಅಖಿಲ ಕೊಡವ ಸಮಾಜವನ್ನು, ಫೆಡರೇಷನ್ ಆಫ್ ಕೊಡವ ಸಮಾಜವನ್ನು ಟೀಕಿಸುತ್ತಿದ್ದರು. ಅಖಿಲ ಕೊಡವ ಸಮಾಜದ ಅಧ್ಯಕ್ಷ [illegible] ಎಂದು ಮೂದಲಿಸಿದ್ದರು. ಕೊಡವ ಸಂಘಟನೆಗಳು ಕೊಡವರ ಅಭಿವೃದ್ಧಿಗೆ ಏನೂ ಮಾಡುತ್ತಿಲ್ಲ ಎಂದು ಮೂದಲಿಸುತ್ತಿದ್ದರು. ಕೊಡವ ರಾಜಕಾರಣಿಗಳು ಕೊಡವರ ಅಭ್ಯುದಯಕ್ಕೆ ಏನೂ ಮಾಡಿಲ್ಲ ಎಂದು ಆರೋಪಿಸುತ್ತಿದ್ದರು.

ಇತ್ತೀಚೆಗೆ ನಾಚಪ್ಪನವರ ಸಂಘಟನೆಯಲ್ಲಿ [illegible] 'ಯುಕೊ' ಎಂಬ ಸಂಘಟನೆ [illegible] ಅವರೆಲ್ಲರ ನಡುವೆ ಸೈದ್ಧಾಂತಿಕವಾಗಿ ಯಾವುದೇ [illegible]

[illegible]

ಸದರಿ ಮೋದಿ-ಪ್ರೇರಿತ ರಾಜಕೀಯ "ಧಮ್ಮ ಚೇತನ ಯಾತ್ರೆ"ಗೆ ರಾಜ್ಯದ ಇತರ ಬೌದ್ಧ ಧರ್ಮೀಯರಿಂದ ನಿರೀಕ್ಷಿಸಿದಷ್ಟು ಬೆಂಬಲ ಕಂಡುಬಂದಿಲ್ಲ. ವಾಸ್ತವದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಬೌದ್ಧ ಭಿಕ್ಕುಗಳಂತೂ ಧಮ್ಮ ವಿರಿಯೊ ಬಿಜೆಪಿ ಪರವಾಗಿ ಮತಯಾಚನೆಗೆ ಹೊರಟಿರುವ ವಿಷಯ ಕೇಳಿ ಕಿಡಿಕಿಡಿಯಾಗಿದ್ದಾರೆ. ಈ ಧಮ್ಮ ವಿರಿಯೊ ಎಂಬ ಬೌದ್ಧ ಭಿಕ್ಕುವಿನ ಚರಿತ್ರೆಯನ್ನು ಒಂದಿಷ್ಟು ಕೆದಕಿದಾಗ ಕೆಲವು ಸ್ವಾರಸ್ಯಕರ ಮಾಹಿತಿಗಳು ಹೊರಬೀಳುತ್ತವೆ. ಹಿಂದೂತ್ವವಾದಿ ಕಾವಿಧಾರಿಗಳ ಚರಿತ್ರೆಯ ಹಾಗೆ. 70ರ ದಶಕದ ಅಂತ್ಯ ಮತ್ತು 80ರ ದಶಕದ ಆರಂಭದ ನಡುವಿನ ಅವಧಿಯಲ್ಲಿ ಈತ ಒಂದು ಅನಾಥಾಶ್ರಮ ನಡೆಸುತ್ತಿದ್ದ. ಆ ಸಂದರ್ಭದಲ್ಲಿ ಸರಕಾರಿ ಅನುದಾನವನ್ನು ತನ್ನ ಕಿಸೆಗೆ ಇಳಿಬಿಟ್ಟಿದ್ದ ಈತನ ವಿರುದ್ಧ ಡಾರ್ಜಿಲಿಂಗ್ ಪೊಲೀಸರು ಐಪಿಸಿ 409ರಡಿ ಪ್ರಕರಣ ದಾಖಲಿಸಿದ್ದರು. ಕೊನೆಯಲ್ಲಿ ಸುಮಾರು ಒಂದು ತಿಂಗಳ ಕಾಲ ಜೈಲುಶಿಕ್ಷೆ ಅನುಭವಿಸಿದ ಬಳಿಕವೆ ವಿರಿಯೊ ಬಿಡುಗಡೆಯಾಗಿದ್ದ.



ಉತ್ತರಪ್ರದೇಶದಲ್ಲಿ ದಲಿತರಿಗೆ ಮಂಕುಬೂದಿ

ಮುಂದಿನ ವರ್ಷ ನಡೆಯಲಿರುವ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗಳಿಗೆ ರಂಗಭೂಮಿ ಈಗಿಂದೀಗಲೆ ಸಜ್ಜುಗೊಳ್ಳುತ್ತಿದೆ. ವಿವಿಧ ರಾಜಕೀಯ ಪಾತ್ರಧಾರಿಗಳು ಈಗಾಗಲೆ ತಮ್ಮ ರಂಗತಾಲೀಮು ಪ್ರಾರಂಭಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಪಾಲಿಗೆ ಉತ್ತರಪ್ರದೇಶದಲ್ಲಿ ಜಯ ಗಳಿಸುವುದು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿರುವುದರಿಂದ ಅದು ಅದರದೇ ಆದ ವಿಶಿಷ್ಟ ವಿಧಾನಗಳಲ್ಲಿ ಪೂರ್ವಸಿದ್ಧತೆಗಳನ್ನು ಮಾಡತೊಡಗಿದೆ. ದೇಶದಾದ್ಯಂತ ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಕೆಲವು ದಿನಗಳ ಹಿಂದೆ ಅಯೋಧ್ಯೆಯಲ್ಲಿ ಬಜರಂಗ ದಳದ ಕಾರ್ಯಕರ್ತರಿಗಾಗಿ ಆಯುಧ ತರಬೇತಿ ಕಾರ್ಯಕ್ರಮವೊಂದನ್ನು ನಡೆಸಲಾಗಿದೆ. ದಳದ ಮಾತೃ ಸಂಘಟನೆಯಾದ ವಿಶ್ವ ಹಿಂದೂ ಪರಿಷತ್ತಿನ ವಕ್ತಾರ ಶರದ್ ಶರ್ಮ ಪ್ರಕಾರ ಈಗಾಗಲೆ 45 ನಗರಗಳಲ್ಲಿ ಇಂತಹ "ಆತ್ಮರಕ್ಷಣಾ" ಶಿಬಿರಗಳನ್ನು ನಡೆಸಲಾಗಿದೆ! ಇದರ ಉದ್ದೇಶ ಸ್ಪಷ್ಟವಿದೆ: ಹಿಂದೂ-ಮುಸ್ಲಿಂ, ಹಿಂದೂ-ಕ್ರೈಸ್ತ ಧ್ರುವೀಕರಣವನ್ನು ತೀವ್ರಗೊಳಿಸುವ ಮುಖಾಂತರ ಹಿಂದೂ ಮತಗಳ ಕ್ರೋಢೀಕರಣ. ಕಳೆದ ಲೋಕಸಭಾ ಚುನಾವಣೆಗಳಿಗೆ ಮುಂಚಿತವಾಗಿ ಮುಜಾಫರ್‌ನಗರದಲ್ಲಿ ದೊಡ್ಡದೊಂದು ಕೋಮುಗಲಭೆ ಸೃಷ್ಟಿಸಲಾದುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.



ದಲಿತ ಮತಗಳಿಗಾಗಿ ನೂತನ ಕಾರ್ಯತಂತ್ರಗಳು

2014ರ ಲೋಕಸಭಾ ಚುನಾವಣೆಗಳಲ್ಲಿ ಉತ್ತರಪ್ರದೇಶದ ಎಲ್ಲಾ 17 ಮೀಸಲು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಬಿಜೆಪಿ ಈ ಸಲ ತನ್ನ ಗಮನವನ್ನೆಲ್ಲ ರಾಜ್ಯದ ದಲಿತ ಸಮುದಾಯದ ಮೇಲೆ ಕೇಂದ್ರೀಕರಿಸಿದೆ. ರಾಜ್ಯದ ಜನಸಂಖ್ಯೆಯ ಶೇಕಡಾ 21ರಷ್ಟಿರುವ ದಲಿತ ಮತಗಳನ್ನು ಸೆಳೆದುಕೊಳ್ಳುವುದಕ್ಕಾಗಿ ವಿವಿಧ ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ಇದೀಗ ಜೂನ್ 4ರಂದು "ಮೋದಿ ಸರ್ಕಾರದಿಂದ ದಲಿತರಿಗೆ ಆಗಿರುವ ಲಾಭ"ಗಳ ಕುರಿತು ಚರ್ಚಿಸುವುದಕ್ಕೋಸ್ಕರ ಒಂದು "ಸಾಮರಸ್ಯಾ ಮಹಾಸಮ್ಮೇಳನ" ನಡೆಸಲು ಎಲ್ಲಾ ತಯಾರಿ ನಡೆಯುತ್ತಿದೆ. ಸಂಸ್ಕೃತ ಘೋಷಣೆಗಳಲ್ಲಿ ಪಾರಂಗತರಾಗಿರುವ ಸಂಘ ಪರಿವಾರಿಗರು ಈಗ ಸಮ್ಮೇಳನಕ್ಕೆ ಆಹ್ವಾನಿಸಲಾಗುತ್ತಿರುವ ದಲಿತರನ್ನು ಸಂಬೋಧಿಸಲೆಂದೇ "ಪ್ರಬುದ್ಧ" ಮತ್ತು "ಪ್ರಭಾವಶಾಲಿ" ಎನ್ನುವ ಎರಡು ಹೊಸಾ ಗುಣವಾಚಕಗಳನ್ನು ಹುಟ್ಟುಹಾಕಿದ್ದಾರೆ! ಇನ್ನೊಂದೆಡೆ ಸ್ವಾರ್ಥಕ್ಕೋಸ್ಕರ ತಮ್ಮವರ ಬೆನ್ನಿಗೇ ಇರಿಯುವ ಬ್ರೂಟಸ್, ಮೀರ್ ಸಾದಿಕ್‌ಗಳಂಥವರನ್ನು ಬಳಸಿಕೊಳ್ಳುವ ವಿಶಿಷ್ಟ ಕಾರ್ಯತಂತ್ರವನ್ನು ಜಾರಿಗೊಳಿಸಲಾಗಿದೆ. ಅರುಣಾಚಲ ಪ್ರದೇಶ, ಉತ್ತರಾಖಂಡ, ಅಸ್ಸಾಂ, ಕೇರಳಗಳಲ್ಲಿ ಮಾಡಿದಂತೆ. ಇದರ ಭಾಗವಾಗಿ ಕೆಲವು ತಿಂಗಳುಗಳ ಕೆಳಗೆ ಉತ್ತರಪ್ರದೇಶದ ಭಂತೆ ಧಮ್ಮ ವಿರಿಯೊ ಎಂಬ 77ರ ಹರೆಯದ ಬೌದ್ಧ ಭಿಕ್ಕುವೊಬ್ಬನನ್ನು ಪರಿವಾರದ ಮಡಿಲಿಗೆ ಸೇರಿಸಿಕೊಳ್ಳಲಾಗಿದೆ. ಈ ಹೊಸಾ ಮೋದಿಭಕ್ತ ಭಿಕ್ಕು ತರುವಾಯ ಸೀದಾ ದಿಲ್ಲಿಗೆ ಹೋಗಿ ಗುರುವನ್ನು ಭೇಟಿ ಮಾಡಿದ್ದಾನೆ. ಅಲ್ಲಿ ಮೋದಿ ಆತನಿಗೆ ಬೌದ್ಧ ಧರ್ಮ ಮತ್ತು ಡಾ. ಅಂಬೇಡ್ಕರ್ ಕುರಿತ ತನ್ನ ಸಂದೇಶವನ್ನು ಉತ್ತರಪ್ರದೇಶದ ದಲಿತರಿಗೆ ತಲುಪಿಸುವ ಕಾರ್ಯವನ್ನು ವಹಿಸಿದ್ದಾನೆ. ಇದರ ಮೇಲ್ವಿಚಾರಣೆಯ ನೇರ ಜವಾಬ್ದಾರಿಯನ್ನು ಪ್ರಧಾನಿ ಕಾರ್ಯಾಲಯದ ಕೈಗೊಪ್ಪಿಸಲಾಗಿದೆ ಎಂದರೆ ಅದಕ್ಕೆಷ್ಟು ಪ್ರಾಮುಖ್ಯತೆ ನೀಡಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ತದನಂತರದ ಬೆಳವಣಿಗೆಯಲ್ಲಿ ಒಂದಷ್ಟು ಸಮಾನಮನಸ್ಕ ಬೌದ್ಧ ಧರ್ಮೀಯರನ್ನು ಕಲೆಹಾಕಿಕೊಂಡ ಧಮ್ಮ ವಿರಿಯೊ ಇದೇ ಏಪ್ರಿಲ್ 24ರಂದು ಸಾರನಾಥದಿಂದ "ಧಮ್ಮ ಚೇತನ ಯಾತ್ರೆ"ಯೊಂದನ್ನು ಪ್ರಾರಂಭಿಸಿದ್ದಾನೆ. ವಿರಿಯೊ ನೇತೃತ್ವದಲ್ಲಿರುವ ಈ "ಧಮ್ಮ ಚೇತನ ಯಾತ್ರೆ" ಮುಂದಿನ ಆರು ತಿಂಗಳುಗಳ ಕಾಲ ರಾಜ್ಯಾದ್ಯಂತ ದಲಿತ ಕೇರಿಗಳು ಮತ್ತು ಬೌದ್ಧ ಕ್ಷೇತ್ರಗಳಲ್ಲಿ ಸಂಚರಿಸಿ ಅಲ್ಲಿನ ನಿವಾಸಿಗಳಿಗೆಲ್ಲ ಮೋದಿಯ ಸಂದೇಶವನ್ನು ಬಿತ್ತರಿಸುವ ಯೋಜನೆಯನ್ನು ಹಾಕಿಕೊಂಡಿದೆ. ಇದರ ಉದ್ಘಾಟನಾ ಸಮಾರಂಭಕ್ಕೆ ಕೇಂದ್ರ ಗೃಹಸಚಿವ ರಾಜನಾಥ್ ಸಿಂಗ್ ಖುದ್ದಾಗಿ ಆಗಮಿಸಿರುವುದು ಮೋದಿ ಸರ್ಕಾರದ ವಿಶೇಷ ಆಸಕ್ತಿಯನ್ನು ಎತ್ತಿ ತೋರಿಸುತ್ತದೆ. ಇದು ಕೇವಲ ಧಾರ್ಮಿಕ ವಿಚಾರಕ್ಕೆ ಸೀಮಿತವಾಗಿರುವ ಯಾತ್ರೆ ಎಂದು ಪ್ರಚಾರ ಮಾಡಲಾಗುತ್ತಿದೆಯಾದರೂ ಅದರ ನೈಜ ಉದ್ದೇಶ ದಲಿತ ಮತದಾರರನ್ನು ಬಿಜೆಪಿ ಕಡೆಗೆ ಸೆಳೆಯುವುದೇ ಆಗಿದೆ. ಒಂದಾನೊಂದು ಕಾಲದಲ್ಲಿ ಬೌದ್ಧ ಧರ್ಮವನ್ನು ಭಾರತದಿಂದ ಒದ್ದೋಡಿಸಿದಂಥವರ ಪರಂಪರೆಗೆ ಸೇರಿದ ಹಿಂದೂತ್ವವಾದಿಗಳಿಗೆ ಇಂದು ಅದರ ಮೇಲೆ ಇದ್ದಕ್ಕಿದ್ದಂತೆ ಇಷ್ಟೊಂದು ಪ್ರೀತಿ ಉಕ್ಕಲು ಬೇರೆ ಯಾವ ಕಾರಣವೂ ಇಲ್ಲ.

ಆದರೆ ಸದರಿ ಮೋದಿ-ಪ್ರೇರಿತ ರಾಜಕೀಯ "ಧಮ್ಮ ಚೇತನ ಯಾತ್ರೆ"ಗೆ ರಾಜ್ಯದ ಇತರ ಬೌದ್ಧ ಧರ್ಮೀಯರಿಂದ ನಿರೀಕ್ಷಿಸಿದಷ್ಟು ಬೆಂಬಲ ಕಂಡುಬಂದಿಲ್ಲ. ವಾಸ್ತವದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಬೌದ್ಧ ಭಿಕ್ಕುಗಳಂತೂ ಧಮ್ಮ ವಿರಿಯೊ ಬಿಜೆಪಿ ಪರವಾಗಿ ಮತಯಾಚನೆಗೆ ಹೊರಟಿರುವ ವಿಷಯ ಕೇಳಿ ಕಿಡಿಕಿಡಿಯಾಗಿದ್ದಾರೆ. ಅತ್ಯಂತ ಹಳೆಯ ಬೌದ್ಧ ಸಂಘಟನೆಗಳಲ್ಲೊಂದಾದ ಅಖಿಲ ಭಾರತ ಭಿಕ್ಕು ಸಂಘದ ಪ್ರಧಾನ ಕಾರ್ಯದರ್ಶಿಯಾದ ಭಂತೆ ಪ್ರಗ್ಯಾದೀಪ್ "ಯಾತ್ರೆ"ಯನ್ನು ಖಂಡಿಸುತ್ತಾ "ದಮನಿತ ವರ್ಗಗಳ ಜನ ಬೌದ್ಧಧರ್ಮದ ಬಗ್ಗೆ ತುಂಬಾ ಗೌರವ ಇಟ್ಟುಕೊಂಡಿದ್ದಾರೆ. "ಯಾತ್ರೆ"ಯ ಆಯೋಜಕರು ದಲಿತ ಮತಗಳು ಮೋದಿಗೆ ಬೀಳುವಂತೆ ಮಾಡುವಲ್ಲಿ ಸಫಲರಾಗುತ್ತಾರೊ ಇಲ್ಲವೊ ತಿಳಿಯದು. ಆದರೆ "ಯಾತ್ರೆ" ಕೊನೆಗೊಳ್ಳುವ ಹೊತ್ತಿಗೆ ಬೌದ್ಧ ಧರ್ಮದ ಹೆಸರು ಹಾಳಾಗಲಿರುವುದಂತೂ ಖಚಿತ" ಎಂದಿದ್ದಾರೆ. ಗಯಾ, ಸಾರನಾಥ, ಕುಶಿನಗರ ಮೊದಲಾದ ಕ್ಷೇತ್ರಗಳ ಪ್ರಮುಖ ಬೌದ್ಧ ಭಿಕ್ಕುಗಳು ಧಮ್ಮ ವಿರಿಯೊನನ್ನು ಓರ್ವ "ಬಹಿಷ್ಕೃತ" ಬೌದ್ಧ ಸನ್ಯಾಸಿಯೆಂದು ಕರೆದಿದ್ದಾರೆ. ಆತನ ಈ "ಯಾತ್ರೆ"ಯನ್ನು "ಬ್ರಾಹ್ಮಣ್ಯದ ಪಿತೂರಿ" ಎಂದು ಬಣ್ಣಿಸಿರುವ ಅವರು ಅದರ ಉದ್ದೇಶ ಬೌದ್ಧ ಧರ್ಮವನ್ನು ಅದರ ಹುಟ್ಟೂರಿನಲ್ಲೆ ಅವಮಾನಿಸುವುದಾಗಿದೆ ಎಂದು ಟೀಕಿಸಿದ್ದಾರೆ. "ವಿರಿಯೊ ಮೋದಿಯನ್ನು ಭೇಟಿಯಾದ ಬಳಿಕ ಮೋದಿ ಆತನನ್ನು ದಾಳವಾಗಿ ಬಳಸಿಕೊಳ್ಳುತ್ತಿದ್ದಾನೆ. ಆತನ ಈ ಕೃತ್ಯದಿಂದ ಧರ್ಮಕ್ಕೆ ಕೆಟ್ಟ ಹೆಸರು ಬರಲಿದೆ" ಎಂದು ಪ್ರತಿಕ್ರಿಯಿಸಿದ್ದಾರೆ ಬೋಧಗಯಾದ ಸುಪ್ರಸಿದ್ಧ ಭಿಕ್ಕು ಭಂತೆ ಪ್ರಿಯಪಾಲ.

ಸಾರನಾಥದ ಹಿರಿಯ ಭಿಕ್ಕುವೂ ಲಕ್ನೋದ ಅಂತಾರಾಷ್ಟ್ರೀಯ ಬೌದ್ಧ ಧರ್ಮ ಸಂಶೋಧನಾ ಕೇಂದ್ರದ ಅಧ್ಯಕ್ಷರೂ ಆಗಿರುವ ಭಂತೆ ಚಂದ್ರಿಮರು ಹೇಳುವಂತೆ "ವಿರಿಯೊ ಬೌದ್ಧ ಧರ್ಮವನ್ನು ನಾಶಗೊಳಿಸಲು ಯತ್ನಿಸುತ್ತಿರುವ ಬಹಿಷ್ಕೃತ ವ್ಯಕ್ತಿ... ಆತ ಶತಮಾನಗಳಿಂದಲೂ ಬೌದ್ಧ ಧರ್ಮದ ವಿರುದ್ಧ ಕಾರ್ಯಾಚರಿಸುತ್ತಿರುವ ಬ್ರಾಹ್ಮಣ್ಯದ ವಿಶಾಲ ಪಿತೂರಿಯ ಭಾಗ ಆಗಿಬಿಟ್ಟಿದ್ದಾನೆ.... ಈ ಹೊತ್ತು ಮತ್ತೊಮ್ಮೆ ಬೌದ್ಧ ಧರ್ಮದ ವಿನಾಶಕ್ಕೆ ಪ್ರಯತ್ನಿಸಲಾಗುತ್ತಿದೆ." ವಿರಿಯೊನನ್ನು ಅತ್ಯಾಚಾರ ಆರೋಪಿ ಸ್ವಾಮಿ ಆಸಾರಾಂ ಬಾಪುಗೆ ಹೋಲಿಸುವ ಚಂದ್ರಿಮ "ಬೌದ್ಧ ಧರ್ಮದ ಬಟ್ಟೆ ತೊಟ್ಟುಕೊಂಡು ಓಡಾಡುತ್ತಿರುವ ಈತ ನಮ್ಮ ನಡುವಿನ ಆಸಾರಾಂ ಬಾಪು. ಈತನ ಮೇಲೆ ಯಾರಿಗೂ ನಂಬಿಕೆ ಇಲ್ಲ" ಎನ್ನುತ್ತಾರೆ.



ಕುಶಿನಗರದ ಹಿರಿಯ ಭಿಕ್ಕು ಭಂತೆ ನಂದ ರತನ್ ಪ್ರಕಾರ ಈ "ಯಾತ್ರಾ ಆಂದೋಲನ" ವಿರಿಯೊ ಬದುಕಿನಲ್ಲಿ ಆಧ್ಯಾತ್ಮಿಕತೆ ಕಡಿಮೆಯಾಗಿರುವುದನ್ನು ತೋರಿಸುತ್ತದೆ. ಬೌದ್ಧ ಧರ್ಮವನ್ನು ರಾಜಕೀಯ ಸಾಧನವಾಗಿ ಬಳಸಲಾಗದೆಂದು ಅವರು ಹೇಳುತ್ತಾರೆ.

ಹಿನ್ನೆಲೆ

ಈ ಧಮ್ಮ ವಿರಿಯೊ ಎಂಬ ಬೌದ್ಧ ಭಿಕ್ಕುವಿನ ಚರಿತ್ರೆಯನ್ನು ಒಂದಿಷ್ಟು ಕೆದಕಿದಾಗ ಕೆಲವು ಸ್ವಾರಸ್ಯಕರ ಮಾಹಿತಿಗಳು ಹೊರಬೀಳುತ್ತವೆ. ಹಿಂದೂತ್ವವಾದಿ ಕಾವಿಧಾರಿಗಳ ಚರಿತ್ರೆಯ ಹಾಗೆ. 70ರ ದಶಕದ ಅಂತ್ಯ ಮತ್ತು 80ರ ದಶಕದ ಆರಂಭದ ನಡುವಿನ ಅವಧಿಯಲ್ಲಿ ಈತ ಒಂದು ಅನಾಥಾಶ್ರಮ ನಡೆಸುತ್ತಿದ್ದ. ಆ ಸಂದರ್ಭದಲ್ಲಿ ಸರಕಾರಿ ಅನುದಾನವನ್ನು ತನ್ನ ಕಿಸೆಗೆ ಇಳಿಬಿಟ್ಟಿದ್ದ ಈತನ ವಿರುದ್ಧ ಡಾರ್ಜಿಲಿಂಗ್ ಪೊಲೀಸರು ಐಪಿಸಿ 409ರಡಿ ಪ್ರಕರಣ ದಾಖಲಿಸಿದ್ದರು. ಕೊನೆಯಲ್ಲಿ ಸುಮಾರು ಒಂದು ತಿಂಗಳ ಕಾಲ ಜೈಲುಶಿಕ್ಷೆ ಅನುಭವಿಸಿದ ಬಳಿಕವೆ ವಿರಿಯೊ ಬಿಡುಗಡೆಯಾಗಿದ್ದ.


ಕೆಲಕಾಲ ರಾಷ್ಟ್ರೀಯ ಜನತಾ ದಳದ ಸದಸ್ಯನಾಗಿದ್ದ ಈತ 2000ನೆ ಇಸವಿಯಲ್ಲಿ ರಾಜ್ಯಸಭೆಗೆ ಚುನಾಯಿತನಾಗಿ ಅಲ್ಲಿ ಸುಮಾರು 9 ತಿಂಗಳ ಕಾಲ ಕಾರ್ಯನಿರ್ವಹಿಸಿದ್ದ. ಆದರೆ ಬಂಡಾಯಗಾರ ಗುಂಪಿನೊಂದಿಗೆ ಸೇರಿಕೊಂಡಾಗ ಆತನನ್ನು ಪಕ್ಷದಿಂದ ಉಚ್ಚಾಟಿಸಲಾಗಿತ್ತು. 2004ರಲ್ಲಿ ಭಿಕ್ಕು ಸಂಘದ ಪ್ರಧಾನ ಕಾರ್ಯದರ್ಶಿಯಾದ ಬಳಿಕ ಸುಮಾರು ಒಂದು ದಶಕದ ಕಾಲ ಅದೇ ಹುದ್ದೆಯ... ಮುಂದುವರಿದಿದ್ದ. 2011ರಲ್ಲಿ ಕೇಂದ್ರ ಸಂಸ್ಕೃತಿ ಸಚಿವಾ... ಆತನ ವಿರುದ್ಧ ದೊಡ್ಡ ಆರೋಪವೊಂದನ್ನು ಮಾಡಿ... ಆತ ಅನುದಾನದ ದುರ್ಬಳಕೆ ಮಾಡಿದ್ದಾನೆ ... ಸರಿಯಾದ ಲೆಕ್ಕಪತ್ರಗಳನ್ನು ಇಟ್ಟಿಲ್ಲ ಎಂ... ಆರೋಪಿಸಲಾಗಿತ್ತು. ಭಿಕ್ಕು ಸಂಘದ ಪ್ರಸಕ್ತ ಕಾರ್ಯದ... ಪ್ರಗ್ಯದೀಪ್ ಪ್ರಕಾರ ವಿರಿಯೊ ವಿರುದ್ಧದ ಆರೋಪ... ಎಷ್ಟೊಂದು ಗಂಭೀರವಾಗಿದ್ದವೆಂದರೆ ಆತ ಬೌದ್ಧ ಭಿಕ್ಕು... ನಾಯಕನಾಗಿ ಮುಂದುವರಿಯಲು ಸಾಧ್ಯವೇ ಇರ... ಕೊನೆಗೆ 2013ರಲ್ಲಿ ಆತನನ್ನು ಅಕ್ಷರಶಃ ಬಲವಂತ... ಹುದ್ದೆಯಿಂದ ಕೆಳಗಿಳಿಸಬೇಕಾಯಿತು ಎಂಬ ಸತ್ಯಾಂಶ... ಪ್ರಗ್ಯದೀಪ್ ಬಿಚ್ಚಿಟ್ಟಿದ್ದಾರೆ.

ಪ್ರತಿಭಟನೆ, ಪೇಲವ ಪ್ರತಿಕ್ರಿಯೆ

"ಧಮ್ಮ ಚೇತನ ಯಾತ್ರೆ" ಈಗಾಗಲೆ ರಾ... ಪೂರ್ವಭಾಗದ ಹಲವಾರು ಜಿಲ್ಲೆಗಳನ್ನು ಕ್ರಮಿ... ಯಾತ್ರೆಯ ಪ್ರಧಾನ ಸಂವಹನಕಾರ ಆರ್.ಕೆ.ಆನಂದ್ ಪ್ರ... "ಯಾತ್ರೆಯ ಪ್ರಥಮ ಹಂತ ಜೂನ್ 5ಕ್ಕೆ ಕೊನೆಗೊಳ್ಳ... ಜೂನ್ 11ರಿಂದ ಆಗಸ್ಟ್ 14ರ ತನಕ ನಡೆಯಲಿ... ದ್ವಿತೀಯ ಹಂತ ಪಶ್ಚಿಮ ಭಾಗದ ಬಹುತೇಕ ಜಿಲ್ಲೆ... ಮೂಲಕ ಹಾದುಹೋಗಲಿದೆ. ಮೂರನೆ ಹಾಗೂ ಅಂ... ಹಂತ ಆಗಸ್ಟ್ 19ರಂದು ಶುರುವಾಗಲಿದೆ. ... ಬುಂದೇಲಖಂಡ ಮತ್ತು ರಾಜ್ಯದ ಮಧ್ಯಭಾಗಗಳ ಮೂ... ಸಂಚರಿಸಿ ಅಕ್ಟೋಬರ್ 14ರಂದು ಲಕ್ನೋ... ಅಂತ್ಯವಾಗಲಿದೆ. ಅಂದು ಪ್ರಧಾನಿ ನರೇಂದ್ರ ಮೋ... ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾನೆ." ಅಂದ... ಅಕ್ಟೋಬರ್ 14 ಡಾ. ಅಂಬೇಡ್ಕರ್ ಬೌದ್ಧ ಧರ್ಮ... ಮತಾಂತರಗೊಂಡ ದಿನವಾಗಿದೆ.

ಆದರೆ "ಧಮ್ಮ ಚೇತನ ಯಾತ್ರೆ"ಗೆ ನಿರೀಕ್ಷಿಸಿದ... ಯಶಸ್ಸು ಇದುವರೆಗೂ ದೊರೆತಿಲ್ಲ. ವಾಸ್ತವವಾಗಿ ಕೆಲ... ಋಣಾತ್ಮಕ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದರೆ ಮಿಕ್ಕ ಜಾಗ... ಪೇಲವ ಪ್ರತಿಕ್ರಿಯೆ ಕಂಡುಬಂದಿದೆ. ಯ... ಪ್ರಾರಂಭವಾಗುವುದಕ್ಕೂ ಮುನ್ನ ಭಿಕ್ಕುಗಳನ್ನು ಅದರೊ... ಸೇರಿಸುವ ಉದ್ದೇಶದಿಂದ ಮಾರ್ಚ್ 27ರಂ... ಬೋಧಗಯಾದಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ... ಭಾರಿ ಗದ್ದಲವೆದ್ದಾಗ ಸಭೆಯನ್ನು ಅರ್ಧದಲ್ಲೆ ಮ... ಹೊರಟುಹೋಗಿದ್ದ ವಿರಿಯೊ. ಮುಂದೆ ಏಪ್ರಿಲ್ 24ರ... "ಯಾತ್ರೆ"ಗೆ ವಿದ್ಯುಕ್ತ ಚಾಲನೆ ನೀಡಲಾಗಿದೆ. ಆದರೆ ಅಜಂ... ಜೌನ್‌ಪುರ, ಸೋನ್‌ಭದ್ರಾಗಳಲ್ಲಿ ಸ್ಥಳೀಯರು "ಯಾತ್ರೆ" ವಿ... ಪ್ರತಿಭಟನೆ ನಡೆಸಿ "ಯಾತ್ರಾರ್ಥಿ"ಗಳನ್ನೆಲ್ಲ ಅಲ್ಲಿಂದ ಓಡಿಸಿದ... ಮೊನ್ನೆ ಮೇ 22ರಂದು ಕುಶಿನಗರದಲ್ಲಿ ನಡೆದ ಕಾರ್ಯಕ್ರಮ... ಸ್ಥಳೀಯ ಭಿಕ್ಕುಗಳೆಲ್ಲರೂ ಬಹಿಷ್ಕರಿಸಿದ್ದರು. ಈಗ ಬ... ಭಿಕ್ಕುಗಳೆಲ್ಲರೂ ಒಂದಾಗಿ ಈ ರಾಜಕೀಯ ದುರುದ್ದೇ... "ಯಾತ್ರೆ"ಯ ವಿರುದ್ಧ ರಾಜ್ಯಾದ್ಯಂತ ದೊಡ್ಡ ಹೋರಾಟವೊಂ... ಸನ್ನದ್ಧರಾಗುತ್ತಿದ್ದಾರೆ. ಪ್ರಶ್ನೆ ಏನೆಂದರೆ ರಾಜ್ಯದ ದಲಿತರು, ದ... ಸಂಘಟನೆಗಳು ಈ "ಸಮ್ಮೇಳನ", "ಯಾತ್ರೆ" ಮುಂತಾ... ಚುನಾವಣಾ ಗಿಮಿಕ್ಕುಗಳಿಗೆ ಬಲಿಯಾಗುವರೇ? ಬಿಜೆ... ಇದ್ದಕ್ಕಿದ್ದಂತೆ ಅಂಬೇಡ್ಕರ್ ಮತ್ತು ಬೌದ್ಧ ಧರ್ಮ... ಮೇಲೆ ಎಲ್ಲಿಲ್ಲದ ಪ್ರೀತಿ ಉಕ್ಕುತ್ತಿರುವುದರ ಹಿಂ... ಅಸಲಿಯತ್ತನ್ನು ತಿಳಿದುಕೊಳ್ಳುವರೇ? ಅವರ ಹುಸಿ ಒಲ... ನೈಜ ಉದ್ದೇಶ ಕೇವಲ ಮತಗಳನ್ನು ಬಾಚುವುದಾ... ಎಂಬ ವಾಸ್ತವಾಂಶವನ್ನು ಗ್ರಹಿಸುವರೇ? ಸ... ಪರಿವಾರದಿಂದ ತಮಗೆ ಎದುರಾಗಿರುವ ಅಪಾಯ... ಮಟ್ಟವನ್ನು ಅರಿತುಕೊಳ್ಳುವರೇ? ಉದ್ದೇಶಿತ ಹಿಂದ... ರಾಷ್ಟ್ರದಲ್ಲಿ ತಮ್ಮ ಸ್ಥಾನ ಅದೇ ಎರಡನೆ, ಮೂರನೆ ದರ್ಜೆ... ಪ್ರಜೆಗಳದಾಗಿರುತ್ತದೆ ಎಂಬ ಸತ್ಯವನ್ನು ಮನಗಾಣುವರ... ದಲಿತ ಏಳಿಗೆ ಸಹಿಸಲಾರದೆ ರೋಹಿತ್ ವೇಮುಲನ... ಉಜ್ವಲ ಪ್ರತಿಭೆಗಳನ್ನು ಆತ್ಮಹತ್ಯೆಯತ್ತ ದೂಡುತ್ತಿರು... ಆರೆಸ್ಸೆಸ್ ಷಡ್ಯಂತ್ರವನ್ನು ಅರ್ಥ ಮಾಡಿಕೊಂಡು ಅದ... ಮೆಟ್ಟಿನಿಲ್ಲುವರೇ?

(ಆಧಾರ: 27.5.2016ರ Scroll.in ...
ಧೀರೇಂದ್ರ ಜಾ ಲೇ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗರುಡ ಪುರಾಣ





ವಿಷ್ಣು ತನ್ನ ವಾಹನವಾದ ಗರುಡನಿಗೆ ನೀಡುವ ಪದೇಶದ ರೂಪದಲ್ಲಿರುವ ಗರುಡ ಪುರಾಣ ನಾನಾ ರಣಗಳಿಂದ ಆಕರ್ಷಕ. ಸಾಮಾನ್ಯ ಜನರಿಗೆ ತಿಳಿದಿರುವ ಗೆ ಅದು ನರಕದ ವರ್ಣನೆ, ಸಾವಿನ ಕುರಿತಾದದ್ದು ಬ ಭಾವ. ಅದು ನಿಜವಾದರೂ ಅದರ ವಿಚಾರವೇ ದೀ ಗರುಡ ಪುರಾಣವೇನಲ್ಲ. ಪ್ರೇತಕಾಂಡ ಅಥವಾ ತಕಲ್ಪವು ಅದರ ಒಂದು ಭಾಗ ಅಷ್ಟೇ. ಎಲ್ಲಾ ರಾಣಗಳನ್ನೂ ಅನಾದಿ, ಪುರಾತನ ಎಂದು ಹೇಗೆ ಯಲು ಸಾಧ್ಯವಿಲ್ಲವೋ ಹಾಗೆಯೇ ಗರುಡ ಪುರಾಣವೂ ರ್ಣ ಪುರಾತನವೇನಲ್ಲ. ಕಾಲದಿಂದ ಕಾಲಕ್ಕೆ ಹಲವಾರು ರ್ಗಗಳು ಇದರಲ್ಲಿ ಲೇಖನಿಗಳನ್ನಾಡಿಸುತ್ತಾ ಕೃತಿಯನ್ನು ಷ್ಟರಿಸಿದ್ದಾರೆ. ಹಾಗಾಗಿ ಇಡೀ ಗರುಡ ಪುರಾಣ ಏನನ್ನು ನಿಸಲು ಹೊರಟಿತ್ತು, ಈಗ ಅದರಲ್ಲಿ ಏನೇನೆಲ್ಲಾ ಇದೆ ದು ಚುಟುಕಾಗಿ ಹೇಳಲು ಕಷ್ಟವಾಗುವುದು.

ಗರುಡ ಪುರಾಣವೆಂಬ ಸೂಕ್ಷ್ಮ ಪ್ರಾಣದ ಪುರಾಣ ನವನ್ನು ತಿಳಿದುಕೊಳ್ಳುವ ಮುನ್ನ ಗರುಡನ ಪುರಾಣವನ್ನು ಳಿದುಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ.

ಗರುಡ ಯಾರು?

ಗರುಡನೊಬ್ಬ ಅಪ್ರತಿಮ ವೀರ. ದಾಸ್ಯದ ವಿರುದ್ಧ ಎತ್ತಿದ ಬಂಡಾಯಗಾರ. ಹಾಗೂ ಆರ್ಯರ ಟಿಲತನಕ್ಕೆ ಮೋಸ ಹೋದ ಮತ್ತು ಸೋತ ದುರಂತ ತಿಮೆ ಕೂಡಾ. ನಾಗ ಮತ್ತು ಗರುಡ ಈ ಎರಡೂ ಣಗಳು ಅಥವಾ ಕುಲಗಳೂ ಒಂದೇ ಮೂಲದಿಂದ ಂದಿರುವವಾದರೂ ತಮ್ಮ ಆಂತರಿಕ ಕಲಹದಿಂದ ಅಥವಾ ಯಾದೀ ಜಗಳದಿಂದ ಆರ್ಯರ ರಾಜಕೀಯ ತಂತ್ರಕ್ಕೆ ಲಿಪಶುಗಳಾದರು. ನಾಗಕುಲವಾದರೂ ದೇವತೆಗಳ ವಿರುದ್ಧ ಸೆಸುತ್ತಲೇ ಬಂತು. ಆದರೆ ಗರುಡ ದೇವತೆಗಳ ತಂತ್ರಕ್ಕೆ ಲಿಯಾಗಿ ತಮ್ಮದೇ ಮೂಲದ ಗಣದವರಿಗೆ ತ್ರುಗಳಾದರು. ಗರುಡ ವಿಷ್ಣುವಿನ ವಾಹನವೆಂದರೆ, ಆರ್ಯರ ಪಕವಾದ ವಿಷ್ಣುವು ಗರುಡ ಬುಡಕಟ್ಟಿನವರನ್ನು ತಮ್ಮ ಧೀನದಲ್ಲಿಟ್ಟುಕೊಂಡು ನಂತರ ವಿರೋಧಿಗಳಾದ ನಾಗರ ೀಲೆ ತನ್ನ ವೈಷಮ್ಯವನ್ನು ಸಾಧಿಸುವುದು.

ಕುತಂತ್ರಿ ಆರ್ಯ ರಾಜಕೀಯ ಹುಟ್ಟಿಹಾಕಿದ ಮೌಢ್ಯಕ್ಕೆ ಮ್ಮ ಜನ ಇಂದೂ ಸಹೋದರರಾದ ನಾಗ ಮತ್ತು ಡರನ್ನು ಶತ್ರುಗಳಂತೆ ನೋಡುತ್ತಿದ್ದಾರೆ. ಜೊತೆಗೆ ಗರುಡ ಚ್ಚೆ ಇದ್ದರೆ ಹಾವುಗಳು ಬಾಧಿಸವು, ಸರ್ಪದೋಷ ರದು ಎಂಬ ಮೌಢ್ಯಗಳು ಬೇರೆ. ಗರುಡನಂತ ಮುಗ್ಧ ತ್ತು ವೀರನನ್ನು ತಮ್ಮ ಕಾವಲು ಭಟನಂತೆ ಅಥವಾ ರಥಿಯಂತೆ ವಾಹಕವನ್ನಾಗಿ ಮಾಡಿಕೊಂಡ ಕುಟಿಲತೆಯನ್ನು ರಾಣದ ವಿಶ್ಲೇಷಣೆಗಳು ತಿಳಿಸುತ್ತವೆ. ತನ್ನದೇ ಆದ ಗಕುಲವನ್ನು ನಾಶ ಮಾಡಲು ಹೊರಟ ಗರುಡನ ಂದೆ ಇಂದ್ರನ ಕುಟಿಲೋಪಾಯವಿದೆ. ಇದನ್ನು ತಿಳಿಯುವ ನ್ನ ಪುರಾಣದಲ್ಲಿ ಗರುಡನ ಕಥೆ ಏನೆಂದು ತಿಳಿಯಬೇಕು.

ಒಂದೇ ಬಳ್ಳಿಯ ಹೂಗಳು

ವಿನತೆ ದಕ್ಷನ ಮಗಳು. ಕಶ್ಯಪನ ಹೆಂಡತಿ. ಕದ್ರು ನತೆಯ ಸೋದರಿ. ವಿನತೆಗೆ ಇಬ್ಬರು ಮಕ್ಕಳು ಅರುಣ ತ್ತು ಗರುಡ. ಅರುಣ ಸೂರ್ಯನ ಸಾರಥಿ. ಕದ್ರುವೂ ಶ್ಯಪನ ಹದಿಮೂರು ಮಂದಿ ಪತ್ನಿಯರಲ್ಲಿ ಒಬ್ಬಳು. ರ್ಪಗಳ ತಾಯಿ. ಈಕೆಗೆ ಶೇಷ, ವಾಸುಕಿ, ಧನಂಜಯ, ರ್ಕೋಟಕ ಮೊದಲಾದ ಮಕ್ಕಳೂ, ಜರತ್ಕಾರವೆಂಬ ಗಳೂ ಇದ್ದಳು.

ಕದ್ರುವಿನ ಮೋಸ

ಒಮ್ಮೆ ವಿನತೆ ಮತ್ತು ಕದ್ರು ಸಮುದ್ರದ ದಡದಲ್ಲಿ ಡ್ಡಾಡುತ್ತಿದ್ದಾಗ ಮೇಯುತ್ತಿದ್ದ ಉಚ್ಚೈಶ್ರವಸ್ಸೆಂಬ ವಲೋಕದ ಕುದುರೆಯನ್ನು ನೋಡಿದರು. ಅದರ ಗ್ಗೆಯೇ ಇಬ್ಬರೂ ಮಾತಾಡಿಕೊಂಡು ಬರುವಾಗ ವಿನತೆ ದು ಪೂರ್ಣ ಬಿಳಿಯದೆಂದು ಹೇಳಿದಳು. ಆದರೆ ಅದರ ೀಲೆ ಕಪ್ಪು ರೋಮಗಳ ರೇಖೆ ಉಂಟೆಂದು (ಕೆಲವು ತ್ರಗಳಲ್ಲಿ ಬಾಲ ಕಪ್ಪೆಂದು) ವಾದವನ್ನು ಹೂಡಿದಳು ದ್ರು. ಮತ್ತೆ ಪರಿಶೀಲಿಸಲು ಹಿಂದಕ್ಕೆ ಹೋಗದೇ ಮರುದಿನ ಂದಾಗ ನೋಡೋಣವೆಂದು ಸುಮ್ಮನಾದರು. ಯಾರು ವಿಷಯದಲ್ಲಿ ಗೆಲ್ಲುವರೋ ಅವರ ದಾಸರಾಗಿ ೀತವರಿರಬೇಕೆಂದು ಪಂಥ ಕಟ್ಟಿಕೊಂಡರು. ಕದ್ರುವು ಂದು ನೋಡಲು ವಿನತೆಯ ಮಾತೇ ನಿಜವಾಗಿರುವುದನ್ನು ಣಗಂಡು, ತನ್ನ ಸರ್ಪ ಪುತ್ರರನ್ನು ಬಾಲಕ್ಕೆ ಬಳಸಿಕೊಂಡು ೂರದಿಂದ ಕಪ್ಪು ಇರುವಂತೆ ಕಾಣುವ ವ್ಯವಸ್ಥೆ ಾಡಿಕೊಂಡಳು. ಅದೇರೀತಿ ನಡೆದು ಕದ್ರು ತಾನು ದ್ದಾಗಿದ್ದಂತೂ, ವಿನತೆ ಸೋತಂತಾಗಿದ್ದಂತೂ ೋಷಿಸಿದಳು. ವಿನತೆ ಕದ್ರುವಿನ ದಾಸಿಯಾದಳು. ವಿನತೆಯ ಗ ಗರುಡ. ಅವನು ಪಕ್ಷಿಗಳ ರಾಜ. ಗರುಡನು ತನ್ನ ತಾಯಿಯಂತೆ ಕದ್ರು ಮತ್ತು ಸರ್ಪಗಳಿಗೆ ಸೇವೆ ಮಾಡಬೇಕಾದುದರಿಂದ ಆತನು ಬೇಸರ ಪಟ್ಟು ಕದ್ರುವಿನೊಡನೆ "ತಾಯಿ, ಈ ದಾಸ್ಯದಿಂದ ನಮಗೆ ಹೇಗೆ ವಿಮೋಚನೆಯಾದೀತು?" ಎಂದು ಕೇಳಲು ಆಕೆಯು "ಅಮೃತವನ್ನು ತಂದುಕೊಟ್ಟಲ್ಲಿ ಮಾತ್ರ ಬಿಡುಗಡೆ ಹೊಂದುವೆ" ಎಂದಳು. ಗರುಡನು ತಂದೆಯ ಆಶೀರ್ವಾದವನ್ನು ಪಡೆದು ದೇವಲೋಕಕ್ಕೆ ಹೋಗಿ ಅಮೃತ ರಕ್ಷಕರನ್ನು ಕೊಂದು ಅಮೃತ ಕಲಶದ ಸುತ್ತಲೂ ಸಂಚರಿಸುತ್ತಿದ್ದ ಚಕ್ರಾಯುಧದಿಂದ ತಪ್ಪಿಸಿಕೊಂಡು ಒಳಹೊಕ್ಕು ಇಂದ್ರನ ವಜ್ರಾಯುಧದ ಹೊಡೆತವನ್ನೂ ಲಕ್ಷ್ಯ ಮಾಡದೇ ಅಗ್ನಿಯ ಜ್ವಾಲೆಯನ್ನು ಮೀರಿ, ಸೂಕ್ಷ್ಮ ರೂಪದಿಂದ ಒಳಹೊಕ್ಕು ಅಲ್ಲಿ ಕಾವಲಿದ್ದ ಘಟಸರ್ಪಗಳನ್ನು ಕೊಂದು ಅಮೃತ ಕಲಶವನ್ನು ತೆಗೆದುಕೊಂಡು ಬರುತ್ತಿರುವಾಗ ಇಂದ್ರನು ವಜ್ರಾಯುಧವನ್ನು ಎಸೆಯಲು ಅದಕ್ಕೆ ಗೌರವ ಕೊಡುವುದಕ್ಕಾಗಿ ಗರುಡನು ತನ್ನ ಗರಿಯನ್ನು ಎಸೆದು ಮುಂದುವರಿಸಿದಾಗ ಇಂದ್ರನು ಅವನ ಪರಾಕ್ರಮಕ್ಕೆ ಮೆಚ್ಚಿ ಅಮೃತವನ್ನು ದುಷ್ಟರಾದ ಸರ್ಪಗಳ ವಶ ಮಾಡಬೇಡ ಎನ್ನಲು ಗರುಡನು ತನ್ನ ದಾಸ್ಯ ವಿಮೋಚನೆಯಾದ ಮೇಲೆ ಅಮೃತವನ್ನು ತೆಗೆದುಕೊಂಡು ಹೋಗಬಹುದೆಂದು ಇಂದ್ರನಿಗೆ ಹೇಳಿದನು. ಇಂದ್ರನು ಗರುಡನಿಗೆ ಸರ್ಪಗಳೆಲ್ಲಾ ನಿನ್ನ ಆಹಾರವಾಗಲಿ ಎಂದು ವರವನ್ನಿತ್ತು ಕಳುಹಿಸಿದನು. ಗರುಡನು ಅಮೃತವನ್ನು ತಂದು ಕದ್ರುವಿನ ಮುಂದಿದ್ದ ದರ್ಭಾಸ್ತರಣದ ಮೇಲಿಡಲು ಆಕೆ ನೀನು ನಿನ್ನ ತಾಯಿಯು ಇಂದಿನಿಂದ ದಾಸ್ಯದಿಂದ ಬಿಡುಗಡೆ ಹೊಂದಿದ್ದೀರಿ ಎಂದು ಮಕ್ಕಳಾದ ಸರ್ಪಗಳೊಡನೆ ಅಮೃತವನ್ನು ಕುಡಿಯಲು ಸ್ನಾನ ಮಾಡಿಬರುವಂತೆ ಹೇಳಿದಳು. ಆ ಸರ್ಪಗಳು ಸ್ನಾನಕ್ಕೆ ಹೋದಾಗ ಇಂದ್ರನು ಆ ಅಮೃತ ಕಲಶವನ್ನು ಅಪಹರಿಸಿದನು. ಸರ್ಪಗಳು ಮಿಂದು ಬರುವಾಗ ಅಮೃತವಿಲ್ಲದುದರಿಂದ ಅಮೃತದಾಸೆಯಿಂದ ಆ ದರ್ಭಾಸ್ತರಣವನ್ನು ನೆಕ್ಕಲು ಸರ್ಪಗಳ ನಾಲಗೆಯು ಸೀಳಾಯಿತು. ಗರುಡನ ಸಾಮರ್ಥ್ಯವನ್ನು ಕಂಡು ವಿಷ್ಣುವು ಈತನಿಗೆ ಸುಪರ್ಣನೆಂಬ ಹೆಸರನ್ನು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡನು. ಅವನನ್ನು ತನ್ನ ಧ್ವಜದಲ್ಲಿಟ್ಟುಕೊಂಡು ಗರುಡಧ್ವಜ ನಾದನು. ಗಂಧಮಾದನ ಪರ್ವತದ ಗುಹೆಯಲ್ಲಿ ಗರುಡನ ಸಾವಿರಾರು ಮಂದಿ ಮಕ್ಕಳು ವಾಸಿಸುತ್ತಿದ್ದರು. ಇವರನ್ನು ತಾರಕಾಸುರನು ಗೆದ್ದು ಇವರನ್ನೆಲ್ಲಾ ತನ್ನ ರಥದ ಕುದುರೆಗಳನ್ನಾಗಿ ಮಾಡಿಕೊಂಡನು. ಶಾಂಡಿಲಿ ಎಂಬ ಬ್ರಾಹ್ಮಣನಿಗೆ ಗರುಡನು ದ್ರೋಹವನ್ನು ಬಗೆದು ತನ್ನ ರೆಕ್ಕೆಗಳನ್ನೆಲ್ಲಾ ಕಳೆದುಕೊಂಡು ಪುನಃ ಆಕೆಯ ಅನುಗ್ರಹದಿಂದ ತನ್ನ ರೆಕ್ಕೆಯನ್ನು ಪಡೆದು ಹಾರುವ ಶಕ್ತಿಯನ್ನು ಪಡೆದನು. ಒಮ್ಮೆ ಕಶ್ಯಪನು ಮಾಡಿದ ಯಜ್ಞದಲ್ಲಿ ಅರವತ್ತು ಸಾವಿರ ಮಂದಿ ವಾಲಖಿಲ್ಯ ಮುನಿಗಳು ನೆರವಾಗಿ ತುಂಬಾ ಬಳಲಿದ್ದರು. ಆಗ ಇವರನ್ನು ಕಂಡು ಕುಳ್ಳರು ಎಂದು ಇಂದ್ರನು ಅಪಹಾಸ್ಯ ಮಾಡಿದುದರಿಂದ ಈ ಮುನಿಗಳು ಸಿಟ್ಟಿಗೆದ್ದು ಕಶ್ಯಪ ಮುನಿಯಿಂದ ಜನಿಸಿದ ಗರುಡನು ತನ್ನ ಗರ್ವವನ್ನು ಮುರಿಯಲೆಂದು ಶಾಪವಿತ್ತು, ಗರುಡನು ಅವತರಿಸುವುದಕ್ಕಾಗಿ ತಪಸ್ಸಿಗೆ ತೊಡಗಿದರು. ಗರುಡನಿಗೆ ಸುಮುಖ, ಸುನಾಮ, ಸುನೇತ್ರ, ಸುವರ್ಚ, ಸುರುಕ್, ಸುಬಲರೇ ಮೊದಲಾದ ಮಕ್ಕಳಿದ್ದರು.

ತಾಯ್ಗಾಳಿಕೆಯಲ್ಲಿ ಸಂಘರ್ಷ

ಗರುಡನ ಪುರಾಣದ ಕಥೆಯನ್ನು ಗಮನಿಸಿದರೆ ಕದ್ರು ಮತ್ತು ವಿನುತೆಯರಿಬ್ಬರೂ ತಾಯ್ಗಾಳಿಕೆಯವರಾಗಿದ್ದವರೆಂದು ತೋರುತ್ತದೆ. ಜೊತೆಗೆ ಅವರಿಬ್ಬರೂ ಗಣಗಳ ಮತ್ತು ಬಣಗಳ ಒಡತಿಯರೆಂದು ಕೂಡ ಕಾಣುತ್ತದೆ. ಅವರಿಬ್ಬರಲ್ಲಿ ನಡೆಯುವ ಸಂಘರ್ಷದ ಕತೆಯು ಮಕ್ಕಳಿಗೆ ಮುಂದುವರಿದಿತ್ತು. ಪಂಥವು ಅದೇನೇ ಇರಲಿ, ನಾಗರನ್ನು ದ್ವೇಷಿಸಲು ಇಂದ್ರನು, ಆರ್ಯರ ದೇವರಾಜನು ಕುಮ್ಮಕ್ಕು ಕೊಡುತ್ತಾನೆ. ಅವರಿಬ್ಬರನ್ನೂ ಒಂದಾಗಲು ಬಿಡುವುದಿಲ್ಲ. ಒಡೆದು ಆಳುವ ನೀತಿಯನ್ನು ನಾವು ಬ್ರಿಟಿಷರಲ್ಲಿ ಕಾಣುವುದಕ್ಕಿಂತ ಆದರಪ್ಪನಾಗಿ ಆರ್ಯರಲ್ಲಿ ಕಾಣುತ್ತೇವೆ. ಆದರೆ ಅದೇ ಇಂದ್ರ ಅಮೃತವನ್ನು ಕದಿಯುತ್ತಾನೆ.

ಅದೇನೇ ಇರಲಿ, ಕರ್ನಾಟಕದಲ್ಲಿಯೂ ಸ್ವಾಮಿನಿಷ್ಠ ಸಾಹಸಿಗಳನ್ನು, ಪ್ರಾಣವನ್ನೇ ಮುಡುಪಿಟ್ಟು ತಮ್ಮ ದಣಿಯನ್ನು ಕಾಪಾಡುತ್ತಿದ್ದ ನಿಷ್ಠರನ್ನು ಗರುಡ ಎಂದು ಕರೆಯುವುದು ಕಾಕತಾಳೀಯವೇನಲ್ಲ. ಪೌರಾಣಿಕ ಗರುಡನ ಸ್ವಾಮಿನಿಷ್ಠೆಯು ಇಲ್ಲಿಯವರೆಗೂ ಧ್ವನಿಸಿದೆ.

ವಿಷ್ಣುವೆಂಬ ವೈದಿಕ ಬೋಧಕ

ಇಂಥಾ ಗರುಡನಿಗೆ ವಿಷ್ಣುವಿಗೆ ಯಮಮಾರ್ಗದ ಬಗ್ಗೆ ವಿಷ್ಣುವು ಹೇಳುತ್ತಾನೆ. ಅವನು ವಿವರಿಸುವುದೇ ಮೊದಲು ಯಮದೂತರನ್ನು. ಅವರೋ ಕರ್‍ರಗೆ, ನಗ್ನರಾಗಿ,



ಪಾಶ ಮತ್ತು ದಂಡವನ್ನು ಹಿಡಿದುಕೊಂಡು ಕಟಕಟನೆ ಹಲ್ಲು ಕಡಿಯುತ್ತಾ ಭಯಂಕರ ಸ್ವರೂಪದಲ್ಲಿರುತ್ತಾರೆಂದು ವಿವರಿಸುತ್ತಾನೆ. ಕಪ್ಪಗೆ ಮತ್ತು ನಗ್ನರಾಗಿರುವವರು ಎಂದರೆ ಪುರಾಣಗಳು ವರ್ಣಭೇದ ನೀತಿಯನ್ನು ಅದೆಷ್ಟು ಚೆನ್ನಾಗಿ ಪಾಲಿಸಿಕೊಂಡು ಬರುತ್ತವೆ ಎಂಬುದನ್ನು ಗಮನಿಸಿ. ಹೆಬ್ಬೆರಳಗಾತ್ರದ ಸ್ಥೂಲದೇಹವನ್ನು ಮನುಷ್ಯನ ಶರೀರದಿಂದ ಎಳೆಯಲ್ಪಡುತ್ತದೆ. ನಂತರ ಅತ್ಯಂತ ದೀರ್ಘವಾದ ದಾರಿಯಲ್ಲಿ ಮೃತನನ್ನು ಎಳೆದುಕೊಂಡು ಹೋಗಲಾಗುತ್ತದೆ. ಸುಮ್ಮನೆ ಕರೆದುಕೊಂಡು ಹೋಗುವುದಿಲ್ಲ. "ದುಷ್ಟಾ, ನಡೆ, ನಿನ್ನ ಕುಂಭೀಪಾಕವೇ ಮೊದಲಾದ ನರಕಗಳಿಗೆ ಒಯ್ಯುತ್ತಿದ್ದೇವೆ. ತಡಮಾಡಬೇಡ ನಡೆ ಬೇಗ" ಎಂದೆಲ್ಲಾ ಹೇಳುವುದು ಬೇರೆ. ಚಾಟಿಯಿಂದ ಹೊಡೆಯಿಸಿಕೊಳ್ಳುವುದು ಬೇರೆ. ಅವರ ಮಾತುಗಳಿಂದ ಹೆದರಿಕೊಂಡು ಬೆದರಿಕೊಂಡು ಜೀವನು ಗೋಳಾಡುತ್ತಾ, ತಾನು ಮಾಡಿರುವ ಪಾಪಗಳನ್ನು ಸ್ಮರಿಸಿಕೊಳ್ಳುತ್ತಾ, ಯಮಲೋಕದ ನಾಯಿಗಳಿಂದ ಕಡಿಸಿಕೊಳ್ಳುತ್ತಾ ಹೋಗುತ್ತಿರುತ್ತಾನೆ. ಅವು ಕಡಿಯುವುದೋ ತಿನ್ನುವಂತೆ. ಜೊತೆಯಲ್ಲಿ ಕೆಟ್ಟ ಬಿಸಿಲು, ಸುಡುತ್ತಿರುವ ದಾರಿ. ಪದೇಪದೇ ಮೂರ್ಛಿತನಾಗುವ ಜೀವ.

ಯಮನ ಆಜ್ಞೆಯಂತೆ ಅವನಿಗೆ ಈ ರೀತಿಯಾಗಿ ಭಟರು ತರುತ್ತಾರೆಂದು ವಿಷ್ಣು ಹೇಳುತ್ತಾನೆ. ಅಷ್ಟೇ ಅಲ್ಲದೇ ನಾಸ್ತಿಕನಾದ ಪಾಪಿಯು ಮಕ್ಕಳಿಂದ ಕೊಡಲ್ಪಟ್ಟ ಪಿಂಡವನ್ನೂ ದಾನವನ್ನೂ ತಿನ್ನುವನು. ಆದರೆ ತೃಪ್ತಿಯಾಗುವುದೇ ಇಲ್ಲ. ಈ ಪಾಪಿಗಾಗಿ ಭೂಮಿಯ ಮೇಲೆ ಮಾಡುವ ದಾನ, ಶ್ರಾದ್ಧ, ಜಲಾಂಜಲಿಗಳಿಂದಲೂ ತೃಪ್ತಿಯಾಗುವುದಿಲ್ಲ. ಪಿಂಡವನ್ನು ತಿಂದರೂ ಹಸಿವೆಯಿಂದ ವ್ಯಾಕುಲವಾಗಿರುತ್ತವೆ. ಪಿಂಡದಾನವ ಪಡೆಯದೇ ಇದ್ದ ಜೀವವು ಪ್ರೇತರೂಪವನ್ನು ಹೊಂದಿ ಒಂದು ಕಲ್ಪದವರೆಗೆ ನಿರ್ಜನವಾದ ಅರಣ್ಯದಲ್ಲಿ ಬಹುದುಃಖಿತರಾಗಿ ಅಲೆದಾಡುತ್ತಿರುತ್ತವೆ. ನೂರು ಕೋಟಿ ಕಲ್ಪಗಳಾದರೂ ಕರ್ಮಫಲವ ಅನುಭವಿಸದೇ ಹೋಗಲಾರದು" ಹೀಗೆ ಹೇಳುತ್ತಾ ವಿಷ್ಣುವು ಒಬ್ಬ ವೈದಿಕ ಪುರೋಹಿತನಂತೆ ಮಗನಾದವನು ಹತ್ತುದಿನಗಳವರೆಗೂ ಪಿಂಡವ ಕೊಡಬೇಕು. ಅವುಗಳಲ್ಲಿ ಪ್ರತಿದಿನವೂ ನಾಲ್ಕುಭಾಗವಾಗಿ ವಿಭಜಿತವಾಗುವವು. ಹಾಗೆ ಹೇಳುತ್ತಾ ಗರುಡನಿಗೆ ದ್ವಿಜನೆಂದು ವಿಷ್ಣುವು ಕರೆಯುತ್ತಾನೆ. ಗರುಡನು ಅರಣ್ಯಕರ ಗಣದವನಾಗಿದ್ದರೂ ಅವನನ್ನು ದ್ವಿಜನೆಂದು ಕರೆಯುವುದಕ್ಕೆ ಕಾರಣ ಬಹುಶಃ ಅಷ್ಟರಹೊತ್ತಿಗೆ ತನ್ನ ಮೂಲಗುಣ ಸ್ವಭಾವಗಳಿಂದ ಹೊರಬಂದು ಸಂಪೂರ್ಣ ವೈದಿಕ ನಿಷ್ಠನಾಗಿದ್ದಿರಬಹುದು ಈ ಗರುಡ. ಆದರೆ ಕೆಲವು ಪಂಡಿತರು ದ್ವಿಜ ಎನ್ನುವುದಕ್ಕೆ ಬೇರೆಯೇ ಅರ್ಥ ಕೊಡುತ್ತಾರೆ. ಗರುಡನೆಂಬುದು ಹಕ್ಕಿ. ತಾಯಿ ಹಕ್ಕಿಯು ಮೊಟ್ಟೆಯನ್ನು ಇಡುವಾಗ ಒಂದು ಜನ್ಮ. ಮೊಟ್ಟೆಯನ್ನು ಒಡೆದು ಬರುವಾಗ ಇನ್ನೊಂದು ಜನ್ಮವಾದ್ದರಿಂದ ಪಕ್ಷಿಯನ್ನು ದ್ವಿಜ ಅಂದರೆ ಎರಡು ಬಾರಿ ಹುಟ್ಟಿದವ ಎಂದು ಕರೆಯುತ್ತಾರೆಂದು ಹೇಳುತ್ತಾರೆ.

ಆದರೆ ವಾಸ್ತವ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವಾಗ ಗರುಡನನ್ನು ಹಕ್ಕಿ ಎಂದು ಪಕ್ಷಿಯನ್ನಾಗಿಯೇ ನೋಡುವುದು, ಕಾರ್ಕೋಟಕ ಅಥವಾ ಶೇಷನನ್ನು ಹಾವುಗಳೆಂದೇ ನೋಡುವುದು, ಹನುಮಂತನನ್ನು ಕಪಿಯೆಂದೇ ನೋಡುವುದು ಹೇಗೆ ಸಾಧ್ಯ? ಇಂಥಾ ರೂಪಕಗಳನ್ನು ಯಥಾವತ್ತಾಗಿ ಸ್ವೀಕರಿಸುವ ಮನಸ್ಥಿತಿಯುಳ್ಳ ಮನುಷ್ಯರಿಂದಲೇ ಮೌಢ್ಯವೂ, ಅದರಿಂದ ಭಯ ಮತ್ತು ಆಸೆಗಳೂ ಹುಟ್ಟಿಕೊಂಡಿರುವವು.

ಇರಲಿ, ಪಿಂಡಗಳನ್ನು ನಾಲ್ಕು ಭಾಗಗಳನ್ನಾಗಿ ಮಾಡುವುದಾದರೂ ಏಕೆಂದರೆ, ಅವರ ಪ್ರಕಾರ, ಎರಡು ಭಾಗಗಳು ದೇಹದ ಪಂಚಭೂತಗಳಿಗೆ ಶಕ್ತಿಯನ್ನು ನೀಡುತ್ತವೆ. ಮೂರನೆಯದು ಯಮದೂತರಿಗೆ. ನಾಲ್ಕನೆಯದು ತಾನು ಜೀವಿಸುವುದಕ್ಕೆ. ಒಂಭತ್ತು ದಿನಗಳ ಕಾಲ ಪಿಂಡವನ್ನು ಪಡೆದರೆ ಹತ್ತನೇ ದಿನ ಪೂರ್ಣವಾಗುವಲ್ಲಿ ಜೀವದ ದೇಹದಲ್ಲಿ ಬಲವುಂಟಾಗುವುದು. ಹೀಗೇ ಹನ್ನೆರಡನೆಯ ದಿನಕ್ಕೆ ಶಕ್ತಿಯನ್ನು ಹೊಂದಿ ಹದಿಮೂರನೇ ದಿನವು ಜೀವವು ಯಮಕಿಂಕರರ ಹಿಡಿತದಲ್ಲಿ ಬಂಧಿಸಲ್ಪಟ್ಟು ಕೋತಿಯಂತೆ ಆ ಮಾರ್ಗದಲ್ಲಿ ತಾನೊಬ್ಬನೇ ಹೋಗುವನು. ಇದಕ್ಕಾಗಿಯೇ ಸಾವಿನ ನಂತರ ಹತ್ತನೇ ದಿನದ ಕಾರ್ಯ ಎಂದು ಮಾಡುವುದು. ಇದು ಎಲ್ಲಾ ಸಮುದಾಯಗಳಲ್ಲೂ ಇದೆ. ಆದರೆ ವೈವಿಧ್ಯತೆಗಳುಂಟು.

ಅದೂ ಇರಲಿ, ವೈತರಿಣೀ ನದಿಯನ್ನು ಬಿಟ್ಟು ಯಮಮಾರ್ಗದ ಪ್ರಮಾಣವು ಎಂಭತ್ತಾರು ಸಾವಿರ ಯೋಜನೆಗಳಷ್ಟು ದೂರವಂತೆ. ಆ ಹೆದ್ದಾರಿ ಅದೆಲ್ಲಿದೆಯೋ. ಸರಿ, ಒಂದು ಯೋಜನ ಎಂದರೆ ಸುಮಾರು ಎಂಟರಿಂದ ಒಂಭತ್ತು ಮೈಲಿಗಳಷ್ಟು ದೂರ. ಒಟ್ಟಾರೆ ಜೀವಿಯು ನಿಶ್ಚಯವಾಗಿ ಇನ್ನೂರ ನಲವತ್ತೇಳು ಯೋಜನೆಗಳಷ್ಟು ದಾರಿಯನ್ನು ಹಗಲಿರುಳು ಕ್ರಮಿಸುತ್ತಾನೆ. ದಾರಿಯಲ್ಲಿ ಹದಿನಾರು ಊರುಗಳಿವೆ. ಆ ಹದಿನಾರು ಊರುಗಳು ಯಾವುವೆಂದರೆ, ಸೌಮ್ಯ, ಸೌರಿಪುರ, ನಗೇಂದ್ರಭವನ, ಗಂಧರ್ವ, ಶಿಲಾಗಮ, ಕ್ರೌಂಚ, ಕ್ರೂರಪುರ, ವಿಚಿತ್ರಭವನ, ಬಹ್ವಾಪದ, ದುಃಖದ, ನಾನಾಕ್ರಂದಪುರ, ಸುತಪ್ತಭವನ, ರೌದ್ರ, ಪಯೋವರ್ಷಣ, ಶೀತಾಢ್ಯ, ಬಹುಭೀತಿ; ಇವುಗಳಾದ ನಂತರ ಯಮನ ಊರು ಧರ್ಮಭವನ ಸಿಗುತ್ತದೆ.

ಇಂತೆಲ್ಲಾ ಮಾಹಿತಿಗಳಿಂದ ಗರುಡ ಪುರಾಣವು ಪರಿಷ್ಕೃತಗೊಂಡಿರುವುದು ಮಹಾಭಾರತದ ನಂತರದ ಕಾಲದಲ್ಲಿ ಎಂದು ಅವಲೋಕಿಸಬಹುದು. ಅದೂ ಚಾರ್ವಾಕರ ನಂತರ. ಚಾರ್ವಾಕರ ಪ್ರಭಾವ ದಟ್ಟವಾಗುತ್ತಿದ್ದ ಸಮಯದಲ್ಲಿ ಜನಗಳಲ್ಲಿ ಮಾಡುವ ಕರ್ಮಗಳ ಭಯ ಹುಟ್ಟಿಸುವ ಅಗತ್ಯ ವೈದಿಕರಿಗಿತ್ತು. ಅದು ಹೇಗೆ ಮತ್ತು ಏಕೆ ಎಂದು ಮುಂದೆ ನೋಡೋಣ. ●

ಪ್ರತಿಪಕ್ಷ-ಮುಕ್ತ ಭಾರತ ಪ್ರಜಾಪ್ರಭುತ್ವದ ಅಡಿಪಾಯವನ್ನೇ ನಾಶ ಮಾಡುತ್ತ

ಮೊನ್ನೆ ದಾವಣಗೆರೆಯಲ್ಲಿ ನಡೆದ ಮೋದಿಯ ವಿಕಾಸಪರ್ವ ಸಮಾವೇಶದಲ್ಲಿ ಕಾಂಗ್ರೆಸ್-ಮುಕ್ತ ಭಾರತ ಮತ್ತು ಜೆಡಿಎಸ್-ಮುಕ್ತ ಕರ್ನಾಟಕ ಮಾಡುತ್ತೇವೆ ಎಂದು ಮೋದಿ ಮತ್ತೊಮ್ಮೆ ಘೋಷಣೆ ಮಾಡಿದ್ದಾರೆ. ಇದರ ನಂತರ ಕಮ್ಯುನಿಸ್ಟ್ ಮುಕ್ತ ಭಾರತ ಮಾಡುತ್ತೇವೆ ಎಂದು ಮೋದಿ ಘೋಷಣೆ ಮಾಡಬಹುದು. ತದನಂತರ ಪ್ರಾದೇಶಿಕ ಪಕ್ಷ-ಮುಕ್ತ ಭಾರತ ಮಾಡುತ್ತೇವೆ ಎನ್ನಬಹುದು. ಹೀಗೆ ಕೊನೆಗೆ ಏಕಪಕ್ಷೀಯ ಆಡಳಿತ ಭಾರತದಲ್ಲಿ ಹೇರಬಹುದು. ಆದರೆ ಸ್ವತಃ ಬಿಜೆಪಿ ಪಕ್ಷದೊಳಗೆಯೇ ಆಂತರಿಕ ಪ್ರಜಾಪ್ರಭುತ್ವ ಇಲ್ಲದಿರುವಾಗ ದೇಶದ ಮೇಲೆ ಇಂತಹ ಪಕ್ಷದ ಏಕಪಕ್ಷೀಯ ಆಡಳಿತ ನೇರವಾಗಿ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುವುದು ಖಂಡಿತ. ಅದೂ ಒಂದು ಧಾರ್ಮಿಕ ಕಟ್ಟರ್‌ವಾದಿ ಸಂಘಟನೆಯ ಕಪಿಮುಷ್ಟಿಯಲ್ಲಿರುವ ಬಿಜೆಪಿಯ ಸರ್ವಾಧಿಕಾರಿಯೊಬ್ಬ ಯಾವ ರೀತಿ ವರ್ತಿಸಬಹುದು ಎಂಬುದನ್ನು ಯೋಚಿಸಲೂ ಭಯವಾಗುತ್ತದೆ.

ಯಾಕೆಂದರೆ ಭಾರತದಲ್ಲಿ ಹಿಂದೂ ಧರ್ಮವನ್ನು ಏಕೈಕ ರಾಷ್ಟ್ರೀಯ ಧರ್ಮ ಎಂದು ಘೋಷಿಸಿ ನಂತರ ಉಗ್ರವಾದ ದಮನಿಸುವ ನೆಪದಲ್ಲಿ ಮುಸ್ಲಿಮರನ್ನು ಮತ್ತು ಕ್ರೈಸ್ತರನ್ನು ದಮನಿಸಿ ಭಾರತವನ್ನು ಅಲ್ಪಸಂಖ್ಯಾತ-ಮುಕ್ತ ಭಾರತ ಮಾಡಬಹುದು. ಹಾಗೆಯೇ ನಕ್ಸಲಿಸಮ್‌ಅನ್ನು ದಮನಿಸುವ ನೆಪದಲ್ಲಿ ದಲಿತರನ್ನೆಲ್ಲಾ ದಮನಿಸಿ ದಲಿತ-ಮುಕ್ತ ಭಾರತ ಮಾಡಬಹುದು. ಕೊನೆಗೆ ಮನುಸ್ಮೃತಿ ಅನುಷ್ಠಾನಗೊಳಿಸಿ ಕೊನೆಗೆ ತನ್ನ ದೇಶವನ್ನು ಎರಡನೇ ವಿಶ್ವಯುದ್ಧಕ್ಕೆ ದೂಡಿದ.

ಭಾರತದಲ್ಲೂ ಈಗಿನ ಬಿಜೆಪಿ ಪಕ್ಷ ಅಕ್ಷರಶಃ ಹಿಟ್ಲರನ ನಾಜಿ ಮಾಡೆಲ್ ಅನುಸರಿಸುತ್ತಿದೆ. ಒಂದೆಡೆ ವಿರೋಧ ಪಕ್ಷಗಳನ್ನು ನಾಶ ಮಾಡುವ ಅಥವಾ ದುರ್ಬಲಗೊಳಿಸುವ ಪ್ರಕ್ರಿಯೆ ಬಿಜೆಪಿ ಮೆಲ್ಲಗೆ ನಡೆಸುತ್ತಿದ್ದರೆ ಇನ್ನೊಂದೆಡೆ ಬಹುಧರ್ಮೀಯ ಮತ್ತು ಬಹು-ಜಾತೀಯ ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಮತ್ಸರ ಮತ್ತು ಪೂರ್ವಾಗ್ರಹಗಳನ್ನೇ ಬಂಡವಾಳ ಮಾಡಿಕೊಂಡು ಮುಸ್ಲಿಮರ ಮತ್ತು ಕ್ರೈಸ್ತರ ವಿರುದ್ಧ ಹಿಂದೂ ಧರ್ಮದವರ ಮನದಲ್ಲಿ ಕೋಮು ವಿಷ ತುಂಬಲಾಗುತ್ತಿದೆ. ಜತೆಗೆ ದಲಿತರ ವಿರುದ್ಧ ಸಹ ನಕ್ಸಲ್ ಪರ ಅನುಕಂಪವುಳ್ಳವರು ಎಂದು ಕೆಟ್ಟ ಅಭಿಪ್ರಾಯ ಹುಟ್ಟಿಸಲಾಗುತ್ತಿದೆ. ಮೇಲಾಗಿ ಆರ್ಯ-ವೈದಿಕ ಧರ್ಮವೇ ಸರ್ವಶ್ರೇಷ್ಠ ಎಂದು ಪ್ರಾಥಮಿಕ ಶಾಲೆಯಿಂದಲೇ ಮಕ್ಕಳ ಬ್ರೇನ್‌ವಾಶ್ ಮಾಡಲಾಗುತ್ತಿದೆ. ಈ ರೀತಿ ಮುಸ್ಲಿಂ ಕ್ರೈಸ್ತ ಮತ್ತು ದಲಿತರಲ್ಲಿ ಭಯ, ಪರಕೀಯ ಭಾವನೆ ಮತ್ತು ಗುಲಾಮೀ ಮನಸ್ಥಿತಿ ಹುಟ್ಟುಹಾಕಿ ತಮ್ಮ ಆರ್ಯ-ವೈದಿಕ ಧರ್ಮವನ್ನು ಭಾರತದ ರಾಷ್ಟ್ರೀಯ ಧರ್ಮವನ್ನಾಗಿ ಮಾಡಿ ಅಲ್ಪಸಂಖ್ಯಾತರನ್ನು, ಶೂದ್ರರನ್ನು ಮತ್ತು ದಲಿತರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಮಾಡುವ ದೂರಗಾಮಿ ದುಷ್ಟ ಯೋಜನೆ ಬಿಜೆಪಿಯ ಈ ಕಾಂಗ್ರೆಸ್-ಮುಕ್ತ ಭಾರತ ಎಂಬ ಘೋಷಣೆಯ ಹಿಂದೆ ಅಡಗಿದೆ. ಹೀಗೆ ಪ್ರತಿಪಕ್ಷ-ಮುಕ್ತ ಬಿಜೆಪಿಯ



ಭಾರತವನ್ನು ಸಂವಿಧಾನ-ಮುಕ್ತ ದೇಶ ಮಾಡಬಹುದು.

ಬಿಜೆಪಿಯ ಈ ವಿರೋಧ ಪಕ್ಷ-ಮುಕ್ತ ಮಾದರಿ ಸಂಪೂರ್ಣ ಜರ್ಮನಿಯ ಹಿಟ್ಲರನ ನಾಜಿ ಪಕ್ಷದ ಮಾದರಿಯಾಗಿದೆ. ಹಿಟ್ಲರ್ ಸಹ ನಾಜಿ ಪಕ್ಷವನ್ನು ಜರ್ಮನಿಯಲ್ಲಿ ಆಡಳಿತಕ್ಕೆ ತಂದ ಮೇಲೆ ಕ್ರಮೇಣ ವಿರೋಧ ಪಕ್ಷಗಳನ್ನೆಲ್ಲಾ ನಾಶ ಮಾಡಿದ. ಇದರಿಂದ ಜನರು ದಂಗೆ ಏಳಬಾರದು ಎಂಬ ಕಾರಣಕ್ಕೆ ಜನರಲ್ಲಿ ರಾಷ್ಟ್ರಭಕ್ತಿಯ ಕಣ್ಣಿನ ಪೊರೆ ಹಚ್ಚಲು ನೋಡಿದ. ಅದು ಸಫಲವಾಗಲಿಲ್ಲ ಎಂದು ಜರ್ಮನ್ನರು ಆರ್ಯ ಜನಾಂಗದವರಾಗಿದ್ದು ತಮ್ಮದು ಜಗತ್ತಿನ ಅತಿ ಶ್ರೇಷ್ಠ ಜನಾಂಗ ಎಂದು ಜರ್ಮನ್ನರಲ್ಲಿ ಕುರುಡು ಅಭಿಮಾನ ಹುಟ್ಟಿಸಲು ನೋಡಿದ. ಜತೆಗೆ ಸಾಮಾನ್ಯ ಜರ್ಮನ್ನರ ಮತ್ಸರ ಹಾಗೂ ಪೂರ್ವಾಗ್ರಹವನ್ನೇ ಬಂಡವಾಳ ಮಾಡಿಕೊಂಡು ವಿನಾಕಾರಣ ಅಮಾಯಕ ಯಹೂದಿಗಳ ಮಾರಣಹೋಮ ನಡೆಸಿದ.

ಕಲ್ಪನೆಯು ಭಾರತದ ಪ್ರಜಾಪ್ರಭುತ್ವದ ಅಡಿಪಾಯವನ್ನೇ ನಾಶ ಮಾಡುವ ಅತಿ ಅಪಾಯಕಾರಿ ಕಲ್ಪನೆಯಾಗಿದೆ. ದುರಂತವೆಂದರೆ ಇನ್ನೂ ಡೈನೋಸಾರ್ ಯುಗದಲ್ಲೇ ಇರುವ ಶತಭ್ರಷ್ಟ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಇದನ್ನು ಅರ್ಥಮಾಡಿಕೊಂಡೇ ಇಲ್ಲ.

-ಜೆ. ರವಿಕಿರಣ, ಮೈಸೂರು

ಇದುವೇ ಫೇಕೂಮ್ಯಾನ್-ಬೂಸಿಬಸ್ಯಾನ ನಿಜ ರೂಪ

ಮೊನ್ನೆ ಮೋಡ ಸ್ಫೋಟದಿಂದ ಉತ್ತರಾಖಂಡ್ ರಾಜ್ಯದಲ್ಲಿ ಮತ್ತೆ ನೆರೆ ಬಂದಿದ್ದು ಅನೇಕ ಕನ್ನಡಿಗರ ಸಹಿತ ಸಾವಿರಾರು ತೀರ್ಥಯಾತ್ರಿಗಳು ಅಲ್ಲಿ ನೆರೆಗೆ ಸಿಕ್ಕಿ ಬಿದ್ದಿದ್ದಾರೆ. ಆದರೆ ಅವರ ರಕ್ಷಣೆಗೆ ಮೋದಿಯ ಕೇಂದ್ರ ಸರಕಾರ ಸೇನಾಪಡೆಯನ್ನು ಕಳುಹಿಸಲೇ ಇಲ್ಲ. ಅಲ್ಲಿ ಉತ್ತರಾಖಂಡ್‌ನಲ್ಲಿ ಯಾತ್ರಿಗಳು ಆಘಾತದಿಂದ ತತ್ತರಿಸಿದ್ದರೆ



ಇಲ್ಲಿ ಮೋದಿ ದೇಶದ ತುಂಬೆಲ್ಲಾ ತನ್ನ ಎರಡು ವರ್ಷ ಪೂರೈಸಿರುವ ಹಬ್ಬವನ್ನು ಕೋಟ್ಯಾಂತರ ಖರ್ಚಿನಲ್ಲಿ ಆಚರಿಸುತ್ತಾ ತಿರುಗುತ್ತಿದ್ದಾರೆ. ಇದು ಮುಗಿದ ತಕ್ಷಣ ಮತ್ತೆ ವಿದೇಶಕ್ಕೆ ದೌಡು!

ಆದರೆ ಜೂನ್ 2013ರಲ್ಲಿ ಹೀಗೆಯೇ ಮೇಘ ಸ್ಫೋಟದಿಂದ ಸಾವಿರಾರು ಯಾತ್ರಿಕರು ಕೇದಾರ್‌ನಾಥದಲ್ಲಿ ಸಿಕ್ಕಿ ಬಿದ್ದಿದ್ದಾಗ ಆಗಿನ ಯುಪಿಎ ಕೇಂದ್ರ ಸರಕಾರ ತಕ್ಷಣ ಸೇನಾಪಡೆ ಮತ್ತು ಅರೆ-ಸೇನಾಪಡೆಯನ್ನು ಕೇದಾರನಾಥಕ್ಕೆ ಕಳುಹಿಸಿ ಹೆಚ್ಚಿನ ಯಾತ್ರಿಕರನ್ನು ರಕ್ಷಿಸಿತ್ತು. ಆಗ ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಇದೇ ಮೋದಿ ಅನಗತ್ಯವಾಗಿ ಉತ್ತರಾಖಂಡ್‌ಗೆ ಹೋಗಿ ತಾನು ಸೂಪರ್‌ಮ್ಯಾನ್-ಸ್ಪೈಡರ್‌ಮ್ಯಾನ್- ಬ್ಯಾಟ್‌ಮ್ಯಾನ್-ಫೇಕೂಮ್ಯಾನ್ ಎಲ್ಲವೂ ಒಬ್ಬನೇ ಆಗಿರುವಂತೆ ಪೈಡ್ ಮೀಡಿಯಾಕ್ಕೆ ಪೋಸ್ ಕೊಟ್ಟು ತಾನೊಬ್ಬನೇ ಹತ್ತು ಸಾವಿರ ಯಾತ್ರಿಗಳನ್ನು ರಕ್ಷಿಸಿದ್ದಾಗಿ ಹೇಳಿಕೊಂಡು ರ್‍ಯಾಂಬೋ ಎಂಬ ಬಿರುದು ಗಳಿಸಿದ್ದರು. ಆಗ ಚೆಡ್ಡಿಗಳು ಮೋದಿಯ ಭಜನೆ ಮಾಡಿದ್ದೇ ಮಾಡಿದ್ದು. ಈಗ ಅದೇ ಮೋದಿ ದೇಶದ ಪ್ರಧಾನಿ ಆಗಿರುವಾಗ ಮಾತ್ರ ಉತ್ತರಾಖಂಡಿಗೆ ಸೇನಾಪಡೆ ತಕ್ಷಣ ಕಳುಹಿಸಿ ಯಾತ್ರಿಗಳನ್ನು ರಕ್ಷಿಸಬೇಕು ಎನ್ನುವ ಕನಿಷ್ಠ ಮಾನವತೆಯನ್ನೂ ತೋರಿಸುತ್ತಿಲ್ಲ. ಇದುವೇ ಫೇಕೂಮ್ಯಾನ್-ಬೂಸಿಬಸ್ಯಾನ ನಿಜ ರೂಪ.


-ಆರ್. ಬಿ. ಶೇಣವ, ಮಂಗಳೂರು

ನರೇಶ್ ಶೆಣೈ ಎಂಬ ಕ್ರಿಮಿ

ಮುಖಪುಟದಲ್ಲಿ ಗಮನ ಸೆಳೆಯುತ್ತಿದ್ದ ವರದಿಯೊಂದರ ಕಾರಣಕ್ಕೆ ಈ ಸಲದ ಲಂಕೇಶ್ ಕೊಂಡು ಓದಿದೆ. ವಿನಾಯಕ ಬಾಳಿಗಾ ಪ್ರಕರಣ ಮತ್ತು ಕಾಶೀ ಮಠದ ಕರಾಳ ಚರಿತ್ರೆಯ ಬಗೆಗೆ ಶುದ್ಧೋದನ ಅವರು ಹಾಗು ಓದುಗರೊಬ್ಬರು ಬರೆದಂತಾದ್ದು ನೂರಕ್ಕೆ ನೂರು ಸತ್ಯದ ಮಾತು. ಅದನ್ನು ಪ್ರಕಟಿಸುವಂತಹ ಧೈರ್ಯ ಮಾಡಿದ್ದಕ್ಕಾಗಿ ಅನಂತ ವಂದನೆಗಳು.

ಬಾಡಿಗೆ ಹಂತಕರಿಂದ ಸತ್ತದ್ದು ಜಿಎಸ್‌ಬಿ ವ್ಯಕ್ತಿಯೇ. ನರೇಶ್ ಶೆಣೈನಂತಹ ಕೊಲೆಗಾರನೂ ಅದೇ ಪಂಗಡದವನು. ಅದೆಲ್ಲ ಹೋಗಲಿ, ಈ ಆರ್‌ಟಿಐ ಕಾರ್ಯಕರ್ತರ ಹತ್ಯೆ ಇದೇ ಮೊದಲೇನಲ್ಲ, ಬೇರೆ ಕಡೆ ಹೋಗಲಿ ಕರಾವಳಿಯಲ್ಲೇ ಮೂರು ವರ್ಷದ ಹಿಂದೆ ಉಡುಪಿಯಲ್ಲಿ ಆರ್‌ಟಿಐ ಕಾರ್ಯಕರ್ತ ವಾಸುದೇವ್ ಅಡಿಗ ಅವರ ಕೊಲೆ ಬಹಳ ಸದ್ದು ಮಾಡಿ ದೊಡ್ಡ ಕೈಗಳಿರುವ ಆರೋಪಿ ಬಾಯರಿಯನ್ನು ಹಿಡಿದಿದ್ದರು. ಇದೊಂದು ರಿಸ್ಕಿ ಕೆಲಸ ಎಲ್ಲರಿಗೂ ಗೊತ್ತಿದೆ; ಸಾಮಾನ್ಯ ಜನರಿಗೆ ಗೊತ್ತಿಲ್ಲದಿರಬಹುದು. ಆದರೆ ಇದೆಲ್ಲ ತಿಳಿದಿರುವ ಮಂಗಳೂರಿನ ಢೋಂಗಿ ಆರ್‌ಟಿಐ ಕಾರ್ಯಕರ್ತನೊಬ್ಬ ಬಾಳಿಗಾ ಕುಟುಂಬದ ಪರ [illegible] ಬದಲು ಇದೀಗ ನರೇಶ ಶೆಣೈಯನ್ನು ಹೊಗಳುತ್ತ [illegible] ಹಾದಿ ತಪ್ಪಿಸುತ್ತಿದ್ದಾನೆ. ಆದರೆ ಮಂಗಳೂರಿಗರದ್ದು [illegible] ಪ್ರಶ್ನೆ: ಶೆಣೈ ಸಾಚಾ ಆಗಿದ್ದರೆ ಅಡಗಿ ಕೂತದ್ದೇಕೆ?

ನಿಮ್ಮ ಲೇಖನ ನಿಜಕ್ಕೂ ಒಂದು ಮೈಲಿ[illegible] ಯಾಕೆಂದರೆ ದುಡ್ಡು ಮತ್ತು ರಾಜಕೀಯಗಳ ಬಲ [illegible] ಶೆಣೈ ಹಾಗು ಆತನ ಸಮುದಾಯದವರ [illegible] ಯಾರೊಬ್ಬರೂ ಮಾತನಾಡುವವರಲ್ಲ, ಕರಾವ[illegible] ಪತ್ರಿಕೋದ್ಯಮವಂತೂ ಇದೇ ಸಮುದಾಯದ ಆಸ್ತಿಯ[illegible] ಮೇಲೇ ಬೇರೇ ಮಾತೇಕೆ. ಖದೀಮ ಕೊಲೆಗಾರ [illegible] ಬಗ್ಗೆ ಯಾವ ವರದಿಗಳೂ ಮುಖ್ಯವಾಗಿ ಪ್ರಕಟಗೊಳ್ಳ[illegible] ಬಂದರೂ ಚಿಕ್ಕದಾಗಿ ಬಂದು ಕ್ರಿಮಿನಲ್ ಕ್ರಿಮಿ ಶೆಣೈ[illegible] ಬಹುವಚನದಲ್ಲಿ ಸಂಬೋಧಿಸಲಾಗುತ್ತದೆ. ಇದು [illegible] ಹಾಗೂ ಆತನ ಕ್ರಿಮಿನಲ್ ಚಟುವಟಿಕೆ ಹಿನ್ನೆಲೆಯು ಭ[illegible] ಕಾರಣಕ್ಕೂ ಇದ್ದಿರುವ ಸಾಧ್ಯತೆಯಿದೆ.



'ಓದುಗ, ಮಂಗಳೂರು' ಅವರು ವ್ಯಕ್ತಪಡಿಸಿ[illegible] ಶೆಣೈ ತರಹದ ಅನೇಕರಿಗೆ ಇಲ್ಲಿನ ಅನ್ನದ ಋಣ[illegible] ದೋಖಾಬಾಜಿ ಗುಣವೇ ಹೆಚ್ಚೆಂಬುದು ಸತ್ಯದ ಮಾ[illegible] ನಮ್ಮ ಸರಕಾರ ಶೆಣೈನಂತವರನ್ನು ಇನ್ನಿಲ್ಲದಂತೆ ಪೋ[illegible] ತ್ತಿದ್ದರೆ ಗೋವಾದಲ್ಲಿ ಬಡ ಕನ್ನಡಿಗರ ಪಾಡು ಯಾ[illegible] ಬೇಡ. ಮಣಿಪಾಲದಲ್ಲಿನ ಗೋವಾ ಮೂಲದ ಸಾಹು[illegible] ವಂಚಿಸಿದ್ದ ಸಾವಿರಾರು ಕೋಟಿ ರೂಪಾಯಿ ತೆರಿಗೆ ಹಣ[illegible] ನಮ್ಮ ಸರಕಾರ ಮನ್ನಾ ಮಾಡಲು ತುದಿಗಾಲಲ್ಲಿ ನಿಂ[illegible] ಲಕ್ಷಾಂತರ ಗೋವನ್ನರಿಗೆ ನೆಲ ನೀಡಿದ ಕರ್ನಾಟ[illegible] ವಿರುದ್ಧ ಇದೇ ಗೋವಾ ಸರಕಾರ ಉತ್ತರ ಕನ್ನಡ [illegible] ನ್ಯಾಯಯುತ ನೀರಿಗೆ ತಕರಾರು ಒಡ್ಡುತ್ತದೆ. [illegible] ಬಂಡೂರಿ ಬಗ್ಗೆ ಮುನ್ನೂರು ದಿನದ ಚಳವಳಿ[illegible] ಎಂತೆಂತವರೆಲ್ಲ ಭಾಗವಹಿಸಿದರು. ಹೇಳಿಕೆ ನೀಡಿ[illegible] ಆದರೆ ಇಲ್ಲಿನ ಅನ್ನದ ಋಣವಿರುವ ಶೆಣೈ ಮಂ[illegible] ಒಂದಾದರೂ ಚಳವಳಿ ಪರ ಧ್ವನಿ ಬಂದದ್ದು [illegible] ಆದರೆ ಅದೇ ಕರಾವಳಿಯಲ್ಲಿ ಸಾಬರ ಹುಡುಗ ಹಿಂ[illegible] ಹುಡುಗಿ ಜೊತೆ ಹೋದರೆ, ಯಾವುದೋ ಕೋಮುಗ[illegible] ಗಳಾದರೆ ತಕ್ಷಣ ಎಂ.ಪಿ. ಕಾಮತ್‌ನಂತವರ [illegible] ಚುರುಕ್ ಎನ್ನುತ್ತದೆ. ದಂಗೆಕೋರರ ಹಿಂದೆ [illegible] ತಮ್ಮಗಾದದ್ದು ಶೆಣೈನಂಥವರು ಬೆಂಬಲಿಸುವುದು ಎಲ್ಲ[illegible] ತಿಳಿದಿರುವ ಬಹಿರಂಗ ಸತ್ಯ. ಅದೇ ಕಿಚ್ಚು ಮಹದಾ[illegible] ವಿಚಾರದಲ್ಲಿ ಗೋವಾ ಸರಕಾರ ಉತ್ತರ ಕರ್ನಾಟ[illegible] ರೈತರ ಮೇಲೆಸಗುವ ಅನ್ಯಾಯಕ್ಕೆ ವಿರುದ್ಧವಾಗಿ ಸ್ಪಂದಿ[illegible] ಕರ್ನಾಟಕ ಜನತೆ ಖಂಡಿತ ಥ್ಯಾಂಕ್ಸ್ ಎನ್ನುತ್ತಿತ್ತು.

ಇದೀಗ ಎಲ್ಲೆಡೆ ಸುದ್ದಿಯಾಗಿರುವಂತೆ ನಮ್ಮ [illegible] ಯಾವುದೇ ಆಮಿಷಗಳಿಗೆ ಬಲಿ ಬೀಳದೇ ಈ ಕ್ರಿಮಿ[illegible] ನರೇಶ್ ಶೆಣೈಯನ್ನು ಬಂಧಿಸುವಲ್ಲಿ [illegible] ಪ್ರಯತ್ನವನ್ನು ಮಾಡಲೇಬೇಕು. ಇಲ್ಲವಾದಲ್ಲಿ [illegible] ಕಾಲಿಗೆಯ ಸಂಬಳಗ [illegible] ಇಂತಹ [illegible] ಕೊನೆದಾದರೂ ಬಾಳಿಗಾರನ ಸಾವಿರ ಪಾಲು [illegible] ಭಾವನೆಯೇ ಗಟ್ಟಿಯಾಗುವುದು ಖಚಿತ. ಮುಖ್ಯ[illegible] ಸಿದ್ದರಾಮಯ್ಯನವರು ಇದನ್ನು ಗಂಭೀರವಾಗಿ ಪರಿ[illegible] ಬೇಕಾಗಿದೆ.

- ತೇಜ್ ರಾಮ್ ಎ. ಹೆಬ್ಬಾರ್ [illegible], ಮಂಗಳೂ[illegible]

ಕರ್ನಾಟಕದಿಂದಲೂ ಯಶಸ್ವಿ 'ಪೋ.. ಮೋನೆ' ಪ್ರಯೋಗ




ಯಾರನ್ನಾದರೂ ಹೊರಹಾಕಿರುವುದನ್ನು ಸೂಚಿಸಲು 'ಅರ್ಧಚಂದ್ರ ಪ್ರಯೋಗ' ಎಂಬ ಪದ ಸಾಹಿತ್ಯದಲ್ಲಿ ಬಳಕೆಯಲ್ಲಿದೆ. ಸ್ವಲ್ಪಮಟ್ಟಿಗೆ ಅಂತಹುದೇ ಭಾವವನ್ನು ಸೂಚಿಸುವಂತಹ ಹೊಸ ಪದವೊಂದು ಮೋದಿ ಮಹಾತ್ಮನ ದೆಸೆಯಿಂದಾಗಿ ಇತ್ತೀಚೆಗೆ ದೇಶದ ಜನರನ್ನು ಸೆಳೆದಿತ್ತು, ಅದೇ ಕೇರಳಿಗರ 'ಪೋ.. ಮೋನೆ' ಪ್ರಯೋಗ. ಅವತ್ತು ಕೇರಳಿಗರಿಂದ ಮಂಕ(ಮಂಕಿ ಬಾತ್‌ವಾಲಾ)ನೊಬ್ಬ ಈ ಪ್ರಯೋಗಕ್ಕೆ ಗುರಿಯಾಗಿದ್ದರೆ ಇದೀಗ ಕರ್ನಾಟಕದಲ್ಲಿ ಎಂಕನೊಬ್ಬ ಇದೇ ರೀತಿ ಕನ್ನಡಿಗರ ಆಕ್ರೋಶಕ್ಕೆ ಬೆದರಿ ದೂರದ ರಾಜಸ್ಥಾನಕ್ಕೆ ಹೇರಿ ಕಿತ್ತದ್ದು ಸುದ್ದಿಯಾಗಿದೆ. ಜನರಿಂದ ಪೋ ಮೋನೇ ಎನಿಸಿಕೊಂಡ ಈ ಎಂಕ-ಮಂಕಗಳು ಚಡ್ಡಿಗಳೇ ಎಂಬುದು ಮತ್ತೂ ವಿಶೇಷ.


ರಾಜ್ಯಸಭೆಗೆ ಕರ್ನಾಟಕದಿಂದಲೇ ಹಲವಾರು ಬಾರಿ ಗೆದ್ದು ಕರ್ನಾಟಕದ ಪರವಾಗಿ ಒಮ್ಮೆಯೂ ಮಾತನಾಡದ ಹಾಗು ಎಲ್ಲೂ ಬೆಂಬಲಿಸದ ವೆಂಕಯ್ಯ ನಾಯ್ಡು ಮತ್ತೊಮ್ಮೆ ಇಲ್ಲಿಂದಲೇ ಸ್ಪರ್ಧಿಸಹೊರಟಿದ್ದಕ್ಕೆ ಭಾರೀ ವಿರೋಧಗಳು ವ್ಯಕ್ತವಾಗಿದ್ದವು. ಈ ವಿರೋಧಕ್ಕೆ ಪ್ರತಿಯಾಗಿ ನಾಯ್ಡುಗಾರು "ಇಟಲಿಯಿಂದ ಬಂದವರು ಇಲ್ಲಿ ಸ್ಪರ್ಧಿಸಬಹುದಾದರೆ ನಾನು ಕರ್ನಾಟಕದಲ್ಲಿ ನಿಂತರೆ ತಪ್ಪೇನು?" ಎಂದು ಗೊಗ್ಗರುಧ್ವನಿಯಲ್ಲಿ ತನ್ನ ಹಳಸಲು ಚಡ್ಡಿ ಬುದ್ಧಿಯನ್ನು ಹೊರಹಾಕಿದ್ದಾದರೂ ಇದ್ಯಾವುದೂ ವರ್ಕ್ಔಟ್ ಆಗದೇ ಆಂಧ್ರದ ಅಜರುದ್ದೀನ್ ಲೋಕಸಭೆಗೆ ರಾಜಸ್ಥಾನದಲ್ಲಿ ಸ್ಪರ್ಧಿಸಿದಂತೆ ತಾನೂ ಕೂಡ ಅಲ್ಲಿಗೆ ಹೋಗೋದೇ ವಾಸಿ ಎಂದು ಕೊನೆಗೆ ಗಂಟುಮೂಟೆ ಕಟ್ಟಿದರಂತೆ.

- ಅವಿನಾಶ್ ಎಮ್.ಎಸ್., ನೆಲ್ಲಿಕಾರ್





lankesh70@rediffmail.com
9980331427
SMS



ಕರ್ವದೊಳಗಿದೆ ಗರ್ವ

ಸ್ಯಾಂಡಲ್‌ವುಡ್‌ನಲ್ಲಿ ಸದ್ಯ 'ಕರ್ವ' ಸಿನಿಮಾದ್ದೇ ಮಾತು. ನಿರ್ದೇಶಕ ನವನೀತ್ ಅವರಿಗೆ ಚಿತ್ರದ ಬಗ್ಗೆ ಎಷ್ಟೊಂದು ನಂಬಿಕೆ ಇದೆ ಅಂದರೆ, ಮೊದಲ ಸಿನಿಮಾದಲ್ಲೇ ಪಾರ್ಟ್-2 ಚಿತ್ರದ ಬಗ್ಗೆ ಮಾತಾಡಿದ್ದಾರೆ. ಅತೀ ಶೀಘ್ರದಲ್ಲೇ ಎರಡನೇ ಭಾಗವನ್ನೂ ತೆರೆಗೆ ತರುವ ಪ್ಲಾನ್ ಹಾಕಿಕೊಂಡಿದ್ದಾರೆ.

ನಾನಾ ಕಾರಣಗಳಿಂದಾಗಿ 'ಕರ್ವ' ಚಿತ್ರವು ಸಾಕಷ್ಟು ನಿರೀಕ್ಷೆ ಮೂಡಿಸಿತ್ತು, '6-5=2' ಚಿತ್ರತಂಡದ ಮತ್ತೊಂದು ಸಿನಿಮಾ ಇದಾಗಿದ್ದರಿಂದ ಸಾಮಾಜಿಕ ಜಾಲತಾಣದಲ್ಲೂ ಸದ್ದು ಮಾಡಿತ್ತು, ಕಳೆದ ವಾರವಷ್ಟೇ 'ಕರ್ವ' ರಿಲೀಸ್ ಆಗಿದೆ. ನಿರೀಕ್ಷೆ ಮೀರಿ ಗೆಲುವು ಸಾಧಿಸಿದೆ. ಸಿನಿಮಾ ರಿಲೀಸ್‌ಗೂ ಮುನ್ನವೇ ಪಾರ್ಟ್-2 ಬಗ್ಗೆ ಮಾತಾಡಿ ಕುತೂಹಲ ಮೂಡಿಸಿರುವ ನಿರ್ದೇಶಕ ನವನೀತ್, ಈ ಚಿತ್ರದ ಮೇಕಿಂಗ್ ಮತ್ತು ಮುಂದಿನ ಭಾಗದ ಚಿತ್ರೀಕರಣದ ಬಗ್ಗೆ ಮಾತಾಡಿದ್ದಾರೆ.

** 'ಕರ್ವ' ಸಿನಿಮಾದ ಬಗ್ಗೆ ನಿಮಗೆ ಅಷ್ಟೊಂದು ನಿರೀಕ್ಷೆ ಯಾಕಿತ್ತು?*

ಸಿನಿಮಾ ರಿಲೀಸ್‌ಗೂ ಮುನ್ನವೇ ಖಂಡಿತ ಗೆಲ್ಲುತ್ತೇವೆ ಅಂತ ಹೇಳಿದ್ದೆ. ಆ ಮಾತನ್ನು ನಮ್ಮ ಚಿತ್ರತಂಡ ಉಳಿಸಿಕೊಂಡಿದೆ. ಈವರೆಗೂ ಇಂತಹ ಸಿನಿಮಾ ಕನ್ನಡದಲ್ಲಿ ಬಂದಿಲ್ಲ, ಅಲ್ಲದೇ ಹೊಸ ರೀತಿಯಲ್ಲಿ ನಾವು ಕತೆಯನ್ನು ಹೇಳುವ ಪ್ರಯತ್ನ ಮಾಡಿದ್ದೆವು. ಮೇಕಿಂಗ್ ಕೂಡ ವಿಭಿನ್ನವಾಗಿತ್ತು, ಹೀಗಾಗಿ ಧೈರ್ಯದಿಂದ ಸಿನಿಮಾದ ಬಗ್ಗೆ ಮಾತಾಡಿದ್ದೆವು.

** ಸಿನಿಮಾ ಗೆಲ್ಲದೇ ಇದ್ದರೂ ನೀವು ಪಾರ್ಟ್-2 ಚಿತ್ರ ಮಾಡುತ್ತಿದ್ದೀರಾ?*

ಸೋಲುವ ಮಾತೇ ನಮ್ಮಲ್ಲಿ ಇರಲಿಲ್ಲ, ಹೊಸದನ್ನು ಕೊಟ್ಟಾಗ ಕನ್ನಡದ ಪ್ರೇಕ್ಷಕರು ಅದನ್ನು ಸ್ವೀಕರಿಸುತ್ತಾರೆ ಅನ್ನುವ ನಂಬಿಕೆ ಇತ್ತು, ಹೀಗಾಗಿ ಪಾರ್ಟ್-2 ಬಗ್ಗೆ ಸಿನಿಮಾದ ಕೊನೆಯಲ್ಲಿ ಹೇಳಿದ್ದೆವು. ಖಂಡಿತಾ ಅತೀ ಶೀಘ್ರದಲ್ಲೇ ಮುಂದಿನ ಭಾಗದ ಚಿತ್ರೀಕರಣ ಶುರು ಮಾಡುತ್ತೇವೆ.

** ಇಂಥದ್ದೊಂದು ಕತೆಯನ್ನು ಆಯ್ಕೆ ಮಾಡಿಕೊಳ್ಳಲು ಕಾರಣವೇನು?*

ಪ್ರತಿಯೊಬ್ಬ ಮನುಷ್ಯ ದುಡ್ಡಿಗಾಗಿ ಹಪಾಹಪಿಸುತ್ತಾನೆ. ಹಣದ ವಿಷಯದಲ್ಲಿ ಮಾತ್ರ ಅವನು ಹೀಗೆ ವಿಭಿನ್ನವಾಗಿ ಆಲೋಚಿಸುತ್ತಾನೆ. ಇದೇ ಸಿನಿಮಾ ಮಾಡಲು ಪ್ರೇರಣೆ ನೀಡಿದ್ದು. ಇಬ್ಬರು ಬ್ರಿಲಿಯಂಟ್ ವ್ಯಕ್ತಿಗಳು ಸೇರಿದಾಗ, ದುಡ್ಡಿನಾಸೆಗೆ ಏನೆಲ್ಲ ಆಟ ಆಡಬಹುದು ಅಂತ ಯೋಚಿಸಿದೆ. ಆವಾಗ 'ಕರ್ವ' ಸಿನಿಮಾದ ಚಿತ್ರಕತೆ ಬಂದಿತು.

** '6-5=2' ಸಿನಿಮಾ ತಂಡ ಅಂದಾಗ ಇನ್ನಷ್ಟು ನಿರೀಕ್ಷೆ ಇತ್ತು, 'ಕರ್ವ'ದ ಜತೆಗೆ ಆ ಚಿತ್ರವನ್ನು ಪ್ರೇಕ್ಷಕರು ಹೋಲಿಸುತ್ತಾರಾ?*


ಆ ಸಿನಿಮಾನೇ ಬೇರೆ, 'ಕರ್ವ' ಚಿತ್ರವೇ ಬೇರೆ. ಹಾರರ್ ಕಂ ಥ್ರಿಲ್ಲರ್ ಅಂಶಗಳು ಇವೆ ಅನ್ನುವುದನ್ನು ಬಿಟ್ಟರೆ, ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ, ಮೇಕಿಂಗ್ ಕೂಡ ಬೇರೆಯದ್ದಾಗಿಯೇ ಮಾಡಿದ್ದೇವೆ. ಆಲೋಚನೆಯ ಕ್ರಮದಲ್ಲೂ ಬದಲಾಗಿದೆ. ಈ ಸಿನಿಮಾ ಅದ್ದೂರಿಯಾಗಿ ಮೂಡಿಬಂದಿದೆ. ಹೀಗಾಗಿ ಹೋಲಿಕೆ ಮಾಡಲಿಲ್ಲ.

** 'ಕರ್ವ' ಪಾರ್ಟ್-2ನಲ್ಲಿ ಇನ್ನೇನು ಹೊಸತನ ಇರಬಹುದು?*

ಮೊದಲ ಭಾಗವನ್ನು ನೋಡಿದವರು, ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಅಲ್ಲದೇ ನಿಜವಾಗಿಯೂ ದೆವ್ವ ಇದೆಯಾ? ಅಂತಾನೂ ಕೇಳಿದ್ದಾರೆ. ಈ ಎಲ್ಲದಕ್ಕೂ ಉತ್ತರ ಮುಂದಿನ ಸಿನಿಮಾದಲ್ಲಿ ಇರಲಿದೆ. ಹಾಗಂತ ನಾವು ಪ್ರೇಕ್ಷಕರನ್ನು ಮಿಸ್‌ಗೈಡ್ ಮಾಡಲು ಹೋಗುವುದಿಲ್ಲ.

** ಮೂರ್‍ನಾಲ್ಕು ಭಾಷೆಗಳಲ್ಲಿ ರೀಮೇಕ್ ಮಾಡುತ್ತೀರಿ ಅನ್ನುವ ಮಾತಿತ್ತು? ಅದು ಯಾವಾಗ?*

ತೆಲುಗು, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ಈ ಸಿನಿಮಾವನ್ನು ತೋರಿಸಬೇಕು ಅಂತಿದೆ. ಅದಕ್ಕೆ ಸಿದ್ಧತೆ ಕೂಡ ನಡೆದಿದೆ. ಇದು ಎಲ್ಲಾ ಭಾಷೆಗೂ ಸಲ್ಲುವ ಸಿನಿಮಾ. ಹೀಗಾಗಿ ಮುಂದಿನ ದಿನಗಳಲ್ಲಿ ಬೇರೆ ಭಾಷೆಗೂ ಈ ಚಿತ್ರ ಹೋಗಲಿದೆ.



** ಸಿನಿಮಾ ಗೆಲ್ಲಲು ಯಾವ ಯಾವ ಅಂಶಗಳು ಕಾರಣ ಆಗಿರಬಹುದು?*

ಇದು ಇಡೀ ತಂಡದ ಗೆಲವು. ಕಲಾವಿದರು, ತಂತ್ರಜ್ಞರು ನಿರೀಕ್ಷೆ ಮೀರಿ ಕೆಲಸ ಮಾಡಿದ್ದಾರೆ. ಕತೆಗೆ ಏನೆಲ್ಲ ಬೇಕಿತ್ತೋ ಎಲ್ಲವನ್ನೂ ನಿರ್ಮಾಪಕ ಕೃಷ್ಣ ಚೈತನ್ಯ ಒದಗಿಸಿದ್ದಾರೆ. ರೋಹಿತ್, ತಿಲಕ್, ಅನು, ಪೂಜಾ ಎಲ್ಲರೂ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಈ ಎಲ್ಲರ ಪರಿಶ್ರಮದಿಂದಾಗಿ ಸಿನಿಮಾ ಗೆದ್ದಿದೆ.

** ದೆವ್ವ ಇದೆ ಅಂತೀರಾ? ಅಥವಾ ಅದೊಂದು ಭ್ರಮೆ ಅನ್ನುತ್ತೀರಾ?*

ನಾನು ಈಗ ಏನೇ ಹೇಳಿದರೂ, ನನ್ನ ಮುಂದಿನ ಸಿನಿಮಾದ ಮೇಲೆ ಅದು ಪರಿಣಾಮ ಬೀರಲಿದೆ. ಹೀಗಾಗಿ ಈ ಉತ್ತರವನ್ನು ಮುಂದಿನ ಭಾಗದಲ್ಲಿ ಹೇಳುತ್ತಿದ್ದೇನೆ. ಹಾಗಂತ ಮೂಢನಂಬಿಕೆಯನ್ನು ಬಿತ್ತಲು ಹೋಗುವುದಿಲ್ಲ.

** ಮೊನ್ನೆಯಷ್ಟೇ ಸಿಲೆಬ್ರಿಟಿಗಳಿಗೆ ಸಿನಿಮಾ ತೋರಿಸಿದ್ದೀರಿ. ಅವರ ಪ್ರತಿಕ್ರಿಯೆ ಹೇಗಿತ್ತು?*

ಯಶ್, ಪ್ರೇಮ್, ಶ್ರೀಮುರುಳಿ ಸೇರಿದಂತೆ ಸಾಕಷ್ಟು ಕಲಾವಿದರು ಮತ್ತು ತಂತ್ರಜ್ಞರು ಸಿನಿಮಾ ನೋಡಿದರು. ಉತ್ತಮ ಚಿತ್ರ ಮಾಡಿದ್ದೀರಿ ಅಂತ ಬೆನ್ನುತಟ್ಟಿದ್ದಾರೆ. ಅವರ ಮಾತುಗಳು ನನ್ನನ್ನು ಪ್ರೇರೇಪಿಸಿವೆ. ಇನ್ನಷ್ಟು ಉತ್ತಮ ಚಿತ್ರಗಳನ್ನು ಕೊಡುವತ್ತ ಯೋಚಿಸುತ್ತೇನೆ. ●

15⇦ ನಾಚಪ್ಪನ ಐಲು

ಬದಲಿಸಲೇಬೇಕು ಮತ್ತು ಕೊಡವ ವ್ಯಕ್ತಿಯೊಬ್ಬರನ್ನು ಶಾಸಕರಾಗಿಸಬೇಕು ಎಂಬ ಭಾವನೆ ಅವರಲ್ಲಿ ಇದೆ. ಇದಕ್ಕೆ ಪೂರಕವಾಗಿ ಸಂಘ ಪರಿವಾರವು ಬೋಪಯ್ಯನವರ ಬಗ್ಗೆ ಅಸಮಾಧಾನವನ್ನು ಹೊಂದಿದೆ. ಇದರ ರಿಂಗ್‌ಲೀಡರ್ ಸಂಸದ ಪ್ರತಾಪ ಸಿಂಹ. ಕೊಡಗಿನ ಮಟ್ಟಿಗೆ ಗೌಡ ಜನಾಂಗದ ಮೇಲೆ ತನ್ನ ಪಾರುಪತ್ಯೆಯನ್ನು ಇಟ್ಟುಕೊಳ್ಳುವ ಯತ್ನ ಸಿಂಹನದ್ದು, ಜೊತೆಗೆ ಕೊಡಗು-ಮೈಸೂರು ಭಾಗದಲ್ಲಿ ಯಾವುದೇ ಬಿಜೆಪಿ ಶಾಸಕರೊಂದಿಗೆ ಉತ್ತಮ ಬಾಂಧವ್ಯ ಇಲ್ಲದ ಪ್ರತಾಪ ಸಿಂಹನಿಗೆ, ಮುಂದಿನ ಚುನಾವಣೆಯ ವೇಳೆಗೆ ತನ್ನ ಬಾಲಬಡುಕರಿಗೆ ಸ್ಥಾನ ಕಲ್ಪಿಸಬೇಕು ಎಂಬ ಉತ್ಸಾಹ. ಜೊತೆಗೆ ಕೊಡಗು ಜಿಲ್ಲೆಯನ್ನು ಕೋಮುವಾದಿ ಜಿಲ್ಲೆಯನ್ನಾಗಿಸಬೇಕು ಹಾಗೂ ಜಿಲ್ಲೆ ಸಂಪೂರ್ಣವಾಗಿ ತನ್ನ ಅಂಗೈಯಲ್ಲಿ ಇರಬೇಕು ಎಂದ ಹುನ್ನಾರ ಆತನದ್ದು.

ಇದರ ಒಂದು ಭಾಗವಾಗಿ ಕೊಡವ ಸಮಾಜಗಳು ಮತ್ತು ಫೆಡರೇಷನ್ ಆಫ್ ಕೊಡವ ಸಮಾಜಾಸ್‌ನವರು ಸಭೆಯೊಂದನ್ನು ನಡೆಸಿದರು. ಆ ಸಭೆಯ ಉದ್ದೇಶ ಇದ್ದದ್ದು ಕಲ್ಲು ಕೆಡವಿದ್ದರ ಬಗ್ಗೆ ವಿರೋಧ ವ್ಯಕ್ತಿಸುವುದಾಗಿತ್ತು, ಆದರೆ ಸಭೆಯ ಉದ್ದಕ್ಕೂ ಪರೋಕ್ಷವಾಗಿ ಕೆ.ಜಿ. ಬೋಪಯ್ಯನವರನ್ನು ಗುರಿಯಾಗಿಸಿ ಸೇರಿದವರೆಲ್ಲರೂ ಮಾತನಾಡಿದರಲ್ಲದೆ, ಈ ಎಲ್ಲಾ ಘಟನಾವಳಿಗಳಿಗೆ ಬೋಪಯ್ಯನವರೇ ಕಾರಣ ಎಂದು ಆರೋಪಿಸಿದರು. ಆದರೆ ಯಾರೂ ಎಲ್ಲಿಯೂ ಅವರ ಹೆಸರನ್ನು ನೇರವಾಗಿ ಪ್ರಸ್ತಾಪಿಸಲಿಲ್ಲ.

ಮಡಿಕೇರಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕವೊಂದನ್ನು ನಿರ್ಮಿಸಿದ ದಿನದಿಂದಲೇ ಬೋಪಯ್ಯನವರ ವಿರುದ್ಧ ಕತ್ತಿ ಮಸೆಯುವ ಕಾರ್ಯವನ್ನು ಮಾಡಲಾಗುತ್ತಿದೆ. ಹಾಗಾಗಿ, ಗುಡ್ಡೆಮನೆ ಅಪ್ಪಯ್ಯಗೌಡರು ಗಲ್ಲಿಗೇರಿಸಲ್ಪಟ್ಟದ್ದು ಸ್ವಾತಂತ್ರ್ಯ ಹೋರಾಟದ ಕಾರಣಕ್ಕಾಗಿ ಅಲ್ಲ, ಬದಲಿಗೆ ಅವರು ದರೋಡೆಯನ್ನು ಮಾಡಿದ್ದರು ಎಂಬ ಸಂದೇಶಗಳು ವಾಟ್ಸಪ್‌ನಲ್ಲಿ ಹರಿದಾಡಿದವು. ಒಟ್ಟಾರೆಯಾಗಿ ಈ ಕಾರ್ಯಕ್ರಮದಲ್ಲಿ ಎಲ್ಲದಕ್ಕೂ ಬೋಪಯ್ಯನವರನ್ನೇ ಕಾರಣೀಭೂತರನ್ನಾಗಿಸ ಲಾಯಿತು.

ಜೊತೆ ಬೋಪಯ್ಯನವರ ನೆರವಿನಿಂದ ನಾಚಪ್ಪ ತನ್ನ ಹೋರಾಟಗಳಿಗೆ ಬೆಂಬಲವನ್ನು ಕಂಡುಕೊಂಡಿದ್ದರೋ, ಆ ನಾಚಪ್ಪನ ಕೈಮೀರಿ ಈ ಸಭೆ ನಡೆದು ನಾಚಪ್ಪನವರ ವಿರುದ್ಧ ಹುಟ್ಟಿಕೊಂಡಿರುವ ಯುಕೋ ಎಂಬ ಸಂಘಟನೆಯ ಮೇಲುಗೈಯಾಯಿತು. ಕಾಂಗ್ರೆಸ್ ಪಕ್ಷದ ಸೃಷ್ಟಿಯಾದ ಯುಕೋ ಬಿಜೆಪಿಯ ವಿಚಾರದಲ್ಲಿ ತಲೆಹಾಕುವಂತೆ ಆಯಿತು. "ರಾಜ್ಯ ಸರಕಾರ ಸ್ಮಾರಕವನ್ನು ರಚಿಸಬೇಕು ಇಲ್ಲದಿದ್ದರೆ ಹೋರಾಟವನ್ನು ಮಾಡುತ್ತೇವೆ" ಎಂಬ ಘೋಷಣೆಯನ್ನೂ ಅಲ್ಲಿ ಕೂಗಲಾಯಿತು.

ಇದರ ವಿರುದ್ಧ ಮಾತನಾಡಿದ ಅರೆಭಾಷೆ ಗೌಡರು "'ದೇವಟ್‌ಪರಂಬು' ಎಂಬ ಪ್ರದೇಶವೇ ಇಲ್ಲ, ಈಗ ಕಲ್ಲು ಹಾಕಿದ ಜಾಗ ಕಂದಾಯ ದಾಖಲೆಯ ಪ್ರಕಾರ 'ಕಣಿಯಂಗೋಟು' ಎಂಬ ಪ್ರದೇಶ" ಎಂದು ಹೇಳಿದರಲ್ಲದೆ "ಅದು ಅರಣ್ಯ ಪ್ರದೇಶವಾಗಿದ್ದು ಯಾವುದೇ ಸ್ಮಾರಕವನ್ನು ಹಾಕಬಾರದು. ಒಂದುವೇಳೆ ಈ ಸಂಬಂಧ ಗೌಡ ಜನಾಂಗದವರ ವಿರುದ್ಧ ಪೊಲೀಸರು ಕಾರ್ಯಾಚರಣೆ ನಡೆಸಿದರೆ ಪ್ರತಿಭಟಿಸಲಾಗುವುದು" ಎಂಬ ಎಚ್ಚರಿಕೆಯನ್ನು ನೀಡಿದರು.

ಕೊಡಗಿನಲ್ಲಿ ಹಲವಾರು ಜ್ವಲಂತ ಸಮಸ್ಯೆಗಳು ಇವೆ. ಭೂಮಿಯ ಹಕ್ಕಿನ ಬಗ್ಗೆಯೇ ಗೊಂದಲವಿದೆ. ಕಸ್ತೂರಿರಂಗನ್ ವರದಿಯಿಂದ ಕೊಡಗಿನ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಅಸ್ತಿತ್ವಕ್ಕೆ ಗಂಡಾಂತರವಿದೆ. ಇಂತಹ ಯಾವುದೇ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳದ ಈ ಎರಡೂ ಪ್ರಮುಖ ಜನಾಂಗಗಳು, ಈಗ ಸುಮಾರು 200 ವರ್ಷಗಳ ಹಿಂದೆ ನಡೆಯಿತು ಎಂಬ ಊಹೆಯ ಆಧಾರದಲ್ಲಿ ಘರ್ಷಣೆಗೆ ಇಳಿದಿವೆ. ಕೊಡಗು ಜಿಲ್ಲೆಯ ಸ್ವಾಸ್ಥ್ಯವನ್ನು ಕೆಡಿಸುವಂತಹ ವಿಚಾರವಿದು. ರಾಜಕೀಯ ಪಕ್ಷಗಳು ಇದು ತಮಗೆ ಸಂಬಂಧಪಡದ ವಿಚಾರವೆಂಬಂತೆ ಸುಮ್ಮನಿವೆ. ಕೊಡಗಿನ ಮತ್ತೊರ್ವ ಪ್ರತಿಭಾವಂತ ರಾಜಕಾರಣಿ ಎಂದು ಅನಿಸಿಕೊಂಡಿರುವ ಎಂ.ಸಿ. ನಾಣಯ್ಯ ಎಂದಿನಂತೆ ಈ ಘಟನೆಯ ಬಗ್ಗೆಯೂ ದಿವ್ಯ ಮೌನವನ್ನು ವಹಿಸಿದ್ದಾರೆ. ಹಿಂದೆ ಜನತಾದಳದಲ್ಲಿ 'ತಟಸ್ಥ' ಎನಿಸಿಕೊಂಡಿದ್ದ ನಾಣಯ್ಯ ಈಗಲೂ ಆ ತಟಸ್ಥ ಧೋರಣೆಯಿಂದ ಹೊರಬಾರದಿರುವುದು ದುರಂತ.

● ಬಿ.ಎನ್. ಮನುಶೆಣೈ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 15-06-2016 RNI No. KARKAN2



ಕಲಿ ಡ್ರಾಪ್ ಆಯಿತು

ಸುದೀಪ್ ಮತ್ತು ಶಿವರಾಜ್‌ಕುಮಾರ್ ನಟನೆಯ 'ಕಲಿ' ಸಿನಿಮಾ ತೆರೆಯ ಮೇಲೆ ಮೂಡಿಬರುವುದು ಡೌಟು ಎನ್ನುವ ಮಾತಿತ್ತು, ಅದೀಗ ನಿಜವಾಗಿದೆ. 'ಕಲಿ' ಸಿನಿಮಾವನ್ನು ಕೈಬಿಟ್ಟಿರುವುದಾಗಿ ನಿರ್ಮಾಪಕ ಮನೋಹರ್ ಹೇಳಿದ್ದಾರೆ. ನಿರ್ಮಾಣ ಮಾಡದೇ ಇರುವುದಕ್ಕೆ ಅವರು ಕೊಟ್ಟಿರುವ ಕಾರಣ ತುಂಬಾ ಸಿಲ್ಲಿಯಾಗಿದೆ. "ಇದು ಐತಿಹಾಸಿಕ ಕಥಾಹಂದರದ ಚಿತ್ರ. ಅಲ್ಲದೇ ಇಬ್ಬರೂ ನಾಯಕರು ಬಿಜಿ ಆಗಿದ್ದಾರೆ. ಹೀಗಾಗಿ ಸದ್ಯ ಸಿನಿಮಾ ಮಾಡುವುದಕ್ಕೆ ಆಗುವುದಿಲ್ಲ. ಈ ಜೋಡಿಯ ಮತ್ತೊಂದು ಚಿತ್ರ ಮಾಡುತ್ತೇನೆ" ಅಂದಿದ್ದಾರೆ ಮನೋಹರ್. ಆದರೆ ನಿರ್ದೇಶಕ ಪ್ರೇಮ್ ಹೇಳುವುದೇ ಬೇರೆ. ಅವರ ಪ್ರಕಾರ ಯಾವ ಕಾರಣಕ್ಕೂ ಸಿನಿಮಾ ನಿಲ್ಲುವುದಿಲ್ಲವಂತೆ. ಸುದೀಪ್ ಮತ್ತು ಶಿವರಾಜ್‌ಕುಮಾರ್ ಒಟ್ಟಾಗಿ ಸಿಕ್ಕಿರುವುದರಿಂದ, ಈ ಪ್ರಾಜೆಕ್ಟ್ ಅನ್ನು ಮುಂದುವರೆಸುತ್ತಾರಂತೆ. ಇಬ್ಬರು ಸುಳ್ಳು ಹೇಳುತ್ತಿರುವುದು ಖಾತರಿ ಆಗಿದೆ. ಈ ಸಿನಿಮಾ ಶುರು ಮಾಡಿದ್ದೇ ನಿರ್ಮಾಪಕರಿಗೆ ಪ್ರಚಾರ ಸಿಗಲಿ ಅನ್ನುವ ಉದ್ದೇಶಕ್ಕೆ. ಎಂಎಲ್‌ಎ ಆಗುವ ಕನಸು ಹೊತ್ತಿದ್ದ ಮನೋಹರ್ ಚುನಾವಣೆ ವೇಳೆಯಲ್ಲಿ ತಮಗೆ ಪ್ರಚಾರ ಸಿಗಲಿ ಅಂತ ಇಬ್ಬರು ನಾಯಕರನ್ನು ಬಳಸಿಕೊಂಡರು. ಈ ಜೋಡಿ ಇದೆ ಅಂತಾನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿತ್ರದ ಟೈಟಲ್ ಲಾಂಚ್‌ಗೆ ಬಂದು ಶುಭ ಹಾರೈಸಿದ್ದರು.

ಬದಲಾದ ರವಿಮಾಮ

ಕಳೆದ ವಾರವಷ್ಟೇ ರವಿಚಂದ್ರನ್ ನಟನೆಯ 'ಅಪೂರ್ವ' ಸಿನಿಮಾ ರಿಲೀಸ್ ಆಗಿತ್ತು. ಈ ಚಿತ್ರದ ಕುರಿತು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಅದರಲ್ಲೂ ಸಾಮಾಜಿಕ ಜಾಲತಾಣದಲ್ಲಿ ಪ್ರೇಕ್ಷಕರು ಚಿತ್ರದ ಬಗ್ಗೆ ಹಿಗ್ಗಾಮುಗ್ಗಾ ಬೈದಿದ್ದರು. ಈಗ ಪ್ರೇಕ್ಷಕರ ಅಭಿಪ್ರಾಯಕ್ಕೆ ತಲೆಬಾಗಿದ್ದಾರೆ ರವಿಚಂದ್ರನ್. ಹೀಗಾಗಿ 'ಅಪೂರ್ವ' ಸಿನಿಮಾವನ್ನು ಟ್ರಿಮ್ ಮಾಡಿ ಮರುಬಿಡುಗಡೆ ಮಾಡುತ್ತಾರಂತೆ. ಈ ಚಿತ್ರದ ಬಗ್ಗೆ ಸಾಕಷ್ಟು ಕನಸು ಕಟ್ಟಿಕೊಂಡಿದ್ದರು ಕ್ರೇಜಿಸ್ಟಾರ್. "ನೂರು ಕೋಟಿ ಕ್ಲಬ್‌ಗೆ 'ಅಪೂರ್ವ' ಸೇರಲಿದೆ" ಅನ್ನುವ ಮಾತುಗಳನ್ನೂ ಅವರು ಆಡಿದ್ದರು. ಆದರೆ ಅವರ ಕನಸು ನನಸಾಗುವುದು ಡೌಟು ಎನ್ನುತ್ತಿದೆ ಬಾಕ್ಸ್ ಆಫೀಸ್. ರವಿಚಂದ್ರನ್ ಅವರ ರೆಗ್ಯುಲರ್ ಸಿನಿಮಾದಂತೆ ಈ ಚಿತ್ರ ಇಲ್ಲದೇ ಇದ್ದರೂ, ಸಾಮಾನ್ಯ ನೋಡುಗನಿಗೆ ಅರ್ಥವಾಗದಂತೆ ಚಿತ್ರ ಮೂಡಿಬಂದಿದೆ. ಅಲ್ಲದೇ ಇತ್ತ ಕಲಾತ್ಮಕ ಸಿನಿಮಾದಂತೆಯೂ ಇರದೇ, ಅತ್ತ ಕಮರ್ಷಿಯಲ್ ಚಿತ್ರದಂತೆಯೂ ಕಾಣದೇ ಹೊಸ ಝೋನರ್‌ನ ಸಿನಿಮಾ ಮಾಡಿದ್ದಾರೆ. ಹೀಗಾಗಿ 'ಅಪೂರ್ವ' ಪ್ರೇಕ್ಷಕರಿಗೆ ರುಚಿಸುತ್ತಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ವಿರುದ್ಧದ ವಿಮರ್ಶೆಗಳು ಮುಗಿಬೀಳುತ್ತಿದ್ದಂತೆಯೇ ಮತ್ತೆ ಎಡಿಟಿಂಗ್ ಟೇಬಲ್ ಮುಂದೆ ಕೂತಿದ್ದಾರೆ ನಿರ್ದೇಶಕ ರವಿಚಂದ್ರನ್. ಏನೇ ಆದರೂ ನೂರು ಕೋಟಿ ಗಳಿಸುವ ಛಲ ಮಾತ್ರ ಅವರನ್ನು ಬಿಟ್ಟಂತೆ ಕಾಣುತ್ತಿಲ್ಲ.

ದರ್ಶನ್‌ಗಾಗಿ ಬಂದ ದೀಪಾ

ಚಿಂತನ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ, ದರ್ಶನ್ ನಟನೆಯ 'ಚಕ್ರವರ್ತಿ' ಚಿತ್ರಕ್ಕೆ ಅಂಜಲಿ ನಾಯಕಿಯಾಗಿ ಆಯ್ಕೆಯಾಗಿದ್ದರು. ಆದರೆ ಇವರು ಮೊನ್ನೆಯಷ್ಟೇ ಈ ಸಿನಿಮಾದಿಂದ ಔಟ್ ಆಗಿದ್ದಾರೆ. ಆ ಜಾಗಕ್ಕೆ ದೀಪಾ ಸನ್ನಿಧಿಯನ್ನು ಕರೆತರಲಾಗಿದೆ. ದರ್ಶನ್ ಅವರ 'ಸಾರಥಿ' ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಎಂಟ್ರಿ ಕೊಟ್ಟವರು ದೀಪಾ. ಆ ಚಿತ್ರ ದೀಪಾ ಅವರಿಗೆ ದೊಡ್ಡ ಬ್ರೇಕ್ ನೀಡಿತ್ತು. ಆನಂತರ ದೀಪಾ ಕನ್ನಡದ ಬಹುತೇಕ ಸ್ಟಾರ್ ನಟರುಗಳ ಜೊತೆ ತೆರೆ ಹಂಚಿಕೊಂಡರೂ, ಹೇಳಿಕೊಳ್ಳುವಂತಹ ಆಫರ್ಸ್ ಬರಲಿಲ್ಲ. ಹೀಗಾಗಿ ತಮಿಳಿನತ್ತ ಮುಖ ಮಾಡಿದ್ದರು. ಎರಡು ವರ್ಷಗಳ ನಂತರ ಮತ್ತೆ ಕನ್ನಡ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಅಂದಹಾಗೆ ಈ ಸಿನಿಮಾದಲ್ಲಿ ದೀಪಾ ಎರಡು ಶೇಡ್ ಪಾತ್ರ ನಿರ್ವಹಿಸುತ್ತಿದ್ದಾರೆ. ಎರಡೂ ಶೇಡ್ ಪಾತ್ರಗಳ ನಡುವೆ ವಯಸ್ಸಿನ ಅಂತರ ಕೂಡ ಇದೆಯಂತೆ. ಹೀಗಾಗಿಯೇ ಕನ್ನಡದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರಂತೆ ದೀಪಾ. ತಮಿಳಿನಲ್ಲಿ ಪ್ರಯೋಗಾತ್ಮಕ ಸಿನಿಮಾಗಳಲ್ಲಿ ಕಾಣಿಸಿಕೊಂಡು ಭರವಸೆ ಮೂಡಿಸಿದ್ದ ದೀಪಾ, ಈಗ ಮತ್ತೆ ದರ್ಶನ್ ನಟನೆಯ ಕಮರ್ಷಿಯಲ್ ಚಿತ್ರ ಒಪ್ಪಿಕೊಂಡು ಅಚ್ಚರಿ ಮೂಡಿಸಿದ್ದಾರೆ. ಈ ಚಿತ್ರ ಇವರನ್ನು ಮತ್ತೆ ಖಾಲಿ ಕೂಡಿಸದಿರಲಿ.




ರಮೇಶ್‌ರ ವಿಮಾನ ರೆಡಿ



ರಮೇಶ್ ಅರವಿಂದ್ ಅವರ ನೂರನೇ ಚಿತ್ರ 'ಪುಷ್ಪಕ ವಿಮಾನ' ಬಹುತೇಕ ಶೂಟಿಂಗ್ ಮುಗಿಸಿದೆ. ಹೀಗಾಗಿ ಅತೀ ಶೀಘ್ರದಲ್ಲೇ ತೆರೆಯ ಮೇಲೆ ವಿಮಾನ ಹಾರಿಸಲು ಸಜ್ಜಾಗಿದೆ ಚಿತ್ರತಂಡ. ಹಿಂದೆ ಕಮಲ್ ಹಾಸನ್ ಅಭಿನಯದ 'ಪುಷ್ಪಕ ವಿಮಾನ' ಸಿನಿಮಾ ತೆರೆಗೆ ಬಂದಿತ್ತು ಈಗ ಅದೇ ಶೀರ್ಷಿಕೆಯ ಮುಖಾಂತರ ಚರಿತ್ರೆ ಮತ್ತೆ ಮರುಕಳಿಸುತ್ತಿದೆ. ಅಂದು ಬಂದಿದ್ದು ಮೌನ ತುಂಬಿದ 'ಪುಷ್ಪಕ ವಿಮಾನ'ವಾದರೆ, ಈ ಬಾರಿಯ 'ಪುಷ್ಪಕ ವಿಮಾನ' ಭರಪೂರ ಭಾವನೆಗಳನ್ನು ಹೊತ್ತುತರುತ್ತ... ತಂದೆ ಮತ್ತು ಮಗಳ ಬಾಂಧವ್ಯವೇ ಈ ಚಿತ್ರದ ಕೇಂದ್ರಬಿಂದು. ... ದಿವಸಗಳ ಕಾಲ ಬೆಂಗಳೂರು, ಮಂಗಳೂರು ಸ್ಥಳಗಳಲ್ಲಿ ಚಿತ್ರೀಕರಿಸಲಾಗಿ... ಫೋಟೋಗ್ರಫಿಯಲ್ಲಿ ಸಾಕಷ್ಟು ಹೆಸರು ಮಾಡಿರುವ ಭುವನ್ ಗೌಡ ... ಛಾಯಾಗ್ರಹಣ ಮಾಡಿದ್ದಾರೆ. ಈಗಾಗಲೇ ಜನ ಪ್ರಿಯತೆ ಪಡೆದಿರುವ ... ಟ್ರೈಲರ್ ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆ ಯನ್ನು ಹುಟ್ಟುಹಾಕಿದೆ. ... ಅರವಿಂದ್ ಅವರೊಟ್ಟಿಗೆ ಪುಟ್ಟ ಮಗಳಾಗಿ ಬಾಲ ಕಲಾವಿದೆ ಯುವಿನ ... ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಸುಪ್ರಸಿದ್ಧ ನಟಿಯರಾದ ಜೂಹಿ... ಹಾಗೂ ರಚಿತಾ ರಾಮ್ ಅಲ್ಲದೆ ರವಿ ಕಾಳೆ, ಮನದೀಪ್‌ರಾಯ್ ಮುಂ... ತಾರಾಗಣದಲ್ಲಿ ಇದ್ದಾರೆ.

ಮಿಸ್ಸಿಂಗ್ ಗುರು



'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಈ ಬಾರಿ ಅವರು 'ಮಿಸ್ಸಿಂಗ್ ಬಾಯ್' ಆಗಿ ಕಾಣಿಸಿ ಕೊಳ್ಳುತ್ತಿದ್ದಾರೆ. ಇದು ನೈಜ ಘಟನೆಯನ್ನು ಆಧರಿಸಿದ ಚಿತ್ರ ಅನ್ನುವುದು ಮತ್ತೊಂದು ವಿಶೇಷ. ಬಾಲಕೃಷ್ಣ ಕಾಕತ್ಕರ್ ನಿರ್ದೇಶನದಲ್ಲಿ ಮೂಡಿಬರುತ್ತಿದ್ದ ಕ್ರೈಂ ಸ್ಟೋರಿಯಲ್ಲಿ ಈ ಕತೆ ಪ್ರಸಾರಗೊಂಡಿತ್ತು. ಅದಕ್ಕೆ ಸಿನಿಮಾ ಸ್ಪರ್ಶ ಕೊಡುತ್ತಿದ್ದಾರೆ ರಘುರಾಮ್. ಹುಬ್ಬಳ್ಳಿ ಮೂಲದ ಹುಡುಗನ ಕತೆ ಇದಾಗಿದ್ದರಿಂದ, ಘಟನೆ ನಡೆದ ಸ್ಥಳಗಳಿಗೆ ಹೋಗಿ ಶೂಟ್ ಮಾಡುವ ಪ್ಲಾನ್ ನಿರ್ದೇಶಕರದ್ದು. ಈ ಕತೆಯನ್ನು ನಿರ್ದೇಶಕರಿಗೆ ರೆಫರ್ ಮಾಡಿದ್ದೇ ಗುರುನಂದನ್ ಅಂತೆ. ಹೀಗಾಗಿ ಚಿತ್ರಕತೆ ಹೆಣೆಯುವ ಕಾರ್ಯ ಭ... ನಡೆದಿದೆ. ಈ ಸಿನಿಮಾ ಮುಗಿಯುತ್ತಿದ್ದಂತೆಯೇ 'ಫಸ್ಟ್ ರ್‍ಯಾಂಕ್ ... ತಂಡವೇ ಮತ್ತೊಂದು ಸಿನಿಮಾ ಮಾಡಲಿದೆ. ಆ ಚಿತ್ರದಲ್ಲೂ ಗುರು... ಪಾತ್ರ ಮಾಡಲಿದ್ದಾರೆ. ಅಂದಹಾಗೆ ಗುರು ಸದ್ಯ ಕೆ.ಮಂಜು ನಿ... ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈಗಷ್ಟೇ ಮಾತಿನ ಭಾಗದ ಚಿ... ಮುಗಿದಿದ್ದು ಮುಂದಿನ ವಾರದಿಂದ ಹಾಡುಗಳ ಶೂಟಿಂಗ್ ನಡೆಯಲಿದ... ಈ ಚಿತ್ರದ ಶೂಟಿಂಗ್ ಕಂಪ್ಲೀಟ್ ಮಾಡಿಯೇ 'ಮಿಸ್ಸಿಂಗ್ ಬ... ಸಿನಿಮಾಗೆ ಡೇಟ್ ಕೊಡಲಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com